ಇತಿಹಾಸ ದರ್ಶನ

ಸಂಪುಟ ೨/ಸಂಚಿಕೆ ೧

೧೯೮೭

KARNATAKA ITIHASA ACADEMY

कर्नाटक इतिहास अकादमी

ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು

ಇತಿಹಾಸ ದರ್ಶನ

ಸಂಪುಟ ೨/ಸಂಚಿಕೆ ೧

೧೯೮೭

ಪ್ರಥಮ ವಾರ್ಷಿಕ ಸಮ್ಮೇಳನದ ವಿಶೇಷ ಸಂಚಿಕೆ

ಸಂಪಾದಕರು
ಡಾ॥ ಸೂರ್ಯನಾಥ ಯು. ಕಾಮತ್
ಲಕ್ಷ್ಮಣ್ ತೆಲಗಾವಿ

ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು

ITIHASA DARSHANA
A Special Number released on the occasion of the First Annual Conference of the
Karnataka Itihasa Academy
'Ranganatha Nilaya'
No. 13 (Old No. 4), 15th Cross
New Temple Road, Malleswaram
Bangalore 560 003

Vol. 2, No. 1 : May 1987
Edited by Dr. Suryanath U. Kamath
& Laxman Telagavi

(for private circulation only)

ರೂ. ೧೦-೦೦

ಲಕ್ಷ್ಮೀ ಮುದ್ರಣ
ನಂ. ೧೬೬, ೭ನೇ ಕ್ರಾಸ್, ೪ನೇ ಮೇನ್
ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮

ಸಂಪಾದಕೀಯ

'ಇತಿಹಾಸ ದರ್ಶನ'ದ ಪ್ರಥಮ ಸಂಚಿಕೆ ಬಿಡುಗಡೆ ಮಾಡಿದ (೧೪-೧೨-೮೬) ಆರೇ ತಿಂಗಳಿನಲ್ಲಿ ಇನ್ನೊಂದು ಸಂಚಿಕೆ ಹೊರತರುತ್ತಿರುವುದು ನಮಗೆ ಹೆಮ್ಮೆಯನ್ನು ತಂದಿದೆ. ಅಕಾದೆಮಿಯನ್ನು ಉದ್ಘಾಟಿಸಿದಾಗ ವಾರ್ಷಿಕ ಸಮ್ಮೇಳನವನ್ನು ನಡೆಸುವ ಆಶೆಹೊತ್ತ ನಾವು ಅದನ್ನು ನೆರವೇರಿಸುತ್ತಿದ್ದೇವೆ. ವಿಶೇಷ ಶ್ರಮವಿಲ್ಲದೆ ಅಕಾದೆಮಿಯ ಸದಸ್ಯ ಸಂಪದ ೨೦೦ನ್ನು ದಾಟಿದೆ. ಸಮ್ಮೇಳನದಲ್ಲಿ ಮಂಡಿಸಲಾದ ಲೇಖನಗಳ ಮೂರನೆಯ ಸಂಚಿಕೆಯನ್ನು ಈ ವರ್ಷದೊಳಗಾಗಿ ಪ್ರಕಟಿಸುವ ಆಶೆ ಇದೆ.

ಕರ್ನಾಟಕದ ಇತಿಹಾಸ, ಸಂಸ್ಕೃತಿಯ ಬಗೆಗೆ ಅಧ್ಯಯನ ನಡೆಸುವ ಎಲ್ಲ ಉತ್ಸಾಹಿಗಳಿಗೂ ತೆರೆದಿರುವ ವೇದಿಕೆ ಅಕಾದೆಮಿ. ಹೀಗಾಗಿ ಸಮ್ಮೇಳನದ ಪ್ರಥಮಾಧ್ಯಕ್ಷರಾಗಿ ಇತಿಹಾಸ ಅಧ್ಯಾಪಕರಲ್ಲದವರನ್ನು ಆಯ್ಕೆ ಮಾಡಿದೆವು. ಡಾ॥ ಎಂ. ಚಿದಾನಂದಮೂರ್ತಿ ಅವರು ಕರ್ನಾಟಕದ ಇತಿಹಾಸ, ಸಂಸ್ಕೃತಿಗಳ ಅಧ್ಯಯನಕ್ಕೆ ನೀಡಿದ ಕೊಡುಗೆ ಗಣನೀಯ. ತಮ್ಮ ಗುರುಗಳಾಗಿದ್ದ ಆಚಾರ್ಯ ತೀ.ನಂ.ಶ್ರೀ, ಡಿ.ಎಲ್.ಎನ್. ಅವರುಗಳು ಕನ್ನಡ ಅಧ್ಯಾಪಕರಾಗಿದ್ದೂ ಈ ದಿಸೆಯಲ್ಲಿ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅವರು ಮುಂದುವರಿಸಿಕೊಂಡು ಬಂದಿದ್ದಾರೆ. 'ಇತಿಹಾಸ ದರ್ಶನ'ವೂ ಅವರನ್ನು ಈ ಬಗೆಗೆ ಅಭಿನಂದಿಸುತ್ತದೆ.

ಕರ್ನಾಟಕದ ಇತಿಹಾಸದ ಬಗೆಗೆ ಆಗುತ್ತಿರುವ ಸಂಶೋಧನೆಯ ವಿವಿಧ ಮುಖಗಳ ಪರಿಚಯ 'ಇತಿಹಾಸ ದರ್ಶನ'ದ ಲೇಖನಗಳಿಂದ ಆಗದೇ ಇರಲಾರದು. ಶೀಘ್ರವೇ ಈ ನಿಯತಕಾಲಿಕವು ಇತಿಹಾಸ ಸಂಶೋಧಕರ ಒಂದು ಮುಖಪತ್ರವೇ ಆಗಬಹುದು. ಪ್ರಥಮ ಸಂಚಿಕೆಯನ್ನು ಕಂಡ ಮಿತ್ರರೂ ವಿದ್ವಾಂಸರೂ ಈ ಆಶಯವನ್ನು ಆಗಲೇ ವ್ಯಕ್ತಪಡಿಸಿದ್ದಾರೆ. ಇದರ ಸುಧಾರಣೆಗೆ ಸೂಕ್ತ ಸಲಹೆ, ಸೂಚನೆಗಳನ್ನು ನೀಡುವವರಿಗೆ ಸದಾ ಸ್ವಾಗತ. ನವಶೋಧನೆಗಳಿಗೆ ಸಂಬಂಧಿಸಿದ ಸುದ್ದಿಗಳನ್ನು ಕ್ರೋಢೀಕರಿಸುವ ಯತ್ನವನ್ನೂ ಮುಂದೆ ಮಾಡಬೇಕೆಂದು ಇದ್ದೇವೆ.

ಸಂಚಿಕೆಯ ಪ್ರಕಟಣೆಗೆ ನೆರವಾದ ಎಲ್ಲ ಜಾಹೀರಾತುದಾರರಿಗೆ ಅಕಾದೆಮಿಯ ಪರವಾಗಿ ಕೃತಜ್ಞತೆಗಳು.

೧೫-೫-೧೯೮೭ ಸಂಪಾದಕರು

ಕರ್ನಾಟಕ ಇತಿಹಾಸ ಅಕಾದೆಮಿ

ಬೆಂಗಳೂರು

ಕಾರ್ಯಕಾರಿ ಸಮಿತಿ

ಪರಿವಿಡಿ

ಲೇಖಕರ ವಿಳಾಸಗಳು

ಡಾ॥ ಬಿ. ವ್ಹಿ. ಶಿರೂರ

ರೀಡರ್, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩

ಡಾ॥ ಶ್ರೀನಿವಾಸ ಹಾವನೂರ

ಪ್ರಾಧ್ಯಾಪಕರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ವಿದ್ಯಾಗಿರಿ, ಮುಂಬಯಿ

ಡಾ॥ ಜಿ. ಎಸ್. ದೀಕ್ಷಿತ್

ಇತಿಹಾಸ ಪ್ರಾಧ್ಯಾಪಕರು (ನಿವೃತ್ತ), ಬಿ-೧, ಕೈಲಾಸ್ ಅಪಾರ್ಟ್‌ಮೆಂಟ್
೮ನೇ ತಿರುವು, ೮ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು ೫೬೦ ೦೦೩

ಡಾ॥ ಎಸ್. ರಾಜಶೇಖರ

ರೀಡರ್, ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩

ಕೆ. ಜಗನ್ನಾಥ ಶಾಸ್ತ್ರಿ

ಪ್ರಿನ್ಸಿಪಾಲರು, ಸರ್ಕಾರಿ ಪದವಿಪೂರ್ವ ಕಾಲೇಜು, ಹೊಳೆಹೊನ್ನೂರು, ಶಿವಮೊಗ್ಗ ಜಿಲ್ಲೆ

ಡಾ॥ ಬಿ. ವಸಂತ ಶೆಟ್ಟಿ

ರೀಡರ್ ಮತ್ತು ಮುಖ್ಯಸ್ಥರು, ಇತಿಹಾಸ ಹಾಗೂ ಪುರಾತತ್ತ್ವ ವಿಭಾಗ
ಎಸ್.ಎಂ.ಎಸ್. ಕಾಲೇಜು, ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲೆ

ಡಾ॥ ಎ. ವಿ. ನರಸಿಂಹಮೂರ್ತಿ

ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ,
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಸೀತಾರಾಮ ಜಾಗೀರ್‌ದಾರ್

ಶಾಸನತಜ್ಞರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಡಾ॥ ಕೆ. ಜಿ. ವಸಂತ ಮಾಧವ

ರೀಡರ್, ಇತಿಹಾಸ ವಿಭಾಗ, ವಿಜಯಾ ಕಾಲೇಜು, ಮೂಲ್ಕಿ (ದಕ್ಷಿಣಕನ್ನಡ) ೫೭೪ ೧೫೪

ಡಾ॥ ಕೆ. ಎನ್. ಚಿಟ್ನಿಸ್

ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಪುಣೆ ವಿಶ್ವವಿದ್ಯಾಲಯ, ಪುಣೆ

ಎಚ್. ಎಸ್. ಗೋಪಾಲರಾಯ

೩೧, ೫ನೇ ಮುಖ್ಯ ರಸ್ತೆ, ೩ನೇ ತಿರುವು, ಸಿ.ಪಿ.ವಿ. ಬ್ಲಾಕ್
ರಾಜಾಜಿನಗರ, ಬೆಂಗಳೂರು ೫೬೦ ೦೧೦

ಎಚ್. ಶ್ರೀಶೈಲ ಆರಾಧ್ಯ

ರೀಡರ್, ಕನ್ನಡ ವಿಭಾಗ, ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ ೫೭೭ ೫೦೧

ಡಾ॥ ಸೂರ್ಯನಾಥ ಕಾಮತ್

ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ
೮ನೇ ಮಹಡಿ (ಜಲಮಂಡಳಿ ಕಟ್ಟಡ), ಕಾವೇರಿ ಭವನ, ಬೆಂಗಳೂರು ೫೬೦ ೦೦೯

ಡಾ॥ ಬಿ. ವ್ಹಿ. ಶಿರೂರ

ಕೊಪಣನಗರ : ಒಂದು ಐತಿಹಾಸಿಕ ಕೇಂದ್ರ

ಹನಿಹನಿ ಕೂಡಿ ಹಳ್ಳವಾಗುವಂತೆ, ಗ್ರಾಮಗ್ರಾಮಗಳ ಚರಿತ್ರೆಯೆಲ್ಲ ಸೇರಿ ನಾಡ ಇತಿಹಾಸವಾಗುತ್ತದೆ. ಚರಿತ್ರಾತ್ಮಕ ವ್ಯಕ್ತಿಗಳನ್ನು ರೂಪಿಸುವಲ್ಲಿ, ಅವರಿಗೆ ತಕ್ಕ ಪರಿಸರವನ್ನು ಕಲ್ಪಿಸುವಲ್ಲಿ ಈ ಗ್ರಾಮಗಳು ಪ್ರಮುಖ ಪಾತ್ರ ವಹಿಸುತ್ತವೆ. ಕನ್ನಡನಾಡಿನ ಇತಿಹಾಸದ ಪುಟಗಳನ್ನು ತಿರುವಿದಾಗ ಇಂತಹ ಹಲವು ಹತ್ತು ಗ್ರಾಮಗಳ ಉಲ್ಲೇಖ ದೊರೆಯುತ್ತವೆ. ಅವುಗಳಲ್ಲಿ ಪ್ರಮುಖವಾದುದು ಕೊಪಣನಗರ ಎಂದು ಪ್ರಸಿದ್ಧಿ ಪಡೆದಿದ್ದ ಈಗಿನ ಕೊಪ್ಪಳ. ಪ್ರಾಚೀನ ಕಾಲದಲ್ಲಿ ಬೌದ್ಧ, ಜೈನಧರ್ಮಗಳ ವಾಸಸ್ಥಳವಾಗಿದ್ದು, ತರುವಾಯ ಶೈವ, ವೀರಶೈವ ಧರ್ಮಗಳಿಗೆ ಭೀಮಬಲವಾಗಿ ನಿಂತ ಈ ಸ್ಥಳ ಕ್ರಿ. ಪೂ. ೩ನೆಯ ಶತಮಾನದಷ್ಟು ಪ್ರಾಚೀನ. ಆಗಾಗ ರಾಜಕೀಯ ಮಹತಿಯನ್ನು ಪಡೆದು ರಾಜರ ಮಹತ್ವಾಕಾಂಕ್ಷೆಯ ತುಳಿತಕ್ಕೂ ಸಿಕ್ಕಿ, ಹಲವಾರು ಏಳುಬೀಳುಗಳನ್ನೂ ಕಂಡಿದೆ ಈ ಸ್ಥಳ.

ರಾಜಕೀಯವಾಗಿ 'ದಕ್ಷಿಣದ ಮಹಾದ್ವಾರ' ಎಂದು ಪ್ರಸಿದ್ಧಿ ಪಡೆದಿದ್ದ ಈ ಸ್ಥಳ ರಾಯಚೂರು ಜಿಲ್ಲೆಯ ಪ್ರಮುಖ ಪಟ್ಟಣ. ಪುರಾಣಕಾಲದಿಂದಲೂ ಹಲವಾರು ವದಂತಿಗಳನ್ನು ತನ್ನ ಚರಿತ್ರೆಯೊಂದಿಗೆ ಹೊತ್ತು ನಿಂತಿದೆ. ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯಲು ತಪಸ್ಸು ಮಾಡಿದ ಇಂದ್ರಕೀಲಪರ್ವತ ಇಲ್ಲಿಯ ಪರ್ವತ ಸಾಲುಗಳಲ್ಲಿ ಒಂದು. ಅವನು ಮಳಲಲಿಂಗವನ್ನು ಪೂಜಿಸಲು ಈಶ್ವರನು ಪ್ರತ್ಯಕ್ಷವಾದ ಸ್ಥಳ ಇಂದಿನ ಮಳೆಯ ಮಲ್ಲೇಶ್ವರ. ಪಾಂಡವರು ಇಲ್ಲಿ ಬೀಡಾರ ಮಾಡಿದ್ದರು ಎಂದು, 'ಪಾಂಡವರ ವಠಾರ' ಎಂಬ ಸ್ಥಳವನ್ನು ಇಂದಿಗೂ ತೋರಲಾಗುತ್ತಿದೆ.

ಪುರಾಣಗಳ ಕಲ್ಪನಾಲೋಕ ಬಿಟ್ಟು ಐತಿಹ್ಯಗಳ ನಿಜ ಲೋಕಕ್ಕೆ ಬಂದರೆ, ಇಲ್ಲಿ ದೊರೆತ ತಲೆಬುರುಡೆ, ಮಣ್ಣಿನ ಪಾತ್ರೆ, ಆಯುಧ ವಿಶೇಷ ಮೊದಲಾದುವು ಈ ಸ್ಥಳ ಪ್ರಾಚೀನ ಕಾಲದಿಂದ ಮಾನವರ ವಾಸಸ್ಥಳವಾಗಿತ್ತೆಂಬುದಕ್ಕೆ ಸಾಕ್ಷಿ ಹೇಳುತ್ತಿವೆ. ಇಲ್ಲಿಯ ಸುಪ್ರಸಿದ್ಧ ಗವಿಸಿದ್ಧೇಶ್ವರ ಮಠದ ಮೇಲಿನ ಗುಹೆಗಳಲ್ಲಿ ಶಿಲಾಯುಗದ ಆದಿಮಾನವನ ವರ್ಣರಂಜಿತ ಚಿತ್ರಗಳೂ ದೊರೆತಿವೆ. ಮೋರೇರ ಅಂಗಡಿ, ಮೋರೇರ ಅಗಸಿ, ಮಿಂಚರ ಬಂಡೆಬಯಲು ಮೊದಲಾದವು ಈ ಸ್ಥಳದ ಇತಿಹಾಸವನ್ನು ಕ್ರಿಸ್ತಪೂರ್ವದತ್ತ ಒಯ್ಯುತ್ತಿವೆ.

ಕರ್ನಾಟಕದಲ್ಲಿ ದೊರೆಯುವ ಮೊಟ್ಟಮೊದಲ ಶಾಸನಗಳು 'ದೇವನಾಂಪ್ರಿಯ' 'ಪ್ರಿಯದರ್ಶಿ' ಎಂದು ಪ್ರಸಿದ್ಧಿ ಪಡೆದ ಅಶೋಕನ ಧರ್ಮಶಾಸನಗಳು. ಅವುಗಳಲ್ಲಿ ಎರಡು ಕೊಪ್ಪಳದಲ್ಲಿಯೇ ಇರುವುದು, ಅಂದಿನ ಕಾಲದಲ್ಲಿ ಈ ಸ್ಥಳ ಪಡೆದಿದ್ದ ಪ್ರಸಿದ್ಧಿಯನ್ನೂ ಮಹತಿಯನ್ನೂ ಸಾರುತ್ತಿವೆ; ಕನ್ನಡ ನೆಲದ ಮೇಲೆ ಆಳಿಕೆಯನ್ನು ನಡೆಸಿದ ಪ್ರಥಮ ಪ್ರಭು ಅಶೋಕ ಎಂಬುದನ್ನು ಸಾರುತ್ತಿವೆ.

ಮೌರ್ಯರ ತರುವಾಯ ಈ ನಾಡು ಶಾತವಾಹನರ

ಆಳ್ವಿಕೆಗೆ ಒಳಪಟ್ಟಿತು. ಇವರು ಈ ನಾಡನ್ನು ಸುಮಾರು ೫೫೦ ವರ್ಷಗಳ ಕಾಲ ಆಳಿದರು. ಎರಡು ಅಶ್ವಮೇಧ ಯಾಗಗಳನ್ನೂ ಒಂದು ರಾಜಸೂಯಯಾಗವನ್ನೂ ಮಾಡಿದ ಈ ವಂಶದ ಕನ್ನ ಅಥವಾ ಕೃಷ್ಣ ಮಹಾರಾಷ್ಟ್ರದಿಂದ ಪೂರ್ವತೀರದ ಕಳಿಂಗದವರೆಗೆ ಆಳಿದನೆಂದು ತಿಳಿದು ಬರುತ್ತದೆ. ಕೊಪ್ಪಳ ತಾಲ್ಲೂಕಿನ ಚಿಕ್ಕಸಿಂದೋಗಿಯಲ್ಲಿ ಈ ವಂಶಕ್ಕೆ ಸಂಬಂಧಿಸಿದ ೫೫೩೪ ಬೆಳ್ಳಿಯ ಮುದ್ರಾಂಕಿತ ನಾಣ್ಯಗಳ ರಾಶಿ ದೊರೆತಿರುವುದನ್ನೂ ಇಲ್ಲಿ ಸ್ಮರಿಸಬಹುದಾಗಿದೆ. ಕದಂಬ ವಂಶದ ಸ್ಥಾಪಕ ಮಯೂರವರ್ಮನ ಶಾಸನದಲ್ಲಿ 'ಕುಪಣಚಮು' ಎಂಬ ಹೆಸರಿನಲ್ಲಿ ಕೊಪ್ಪಳದ ಉಲ್ಲೇಖವಿರುವುದನ್ನೂ ಕಾಣಬಹುದಾಗಿದೆ.[1]

ಕರ್ನಾಟಕದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸ್ವರೂಪ ಕೊಟ್ಟ ಅರಸರಲ್ಲಿ ಚಾಲುಕ್ಯರು ಪ್ರಮುಖರು. ಅವರಲ್ಲಿ ಪ್ರಸಿದ್ಧ ದೊರೆ ಶಕಪುರುಷ ೨ನೆಯ ಪುಲಕೇಶಿ. ಈತನ ಕಾಲದಲ್ಲಿ ಪ್ರವಾಸಕ್ಕೆ ಬಂದ ಚೀನಾದೇಶದ ಪ್ರವಾಸಿ ಹುವೆನ್‌ತ್ಸಾಂಗ, ಕನ್ನಡನಾಡಿನ ಪ್ರಸಿದ್ಧ ಸ್ಥಳಗಳನ್ನು ಹೆಸರಿಸುವಾಗ ಈ ಸ್ಥಳವನ್ನು 'ಕೊಂಕಣ ಪುಲೋವು' ಎಂದು ಉಲ್ಲೇಖಿಸಿದ್ದಾನೆ. ಅಶೋಕನ ತರುವಾಯ ಮೌನ ಧರಿಸಿದ್ದ ಇಲ್ಲಿಯ ಶಾಸನ ಸಂಪತ್ತು ತನ್ನ ಮೌನದ ಮುದ್ರೆಯೊಡೆಯುತ್ತಿರುವುದು ಕೊಪ್ಪಳಕ್ಕೆ ನಾಲ್ಕು ಮೈಲಿ ದೂರದಲ್ಲಿರುವ ಹಲಗೇರಿ ಶಾಸನದಿಂದ. ಇದು ಬಾದಾಮಿ ಚಾಲುಕ್ಯ ಅರಸು ವಿಜಯಾದಿತ್ಯ ಈ ಸ್ಥಳದೊಂದಿಗೆ ಹೊಂದಿದ್ದ ಸಂಬಂಧ ಸಾರುತ್ತಿದೆ. ಕ್ರಿ. ಶ. ೯೬೮ರ ಕುಕನೂರ ತಾಮ್ರಶಾಸನ ಗಂಗ ಅರಸು ಮಾರಸಿಂಹನನ್ನು ಉಲ್ಲೇಖಿಸುತ್ತದೆ. ಇಲ್ಲಿ ಕೊಪ್ಪಳದ ನೇರ ಪ್ರಸ್ತಾಪ ಇಲ್ಲದಿದ್ದರೂ ಕುಕನೂರು ಕೊಪ್ಪಳಕ್ಕೆ ಅತಿ ಸಮೀಪದಲ್ಲಿರುವುದರಿಂದ ಈ ಎಲ್ಲ ಭಾಗ ಗಂಗರ ಆಡಳಿತಕ್ಕೆ ಒಳಪಟ್ಟಿತ್ತು ಎಂದು ಹೇಳಬಹುದಾಗಿದೆ.

ಚಾಲುಕ್ಯರ ತರುವಾಯ ಕರ್ನಾಟಕ-ಸಾಮ್ರಾಜ್ಯದ ವೈಭವವನ್ನು ಪರಾಕಾಷ್ಠೆಗೆ ಒಯ್ದವರು ರಾಷ್ಟ್ರಕೂಟರು. ಈ ವಂಶದ ಅರಸರಲ್ಲಿ ೧ನೆಯ ಕೃಷ್ಣ, ಇಮ್ಮಡಿ ಗೋವಿಂದ, ಧ್ರುವ, ಮುಮ್ಮಡಿ ಗೋವಿಂದ ಮೊದಲಾದವರು ಈ ನಾಡಿನಲ್ಲಿ ಆಡಳಿತ ನಡೆಸಿದರು. ಇವರಲ್ಲಿ ಈ ನಾಡಕೀರ್ತಿ ಇಂದಿಗೂ ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸಿದ ಕೀರ್ತಿ ಅಮೋಘವರ್ಷ ನೃಪತುಂಗನ ಆಶ್ರಯದಲ್ಲಿದ್ದ ಶ್ರೀವಿಜಯ ರಚಿಸಿದ ಕವಿರಾಜಮಾರ್ಗದ್ದು. ಅಲ್ಲಿ ಈ ನಾಡಿನ ಮಹತಿಯನ್ನು– "ಕಾವೇರಿಯಿಂದಮಾ ಗೋ। ದಾವರಿ ವರಮಿರ್ದ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸು। ಧಾವಳಯ ವಿಲೀನ ವಿಶದ ವಿಷಯ ವಿಶೇಷಂ"(೧-೩೬). "ಅದಱ ೊಳಗಂಕಿಸುವೊಟಲಾ। ವಿದಿತ ಮಹಾಕೊಪಣ ನಗರದಾ ಪುಲಿಗೆಱ ಯಾ ಸದಭಿಸ್ತು ತಮಪ್ಪೊಕ್ಕುಂ। ದದ ನಡುವಣ ನಾಡೆ ನಾಡೆ ಕನ್ನಡ ತಿರುಳ್" (೧-೩೬). ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡ ನಾಡು ವ್ಯಾಪಿಸಿದೆ. ಇಲ್ಲಿರುವ ಜನಪದವು ಜಗತ್ತಿನ ಸುಪ್ರಸಿದ್ಧ ವಿಷಯಗಳಿಗೆ ಮಿಗಿಲು. ಆ ಜನಪದದೊಳಗೆ ಕಿಸುವೊಳಲು (ಇಂದಿನ ಪಟ್ಟದಕಲ್ಲು), ಕೊಪಣನಗರ (ಇಂದಿನ ಕೊಪ್ಪಳ), ಪುಲಿಗೆರೆ (ಇಂದಿನ ಲಕ್ಷ್ಮೇಶ್ವರ), ಒಕ್ಕುಂದ (ಇಂದಿನ ಬೆಳಗಾಂವಿ ಜಿಲ್ಲೆಯ ಒಕ್ಕುಂದ) ಈ ನಾಲ್ಕು ಊರುಗಳು 'ಕನ್ನಡ ನುಡಿದೇವಿಯ ಚಿತ್ರಕ್ಕೆ ನಾಲ್ಕೂ ದಿಕ್ಕುಗಳಲ್ಲಿ ಹಚ್ಚಿಟ್ಟ ನಂದಾದೀವಿಗೆ'ಗಳಂತೆ ಭಾಸವಾಗುತ್ತಿವೆ. ರಾಷ್ಟ್ರಕೂಟರ ರಾಜಕೀಯ ಪ್ರಭಾವ ಪರಮಾವಧಿಯನ್ನು ಮುಟ್ಟಿದ್ದು ೩ನೆಯ ಕೃಷ್ಣನ ಕಾಲದಲ್ಲಿ. ಇವನ ಆಳ್ವಿಕೆಯನ್ನು ಸುರುವ ಕ್ರಿ. ಶ. ಸು. ೯೬೪ರ ಉಪ್ಪಿನ ಬೆಟಗೇರಿ ಶಾಸನವು, ಅವನ ಮಹಾಸಾಮಂತಾಧಿಪತಿಯಾದ ಶಂಕರಗಂಡನು ಕೊಪ್ಪಳದಲ್ಲಿ ಜಿನಾಲಯ ಕಟ್ಟಿಸಿದನೆಂತಲೂ ಅದು ಅವನ 'ಜಯಧೀರ'ಯೆಂಬ ಬಿರುದಿನಿಂದ ಪ್ರಸಿದ್ಧಿ ಪಡೆಯಿತೆಂತಲೂ ಹೇಳಿದೆ. ಶಂಕರಗಂಡ ಆ ಕಾಲದಲ್ಲಿ ಬಹು ಪ್ರಸಿದ್ಧನಾಗಿದ್ದ ವ್ಯಕ್ತಿಯಾಗಿದ್ದನು ಮತ್ತು ರನ್ನನಿಂದ 'ಜೈನಮತದ ಪೋಷಕ'ನೆಂದು ಕೀರ್ತಿತನಾಗಿದ್ದನು.

ರಾಷ್ಟ್ರಕೂಟರ ತರುವಾಯ ಕರ್ನಾಟಕದ ರಾಜ್ಯಸೂತ್ರವನ್ನು ಪಡೆದವರು ಕಲ್ಯಾಣದ ಚಾಲುಕ್ಯರು. ಅವರಲ್ಲಿ ಇಮ್ಮಡಿ ತೈಲಪ, ೫ನೆಯ ವಿಕ್ರಮಾದಿತ್ಯ, ೨ನೆಯ ಜಯಸಿಂಹ, ೬ನೆಯ ವಿಕ್ರಮಾದಿತ್ಯ ಮೊದಲಾದವರು ಪ್ರಮುಖರು. ೬ನೆಯ ವಿಕ್ರಮಾದಿತ್ಯನ ಕಾಲದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದ ಯಲಬುರ್ಗಿಯ ಸಿಂದ ಮನೆ

1 ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೬೯–೨

ತನ, ಚಾಲುಕ್ಯ ಸಾಮ್ರಾಜ್ಯವನ್ನು ಉಳಿಸಲು, ಬೆಳೆಸಲು ಶಕ್ತಿಮೀರಿ ಪ್ರಯತ್ನಿಸಿತು. ಆ ವಂಶದ ದೊರೆ ೨ನೆಯ ಆಚರಸ ಹೊಯ್ಸಳ ವಿಷ್ಣುವರ್ಧನನನ್ನು ದೋರಸಮುದ್ರ ದವರೆಗೆ ಅಟ್ಟಿಕೊಂಡು ಹೋದ ಬಗ್ಗೆ ಆಧಾರ ದೊರೆಯುತ್ತವೆ.

ಚಾಲುಕ್ಯ ಸಾಮ್ರಾಜ್ಯದ ವಾರಸುದಾರರಾಗಿ ಬಂದ ಕಳಚೂರ್ಯರಲ್ಲಿ ಬಿಜ್ಜಳನನ್ನು ಕುಕನೂರ ಶಾಸನ ಮನ ದುಂಬಿ ಬಣ್ಣಿಸಿದೆ. ಇಲ್ಲಿಯ ಇನ್ನೆರಡು ಶಾಸನಗಳು ರಾಯ ಮುರಾರಿದೇವ ಮತ್ತು ಸಂಕಮದೇವರು ಕೊಪ್ಪಳಕ್ಕೆ ೩ ಮೈಲಿ ಅಂತರದಲ್ಲಿರುವ ಮೊದೆಗನೂರಿನಲ್ಲಿ ಸುಖ ಸಂಕಥಾವಿನೋದದಿಂದ ರಾಜ್ಯಗೆಯ್ಯುತ್ತಿದ್ದನೆಂದು ಹೇಳಿವೆ.

ಕಲೆ ಮತ್ತು ಸಂಸ್ಕೃತಿಗಳ ಸಂಗಮವಾಗಿದ್ದ ಹೊಯ್ಸಳ ಮನೆತನವೂ ಈ ಸ್ಥಳದೊಂದಿಗೆ ಗಾಢ ಸಂಬಂಧ ಪಡೆದಿದ್ದ ಬಗ್ಗೆ ಆಧಾರ ದೊರೆಯುತ್ತಿವೆ. ವಿಷ್ಣುವರ್ಧನನ ಕಾಲದ ಜೈನಧರ್ಮದ ಎರಡು ಕಣ್ಣುಗಳಂತಿದ್ದ ಶಾಂತಲೆ ಗಂಗರಾಜರಲ್ಲಿ, ಶಾಂತಲೆ ಶ್ರವಣಬೆಳ್ಗೊಳದಂತೆ ಇಲ್ಲಿಯೂ ಒಂದು ಜಿನಾಲಯ ನಿರ್ಮಿಸಿದಳು. ಗಂಗರಾಜನು ಗಂಗವಾಡಿ ತೊಂಬತ್ತಾರು ಸಾಸಿರಕೆಲ್ಲ ಕೊಪಣವನ್ನು ಆದರ್ಶವಾಗಿಟ್ಟುಕೊಂಡಿದ್ದನು.[2] ಅವನ ಅಣ್ಣನ ಮಗ ಏಚಿರಾಜ ಕೊಪಣ ಆದಿತೀರ್ಥದಲ್ಲಿ ಮತ್ತು ಬೆಳ್ಗೊಳದಲ್ಲಿ ಧರಿತ್ರಿಯಲ್ಲಿ ಕೊಂಡು ಕೊನೆದಾಡುವಂತೆ ಜಿನೇಂದ್ರ ಭವನಂಗಳನ್ನು ಮಾಡಿಸಿದನು.[3] ಅಲ್ಲದೆ ಏಚಿರಾಜನು ಬೆಳಗವತ್ತಿನಾಡನ್ನು ನಿರ್ಮಿಸುವಲ್ಲಿಯೂ ಕೊಪ್ಪಳವನ್ನೇ ಆದರ್ಶವಾಗಿಟ್ಟುಕೊಂಡಿದ್ದನು. ಹೊಯ್ಸಳ ನಾರಸಿಂಹನ ಮಂತ್ರಿ ಹುಳ್ಳರಾಜ ಕೊಪ್ಪಳದಲ್ಲಿಯ ಮುನಿಸಂಘಕ್ಕೆ ಸುವರ್ಣದಾನವನ್ನಿತ್ತು ಪುಣ್ಯಪುಂಜೈಕ್ಯಧಾಮನೆನಿಸಿದನು.[4]

ಹೊಯ್ಸಳ ಅರಸರ ಅಳಿಗಾಲದಷ್ಟೊತ್ತಿಗೆ ಮುಸಲ್ಮಾನರ ದಾಳಿ ಆರಂಭವಾಯಿತು. ಅದನ್ನು ಎದುರಿಸುವಲ್ಲಿ ಇಡೀ ನಾಡೆಲ್ಲ ಕೈಸೋತು ನಿಂತಾಗ ಆನೆಗುಂದಿಯ ಕಂಪಿಲ ಮತ್ತು ಅವನ ಮಗ ಕುಮಾರರಾಮರು ಧೈರ್ಯವಾಗಿ ನಿಂತುದು ಐತಿಹಾಸಿಕ ಮಹತ್ವದ ಘಟನೆ. ನೇಮಿಖಾನ-ತೊರೆಗಲ್ಲು, ಬದಾಮಿ, ಮುದಿಗಲ್ಲು, ಕೊಪಣದ ತೆರಹಿನ ರಾಜ್ಯವೆಲ್ಲವನ್ನು ಇರಿದು ಕೆಡಿಸುತ್ತ ಬಂದನೆಂದೂ ಕುಮಾರರಾಮ ಅವನನ್ನು ಸೋಲಿಸಿ ಅಲ್ಲೆಲ್ಲ ತನ್ನ ಮಾಂಡಲಿಕರನ್ನು ನೇಮಿಸಿದನೆಂದೂ ಕುಮಾರರಾಮನ ಸಾಂಗತ್ಯ ಹೇಳಿದೆ (೧೯-೪೮). ಅದು ಮುಂದುವರಿದು, ಕೊಪಣವೊಂದು ಬಲಾಢ್ಯ ದುರ್ಗವೆಂದೂ ಅಲ್ಲಿ ತಿಮ್ಮರಾಜನೆಂಬುವನು ಕಂಪಿಲನ ಮಾಂಡಲಿಕನಾಗಿದ್ದನೆಂದೂ ಬಣ್ಣಿಸಿದೆ. ಕಮ್ಮಟದುರ್ಗದ ಶೂಲದಹಬ್ಬದಲ್ಲಿ ಕೊಪಣದ ತಿಮ್ಮರಾಜನ ಕುವರನೂ ಭಾಗವಹಿಸಿದ್ದನಂತೆ. ಇವೆಲ್ಲವುಗಳಿಂದ ಕುಮಾರರಾಮನ ಕಾರ್ಯಚಟುವಟಿಕೆಗಳ ಆಡುಂಬೊಲ ಈ ಕೊಪಣ ನಗರವಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ.

ಮುಂದೆ ಈ ಪಟ್ಟಣ ಒಮ್ಮೆ ಮುಸಲ್ಮಾನರ ಕೈಗೂ ಒಮ್ಮೆ ವಿಜಯನಗರದರಸರ ಕೈಗೂ ಹಸ್ತಾಂತರಗೊಳ್ಳುತ್ತ ಬಂದ ಬಗ್ಗೆ ಆಧಾರ ದೊರೆಯುತ್ತದೆ. ವಿಜಯನಗರದರಸರು ಹರಿಹರ ಭಕ್ತ ಸಮೂಹದೊಂದಿಗೆ ಸಿಂಹನಂದ್ಯಾಚಾರ್ಯ ನಿಶಧಿಗೆ ನಿಲ್ಲಿಸಿದಂತೆ ಇಲ್ಲಿಯ ಒಂದು ಶಾಸನ ಹೇಳಿದೆ. ಕೃಷ್ಣದೇವರಾಯನು ಈ ಸೀಮೆಗೆ ತಿಮ್ಮಪ್ಪಯ್ಯ ಎಂಬುವನನ್ನು ನಾಯಕನನ್ನಾಗಿ ನೇಮಿಸಿದ್ದಂತೆ ಇಲ್ಲಿಯ ಇನ್ನೊಂದು ಶಾಸನದಿಂದ ತಿಳಿಯುತ್ತದೆ. ರಾಮರಾಯನ ಮಗ ಶ್ರೀರಾಮರಾಜನ ಕಾಲದಲ್ಲಿಯೂ ಈ ನಾಡು 'ಕೊಪ್ಪಳ ಪ್ರದೇಶ'ವೆಂದು ಪ್ರಸಿದ್ಧಿಪಡೆದುದಾಗಿ ತಿಳಿದು ಬರುತ್ತದೆ.[5]

ವಿಜಾಪುರದ ಆದಿಲ್‌ಷಾನ ಕಾಲದಲ್ಲಿ ಈ ಸ್ಥಳವನ್ನು 'ಮುಜಫರ್‌ನಗರ' ಎಂದು ಕರೆಯುತ್ತಿದ್ದರು. ೨ನೆಯ

---

2 E.C., V, Bl. 124; Ibid. II., 124

3 Ibid., II, 384

4 Ibid., 345

5 M.A.R., 1917

ಇಬ್ರಾಹೀಂ ಆದಿಲ್‌ಷಾನ ಆಡಳಿತದಲ್ಲಿ, ಯಾಕೂಬ ನೆಂಬುವನು ಈ ಭಾಗದ ಅಧಿಕಾರಿಯಾಗಿದ್ದಾಗ, ಘಾಜಿ ಖಾನ್ ಎಂಬವನು ಇಲ್ಲಿ ಒಂದು ಮಸೀದಿ ಕಟ್ಟಿಸಿದನು. ಮುಂದೆ ಈ ಸ್ಥಳವು ೩ನೆಯ ಬಹುಲೋಲ ಎಂದು ಕರೆಯಲಾಗುತ್ತಿದ್ದ ಅಬ್ದುಲ್ ರಹೀಮನಿಗೆ ಜಹಗೀರಾಗಿ ಕೊಡಲ್ಪಟ್ಟಿತು. ಅವನ ಪ್ರತಿನಿಧಿಯಾಗಿದ್ದ ಹುಸೇನ್ ಮೇನ್‌ನನ್ನು ಶಿವಾಜಿ ಸೆರೆ ಹಿಡಿದು, ಕೊಪ್ಪಳ ಕೋಟೆ ಯನ್ನಿತ್ತರೆ ಅವನನ್ನು ಬಿಡುವುದಾಗಿ ತಿಳಿಸಿದನು. ಮುಂದೆ ಶಿವಾಜಿ ಇದನ್ನು ಸುಭಾನಜಿರಾವ್ ಎಂಬುವನಿಗೆ ಕೊಟ್ಟನು. ಈ ಪಟ್ಟಣದ ಮೂಲಕ ಮರಾಠರು ತಮ್ಮ ರಾಜ್ಯವನ್ನು ತುಂಗಭದ್ರಾ ನದಿಯ ದಂಡೆಯ ಆದರಾಚೆ, ಅಂದರೆ ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಯವರೆಗೂ ಹಬ್ಬುವಂತೆ ಮಾಡಿದರು.

ತರುವಾಯ ಈ ಸ್ಥಳ ಹೈದರಾಲಿಯ ಕೈಸೇರಿತು. ಅವನು ಈ ನಾಡನ್ನು ಆಳಲು ಮಹ್ಮದ್ ಉಸ್ಮಾನ್ ಕೋವಾರ ಎಂಬುವನನ್ನು ನೇಮಿಸಿದನು. ಇವನು ಕೊಪ್ಪಳ ಕೋಟೆಯ ೨ನೆಯ ಬಾಗಿಲನ್ನೂ ಬಹದ್ದೂರ ಬಂಡೆಯ ಕೋಟೆಯನ್ನೂ ಕಟ್ಟಿಸಿದನು. ಮರಾಠ ರೊಂದಿಗೆ ಹೋರಾಡಿ ಈ ಸ್ಥಳವನ್ನು ವಶಪಡಿಸಿಕೊಂಡ ಸಂಕೇತವಾಗಿ ಟಿಪ್ಪೂ ಸುಲ್ತಾನ ಈ ಸ್ಥಳವನ್ನು 'ಸುಲ್ತಾನ ಗಡ' ಎಂದು ಕರೆದನು, ಕಿತ್ತೂರಿನ ಮಲ್ಲಸರ್ಜ ದೊರೆ ಯನ್ನು ಇಲ್ಲಿಯೇ ಬಂಧಿಸಿ ಇಟ್ಟಿದ್ದನು.*

ಕ್ರಿ.ಶ. ೧೭೯೧ರಲ್ಲಿ ಕರ್ನಲ್ ಕಿಡ್‌ನು ಸವಣೂರು, ಕೊಪ್ಪಳ, ಬೆಂಗಳೂರು ಮೊದಲಾದ ಪಟ್ಟಣಗಳನ್ನು ಹಿಡಿದುಕೊಂಡನು. ಕ್ರಿ.ಶ. ೧೮೫೦-೧೮೫೭ರ ಮಧ್ಯದಲ್ಲಿ ಇಲ್ಲಿಯ ವೀರಪ್ಪನೆಂಬ ಜಮೀನ್ದಾರ್ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ಬಂಡೆದ್ದನು. ವೀರಪ್ಪನ ಬ್ರಿಟೀಷ್ ವಿರೋಧಿ ಪ್ರವೃತ್ತಿ ಮುಂಡರಗಿ ಭೀಮರಾಯನಲ್ಲಿ ಮುಂದುವರಿಯಿತು. ಹಮ್ಮಿಗಿ ಕೆಂಚನಗೌಡ ಈತನಿಗೆ ಬೆಂಬಲವಾಗಿ ನಿಂತನು. ಕ್ರಿ.ಶ. ೧೮೫೮ರಲ್ಲಿ ಬ್ರಿಟೀಷರು ಈ ಬಂಡಾಯವನ್ನು ಬಗ್ಗುಬಡಿದರು. ೧೮೬೧ರಲ್ಲಿ ಈ ಭಾಗವನ್ನು ನವಾಬ ಸಾಲಾರಜಂಗ ಅವ್ವಲ್ ಅವರಿಗೆ ಜಹಗೀರಾಗಿ ಕೊಡಲ್ಪಟ್ಟಿತು. ಭಾರತಕ್ಕೆ ಸ್ವಾತಂತ್ರ್ಯ ದೊರೆಯುವವರೆಗೂ ಈ ಪ್ರದೇಶ ಸಾಲಾರಜಂಗನ ಆಧಿಪತ್ಯದಲ್ಲಿಯೇ ಇದ್ದಿತು.

ಕ್ರಿ.ಶ. ೯೪೫ ರಿಂದ ೧೧೮೦ ರವರೆಗೆ ಕನ್ನಡನಾಡಿನ ಬೇರೆ ಬೇರೆ ಭಾಗಗಳಲ್ಲಿಯ ಕೆಲವು ಶಾಸನಗಳು ಶಿಲಾ ಹಾರ ವಂಶದ ಅರಸರನ್ನು 'ಕೊಪಣಪುರವರಾಧೀಶ್ವರ' ಎಂದು ಕರೆದಿವೆ (ತರ್ದವಾಡಿ ನಾಡು–ಶ್ರೀ ಆರ್. ಎಸ್. ಗುರವ). ಇದರಿಂದ ಈ ಸ್ಥಳ ಶಿಲಾಹಾರವಂಶದ ಅರಸರ ರಾಜಧಾನಿಯಾಗಿದ್ದಿತೆಂಬುದಾಗಲಿ ಅಥವಾ ಆ ವಂಶದ ಅರಸರು ಕೊಪ್ಪಳದ ಮೂಲದವರಾಗಿದ್ದರೆಂದಾಗಲಿ ಊಹಿಸಬಹುದಾದರೂ ಇದನ್ನು ಸಮರ್ಥಿಸುವ ಆಧಾರ ಗಳು ಈವರೆಗೆ ದೊರೆತಿಲ್ಲ; ಬೇರೆ ವಂಶದ ಹಲವು ಅರಸರೂ 'ಕೊಪಣಪುರವರಾಧೀಶ್ವರ' ಎಂಬ ಬಿರುದು ಧರಿಸಿದ್ದ ಬಗ್ಗೆ ಆಧಾರ ದೊರೆಯುತ್ತಿವೆ. ಉದಾಹರಣೆಗೆ, ಬೆಳಗಾವ ಜಿಲ್ಲೆಯ ಕಲ್ಲೋಳಿ ಶಾಸನವು ಯದುವಂಶದ ಮಹಾಮಂಡಳೇಶ್ವರ ೨ನೆಯ ರಾಜನನ್ನು 'ಕುಪಣಪುರ ವರಾಧೀಶ್ವರ' ಎಂದು ಕರೆದಿದೆ.

'ಚತುರಾಸ್ಯಕೋಟಿಕೂಟದೊಳತಿಶಯಮೆನಿಸಿರ್ದ'[6] ಈ ಕೊಪ್ಪಣತೀರ್ಥ ಪ್ರಾಚೀನಕಾಲದಿಂದ ಹಲವು ಹತ್ತು ಧರ್ಮಗಳ ನೆಲೆವೀಡಾಗಿದ್ದಿತು. 'ಕ್ಷುದ್ರ ಜನರೂ ಕೂಡಾ ತಮ್ಮ ಪರಾಕ್ರಮದಿಂದ ವಿಪುಲವಾದ ಸ್ವರ್ಗ ವನ್ನು ಪಡೆಯಬಹುದು' ಎಂಬುದನ್ನು ಸಾರುವ ಬೌದ್ಧ ಧರ್ಮದ ಪ್ರಥಮ ಪಾಠದಂತಿರುವ ಅಶೋಕನ ಶಾಸನಗಳು ಇಲ್ಲಿವೆ. ಆ ತರುವಾಯ ಈ ಸ್ಥಳ ಜೈನ ಧರ್ಮಕ್ಕೆ ಆಶ್ರಯವನ್ನಿತ್ತಿತು. ಶ್ರವಣಬೆಳಗೊಳದ ಶಾಸನಗಳು ಇದನ್ನು ಆದಿತೀರ್ಥ,[7] ಮಹಾತೀರ್ಥ[8] ಎಂದು ಬಣ್ಣಿಸಿವೆ. ರನ್ನನು ತನ್ನ ಆಶ್ರಯದಾತೆಯಾದ ಅತ್ತಿಮಬ್ಬೆಯನ್ನು 'ನೆಗೆಟ್ದ ಕೊಪಣಾಚಳದಂತೆ ಪವಿತ್ರ'

6 E. C., VII, Ch. 64
7 Ibid., 385
8 Ibid., 345
* ಈ ಮಾತು ನಿಜವಲ್ಲ; ಇದು ಕಬ್ಬಾಳದುರ್ಗ; ಮೈಸೂರಿಗೆ ಸಮೀಪ ಇದೆ (ಸಂ.)

ಎಂದು ಬಣ್ಣಿಸಿದ್ದಾನೆ. ಈ ಸ್ಥಳಕ್ಕೆ ತಪಕ್ಕೆಂದು, ಯಾತ್ರೆಗೆಂದು, ಮರಣಕ್ಕೆಂದು ಬಂದವರು ಹಲವು ಜನ. ಅವರಲ್ಲಿ ಕುಮಾರಸೇನಮುನಿ ಮುಳ್ಗುಂದದಲ್ಲಿ ತಪಗೈದು ತೃಪ್ತಿ ಹೊಂದದೆ, ಕೊಪಣಾಚಲಕ್ಕೆ ಬಂದು ಆಗಮೋಕ್ತ ವಿಧಿ ವಿಧಾನಗಳಿಂದ ಮುಕ್ತಿ ಸಾಧಿಸಿದನೆಂದು ಚಾಮುಂಡ ರಾಯ ಪುರಾಣ ಹೇಳಿದೆ. 'ತ್ರೈಲೋಕ್ಯ ರಕ್ಷಾಮಣಿ ಸ್ತೋತ್ರ' ಎಂಬ ಹಸ್ತಪ್ರತಿಯು ಈ ಸ್ಥಳವನ್ನು 'ವಿಪುಲ ಶ್ರೀಕೊಪಣಾದಿತೀರ್ಥ' ಎಂದಿದೆ.[9] ಇಲ್ಲಿ ೭೭೦ ಜಿನಾಲಯಗಳಿದ್ದವೆಂದು ಒಂದು ಶಾಸನ ಬಣ್ಣಿಸಿದೆ. ಅಲ್ಲದೆ ಇದು ೧೩ನೆಯ ಶತಮಾನದಲ್ಲಿ ಜೈನ ಕೇಂದ್ರ ವಾಗಿದ್ದಿತು ಎಂಬುದು ಹರಿಹರ, ರಾಘವಾಂಕರ-ಆದಯ್ಯನ ರಗಳೆ, ಸೋಮನಾಥಚಾರಿತ್ರ್ಯಗಳಿಂದ ತಿಳಿದು ಬರುತ್ತದೆ. ಇಲ್ಲಿ ೨೪ ಮುನಿಸಂಘಗಳಿದ್ದವೆಂದೂ ಅವು ಗಳಿಗೆ ಹುಳ್ಳ ದಾನವಿತ್ತನೆಂದೂ ಶ್ರವಣಬೆಳಗೊಳದ ಒಂದು ಶಾಸನ ಬಣ್ಣಿಸಿದೆ. ನಯಸೇನನ ಧರ್ಮಾಮೃತ (ಸಂ. ೯, ಪು. ೧೮೨ರ ಅ. ಟಿ.)ದಲ್ಲಿ ಶ್ರೀಕೊಪಣ ದೊಳ್ನಿಂದ ಶಶಿನಾಥ ಜಿನನನ್ನು ನೆನೆಯಲಾಗಿದೆ. ಕ್ರಿ.ಶ. ೧೫೫೭ರ ಕೆಳದಿ ಸದಾಶಿವನಾಯಕನ ಒಂದು ಶಾಸನದಲ್ಲಿ 'ಕೊಪಣದ ಚಂದ್ರನಾಥ'ನ ಉಲ್ಲೇಖ ಬಂದಿದೆ. ಇವು ಗಳಿಂದ ಕ್ರಿ.ಶ. ಸು. ೩ನೆಯ ಶತಮಾನದಿಂದ ಕ್ರಿ.ಶ. ೧೫೭೦ರವರೆಗೆ ಈ ಸ್ಥಳ ಜೈನ ಕೇಂದ್ರವಾಗಿದ್ದುದು ಸ್ಪಷ್ಟ ವಾಗುತ್ತಿದೆ. ಇಲ್ಲಿ ಉಲ್ಲೇಖಗೊಂಡ 'ಕೊಪಣಾಚಲ' ಇಂದು ಗವಿಮಠವಿರುವ ಬೆಟ್ಟವೇ ಆಗಿರಬೇಕು. ಏಕೆಂದರೆ ಅಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಹಲವು ಶಾಸನ ದೊರೆಯುತ್ತಿವೆ. ಜೈನಧರ್ಮ ಇಲ್ಲಿ ಇಷ್ಟು ಮಹತಿ ಪಡೆ ದಿದ್ದರೂ ಕರ್ನಾಟಕದ ಇನ್ನೊಂದು ಪ್ರಸಿದ್ಧ ಜೈನಕ್ಷೇತ್ರ ಶ್ರವಣಬೆಳ್ಗೊಳ ಉಳಿಸಿಕೊಂಡು ಬಂದ ಪ್ರಸಿದ್ಧಿಯನ್ನು ಈ ಸ್ಥಳ ಏಕೆ ಉಳಿಸಿಕೊಂಡು ಬರಲಿಲ್ಲ ಎಂಬ ಪ್ರಶ್ನೆ ಏಳುತ್ತದೆ. ಆ ಪ್ರಶ್ನೆಗೆ ಈ ಸ್ಥಳ ಆಗಾಗ ರಾಜಕೀಯ ಮತ್ತು ಅನ್ಯ ಮತಗಳ ಪ್ರಭಾವಕ್ಕೆ ತುತ್ತಾದುದೇ ಕಾರಣ ವೆಂದು ಹೇಳಬಹುದಾಗಿದೆ.

'ಬಸವಾದಿ ಪ್ರಮುಥರ ಪೂರ್ವದಲ್ಲಿ ವೀರಶೈವದ ಸ್ಥಿತಿ ಗತಿ ಹೇಗಿತ್ತೆಂಬುದನ್ನು ಅರಿತುಕೊಳ್ಳಲು ಹರದನಹಳ್ಳಿ, ಹೂಲಿ, ಪುಲಿಗೆರೆ, ಕೊಪಣನಗರ, ಸುತ್ತೂರು ಮೊದಲಾದ ಮಠಗಳಲ್ಲಿ ಕ್ರಿ.ಶ. ೧೦೦೦ದ ಸುಮಾರಿನಲ್ಲಿ ಪ್ರತಿಷ್ಠಾಪಿತ ವಾದ ದೇವಾಲಯಗಳ, ಅಲ್ಲಿ ನೆಲೆಗೊಳಿಸಲ್ಪಟ್ಟ ಸಮಯಾಚಾರಿ ಸುವಾಸಿಗಳ ಚರಿತ್ರೆ ನಮಗೆ ಸಹಾಯಕ ವಾಗಿದೆ' ಎಂಬುದು ಡಾ॥ ಆರ್. ಸಿ. ಹಿರೇಮಠ ಅವರ ಅಭಿಪ್ರಾಯ.[10] ಇಲ್ಲಿಯ ಗವಿಮಠದಲ್ಲಿ ದೊರೆತಿರುವ ಹೊಳೆಯ ಹಂಪಯ್ಯನ ಶಾಸನ (ಕ್ರಿ.ಶ. ೧೦೮೬) ಈ ನಾಡಿನ ವೀರಶೈವಧರ್ಮದ ಪ್ರಪ್ರಥಮ ಉಲ್ಲೇಖ. ಅಲ್ಲಿಂದ ಇಲ್ಲಿಯವರೆಗೆ ಈ ಮಠ ವೀರಶೈವಧರ್ಮ, ಸಂಸ್ಕೃತಿಯ ಸಂಗಮವಾಗಿ ನಿಂತಿದೆ. ಆದರೆ ಪೂರ್ವದಲ್ಲಿ ಈ ಮಠ ಜೈನಧರ್ಮದ ಕೇಂದ್ರವಾಗಿದ್ದ ಬಗೆಗೆ ಅವಶೇಷಗಳು ದೊರೆಯುತ್ತಿವೆ.

ವಿಜಯನಗರದರಸು ಕೃಷ್ಣದೇವರಾಯನನ್ನು ಉಲ್ಲೇ ಖಿಸುವ ಶಾಸನವೊಂದು ವೆಂಕಟೇಶ್ವರ ದೇವಾಲಯ ದಲ್ಲಿದ್ದು ವೈಷ್ಣವಧರ್ಮದ ಅಸ್ತಿತ್ವವನ್ನು ಸಾರುತ್ತಿದೆ. ಬಿಜಾಪುರದ ಬಾದಷಾ, ಹೈದರಾಲಿ, ಟಿಪ್ಪು, ನೈಜಾಂ ಮೊದಲಾದ ಮುಸ್ಲಿಂ ಧರ್ಮಾಭಿಮಾನಿ ಅರಸರಿಂದ ಇಲ್ಲಿ ಮುಸ್ಲಿಂ ಸಂಸ್ಕೃತಿಯೂ ಬೆಳೆದು ಬಂದಿದೆ. ವಿಶ್ವಕರ್ಮ ಸಮಾಜದ ಶ್ರೀಶೈಲಸ್ವಾಮಿಮಠವೂ ಇಲ್ಲಿ ಪ್ರಸಿದ್ಧ ವಾಗಿದೆ. ಹೀಗೆ ಈ ನಾಡಿನಲ್ಲಿ ಕ್ರಿ.ಪೂ. ೩ನೆಯ ಶತ ಮಾನದಿಂದ ಬೌದ್ಧ, ಜೈನಧರ್ಮಗಳು, ಕ್ರಿ.ಶ. ೧೦ನೆಯ ಶತಮಾನದಿಂದ ಶೈವ, ವೀರಶೈವಧರ್ಮಗಳು ಪರಸ್ಪರ ಆತ್ಮೀಯ ಭಾವದಿಂದ ಬೆಳೆದು ಬಾಳುತ್ತ ಬಂದಿರು ವುದು ಸ್ಪಷ್ಟವಾಗುತ್ತದೆ.

ಶಿಲ್ಪಕಲೆಯ ದೃಷ್ಟಿಯಿಂದಲೂ ಕೊಪ್ಪಳ ಮಹತ್ವದ ಕೊಡುಗೆಯನ್ನಿತ್ತಿದೆ. ಜನಸಾಮಾನ್ಯರು ಈ ನಾಡನ್ನು 'ಊರಾಗ ೭೭೨ ಬಸ್ತಿ, ಬಾಚೀಸಕಲ್ಲ ಮೇಲೊಂದು ಕಿಸ್ತಿ' ಎಂದಾಡಿಕೊಳ್ಳುತ್ತಿದ್ದ ಮಾತಿನಿಂದ ಇದು ಜಿನಾಲಯಗಳ ಬೀಡಾಗಿದ್ದಿತು ಎಂಬುದು ಸ್ಪಷ್ಟವಾಗು ತ್ತದೆ. ಇಂದು ಇವುಗಳ ಕಲ್ಪನೆ ಕೇವಲ ಊಹೆ ಮಾತ್ರ. ಜೈನ ಮಂದಿರಗಳು, ಮೂರ್ತಿಗಳು ಮೊದಲಾದವು ಇಲ್ಲಿಯ ಕೋಟೆ ಕೊತ್ತಲವನ್ನು ಕಟ್ಟಲು ಉಪಯೋಗ

9 ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂ. ೨, ಪು. ೧೫೭
10 ಪಟ್ಟದ್ಧಲಜ್ಞಾನ ಸಾರಾಮೃತ, ಪ್ರಸ್ತಾವನೆ, ಪು. ೩೫

ವಾಗಿರುವುದನ್ನು ನೋಡಬಹುದಾಗಿದೆ. ಗಂಗರಾಜ ಏಚಿರಾಜರ ಆದರ್ಶನಗರನಿರ್ಮಾಣಕ್ಕೆ ಇದು ಮಾರ್ಗ ದರ್ಶಿಯಾಗಿದ್ದಿತು ಎಂಬುದನ್ನು ಈಗಾಗಲೆ ನೋಡಿದೆ. ಇಲ್ಲಿಯ ಶ್ರವಣಬೆಳ್ಗೊಳದ ಹಾಗೆ ಇಂದ್ರಗಿರಿ, ಚಂದ್ರಗಿರಿ ಗಳಿದ್ದವು. ೧೧-೧೨ನೆಯ ಶತಮಾನದ ತರುವಾಯ ಇಲ್ಲಿ ಶಿವಾಲಯಗಳು ನಿರ್ಮಾಣಗೊಂಡವು. ಅವು ಗಳಲ್ಲಿ ಗವಿಮಠ, ಮಳಲಮಲ್ಲೇಶ್ವರ ಮೊದಲಾದುವು ಪ್ರಮುಖವಾದವು. ಕರ್ನಾಟಕದ ಶಿಲ್ಪಕಲಾವೈಭವದ ಅತ್ಯುನ್ನತಿಯನ್ನು ಸಾರುತ್ತಿರುವ, 'ದೇವಾಲಯದ ಚಕ್ರವರ್ತಿ'ಯೆಂದು ಬಣ್ಣಿಸಲ್ಪಟ್ಟಿರುವ ಇಟ್ಟಗಿಯ ಮಹಾದೇವಮಂದಿರ ಕೊಪ್ಪಳಕ್ಕೆ ೨೦ ಮೈಲು ಅಂತರ ದಲ್ಲಿದೆ. ಮೈಸೂರಿನ ಹಳೇಬೀಡನ್ನು ಬಿಟ್ಟರೆ ಕನ್ನಡ ನಾಡಿನಲ್ಲಿ ಇದೇ ಸುಂದರವಾದ ದೇವಾಲಯವೆಂದು ಕಸಿನ್ಸ್ ಅವರ ಅಭಿಪ್ರಾಯ. ಅದೇ ರೀತಿ ನವಲಿಂಗ ಗಳಿಂದಲೂ ಒಂಬತ್ತು ಶಕ್ತಿಪೀಠಗಳಿಂದಲೂ ಕೂಡಿ 'ಶಿವಶಕ್ತಿ ಸುರತ್ ಸಂಪುಟಕ್ಷೇತ್ರ'ವೆಂದು ಬಣ್ಣಿಸಲ್ಪಟ್ಟ ಕುಕನೂರೂ ಹಲವು ಹತ್ತು ದೇವಾಲಯಗಳನ್ನೊಳ ಗೊಂಡು ಕೊಪ್ಪಳಕ್ಕೆ ಸಮೀಪದಲ್ಲಿದೆ. ಅದೇ ರೀತಿ ವೈಷ್ಣವ, ಮುಸ್ಲಿಂ ಕಲಾಕೃತಿಗಳೂ ಇಲ್ಲಿ ದೊರೆಯುತ್ತವೆ. ನೈಸರ್ಗಿಕವಾಗಿ ಬಲಾಢ್ಯವಾಗಿರುವ ಇಲ್ಲಿಯ ಕೋಟೆ ಯನ್ನು ಸರ್ ಜಾನ್ ಮಾಲ್ಕ್ಯಂ ಎಂಬ ಬ್ರಿಟೀಷ್ ಜನರಲ್‌ನು ತಾನು ನೋಡಿದ ಕೋಟೆಗಳಲ್ಲಿ 'ಯಾವ ಕುಂದೂ ಇಲ್ಲದ ಅತ್ಯಂತ ಬಲಾಢ್ಯವಾದ ಕೋಟೆ' ಎಂದು ಬಣ್ಣಿಸಿದ್ದಾನೆ. ಇದು ಚಾಲುಕ್ಯರ ಕಾಲದಲ್ಲಿ ನಿರ್ಮಿಸ ಲ್ಪಟ್ಟು ಹಂತ ಹಂತವಾಗಿ ಬೆಳೆದು ಬಂದಿರಬೇಕು ಎಂದು ಪಂಡಿತರ ಅಭಿಪ್ರಾಯ.

ಹೀಗೆ ಪ್ರಾಚೀನಕಾಲದಿಂದ ಬೇರೆ ಬೇರೆ ಧರ್ಮಗಳ ನೆಲೆವೀಡಾಗಿ, ರಾಜಕೀಯ, ಸಾಂಸ್ಕೃತಿಕ ಚಟುವಟಿಕೆಗಳ ಆಡುಂಬೊಲವಾಗಿ ನಿಂತ ಈ ಸ್ಥಳ ಕನ್ನಡನಾಡಿನ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆಯೆಂದು ಹೇಳ ಬಹುದು.

ಆಧಾರ

೧. ಡಾ॥ ಪಿ. ಬಿ. ದೇಸಾಯಿ : ಶಾಸನ ಪರಿಚಯ

೨. Dr. P. B. Desai : Jainism in South India

೩. ಗವಿದೀಪ್ತಿ (ಕೊಪ್ಪಳ ಶ್ರೀಮಠದ ಪ್ರಕಟಣೆ)

೪. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೨೨-೩

ಡಾ॥ ಶ್ರೀನಿವಾಸ ಹಾವನೂರ

ಬಾಸೆಲ್ ಮಿಶನ್ನಿನ ಗಾಡ್‌ಫ್ರೆ ವೈಗಲ್
(೧೮೧೬ — ೧೮೫೫)

ಕರ್ನಾಟಕದಲ್ಲಿ ಬಾಸೆಲ್ ಇವ್ಯಾಂಜೆಲಿಕಲ್ ಮಿಶನ್ ನೆಲೆಗೊಳ್ಳುವುದಕ್ಕೆ ಹಲವು ಮಿಶನರಿಗಳು ಅವ್ಯಾಹತವಾಗಿ ಪರಿಶ್ರಮಿಸಬೇಕಾಯಿತು. ಅಂಥ ಆರಂಭಕಾರರಲ್ಲಿ ವೈಗಲ್ ಪ್ರಮುಖನು. ಆದರೇನು, ಅವನ ಹೆಸರನ್ನು ಕೂಡಾ ಕೇಳದಿರುವಷ್ಟು ಆತ ಅಪರಿಚಿತನಾಗಿಯೇ ಉಳಿದನು. ಆದರ ಕಾರಣಗಳೆಂದರೆ ಅವನು ಜಾತ್ಯತಃ ಅತ್ಯಂತ ಪ್ರಸಿದ್ಧಿ ವಿಮುಖನಿದ್ದ. ಎರಡನೆಯದು, ಅವನ ಇಲ್ಲಿಯ ಕಾರ್ಯಾವಧಿಯೇ ಕಡಿಮೆಯದಿದ್ದಿತು–ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡನಾದ್ದರಿಂದ. ಈ ಲೇಖದ ಮಟ್ಟಿಗೆ ಅವನ ಪ್ರಾಮುಖ್ಯವಿದ್ದುದು, ಅವನ ಭಾರತೀಯ ತತ್ವಜ್ಞಾನದ ಕುರಿತ ಪರಿಣತಿ ; ಭಾಷಾವಿದಗ್ಧತೆ ಹಾಗೂ ಬೈಬಲಿನ ಕನ್ನಡಾನುವಾದದಲ್ಲಿ ತೋರಿದ ಅನುಪಮವಾದ ಶ್ರದ್ಧೆ. ಮೊದಲಿನ ಎರಡು ಅಂಶಗಳಲ್ಲಿ ಅವನನ್ನು ಮೀರಿಸಿದ್ದವ ಒಬ್ಬನೇ ಆತ ಕಿಟೆಲ್.

ವೈಗಲನ ಜನನ ೧-೭-೧೮೧೬ ರಂದು ; ತ್ಸೆಲ್ ಎಂಬ ಹಳ್ಳಿಯಲ್ಲಿ. ತಂದೆ ಒಬ್ಬ ನಿಷ್ಠಾವಂತ ಭಾವುಕ ಪಾದ್ರಿ. ತಾಯಿ ಅತಿ ಮುಗ್ಧೆ. ಅದೇನು ಕಾರಣವೊ ಗಾಡ್‌ಫ್ರೆ ತನ್ನ ಬಾಲ್ಯವನ್ನು ಅಜ್ಜ- ಅಜ್ಜಿಯರ ಮನೆಯಲ್ಲಿ ಕಳೆಯಬೇಕಾಯಿತಂತೆ. ಆಮೇಲೆಯಾದರೂ ತಂದೆ ತಾಯಿಗಳು, ಇವನು ೧೮ ವರ್ಷದವನಾಗುವ ಮೊದಲೇ ತೀರಿಹೋದರು.

ಆಗಿನ ಕಾಲದ ವಿದ್ಯಾರ್ಥಿಗಳಿಗೆ ತೀಬಿಂಜೆನ್ ವಿಶ್ವವಿದ್ಯಾಲಯದ ಆಕರ್ಷಣೆ ಹೆಚ್ಚಿನದಾಗಿರಬೇಕು. ಅಲ್ಲಿ ವೈಗಲ್ ೧೮೩೫-೩೮ ರ ಅವಧಿಯಲ್ಲಿ ವ್ಯಾಸಂಗ ಮಾಡಿದ. ಆಗ ಅವನು ಕಲಿತ ವಿಷಯಗಳಲ್ಲಿ ಅರಬ್ಬೀ ಹಾಗೂ ಸಂಸ್ಕೃತಗಳೂ ಇದ್ದುವು. ಆ ಮುಂದೆ ಬಾಸೆಲ್ ಮಿಶನ್‌ನಲ್ಲಿ ಶಿಕ್ಷಕನಾಗಿಯೇ ತನ್ನ ವೃತ್ತಿಯನ್ನು ಆರಂಭಿಸಿದನು. ಅಲ್ಲಿಂದ ಭಾರತಕ್ಕೆ ಬರುವುದು ಕ್ರಮಪ್ರಾಪ್ತವೆನ್ನುವಷ್ಟು ಸೀದಾ ಇಲ್ಲಿಗೆ ಮುಂಬಯಿ ಮಾರ್ಗವಾಗಿ ಹೊರಟು ಬಂದನು (೧೮೪೦). ಆಗ ಅವನ ಜೊತೆಗಿದ್ದವರೆಂದರೆ ಜೆ. ಮುಲ್ಲರ್, ಜೆ ಅಮ್ಮಾನ್ ಮತ್ತು ಎಂ. ಫ್ರಿಜ್.

ಮಂಗಳೂರಿನಲ್ಲಿ ಹರ್ಮನ್ ಮೊಗ್ಲಿಂಗ್ ಅವನ ಆಪ್ತಸ್ನೇಹಿತನೆನಿಸಿದ. ಬಾಸೆಲ್ ಮಿಶನ್ನಿನ ಆರಂಭಕಾಲದ ಮಿಶನರಿಗಳಲ್ಲೆಲ್ಲ ಮೊಗ್ಲಿಂಗ್ ಅತ್ಯಂತ ಮೇಧಾವಿ ಹಾಗೂ ಕರ್ತೃತ್ವಶಾಲಿ ಎಂಬ ಖ್ಯಾತಿಯನ್ನು ಹೊಂದಿದ್ದನು. ವೈಗಲ್‌ನಿಗೆ ಆತನು ಆಪ್ತ ಸಂಬಂಧಿಯೂ ಹೌದು. (ಎಂದರೆ ಮೊಗ್ಲಿಂಗನ ಮಲತಾಯಿಯು ವೈಗಲನ ತಂದೆಯ ಎರಡನೇ ಹೆಂಡತಿ) . ವೈಗಲ್‌ನ ಮದುವೆಯ ವಿಷಯದಲ್ಲಿ ಮೊಗ್ಲಿಂಗನ ತಂದೆಯೇ ಆಸ್ಥೆವಹಿಸಿ ಪಾಲಿನ್ ಎಂಬವಳನ್ನು ಸಲಹೆ ಮಾಡಿದ್ದನಂತೆ. ಇಂಥ ಸಂಬಂಧ ಅಷ್ಟಕ್ಕೇ ಮುಗಿಯಲಿಲ್ಲ. ವೈಗಲ್ ನಡುವಯದಲ್ಲಿ ತೀರಿಕೊಂಡಾಗ, ಅದುವರೆಗೆ ಮದುವೆಯೇ ಆಗದಿದ್ದ ಮೊಗ್ಲಿಂಗ್ ಪಾಲಿನ್‌ಳನ್ನೇ ಮದುವೆಯಾದುದಲ್ಲದೆ, ವೈಗಲ್ ದಂಪತಿಗಳ ನಾಲ್ವರು ಮಕ್ಕಳನ್ನೂ ಸಾಕುವ ಹೊಣೆ ಹೊತ್ತನು. ಅಷ್ಟರ

ಮಟ್ಟಿಗೆ ಈ ಜ್ಞಾತಿ–ಸ್ನೇಹಿತರ ಸದ್ಭಾವವು ಆಳ ವಾಗಿದ್ದಿತು.

ಮೊಗ್ಲಿಂಗ್ ಇವನಿಗಿಂತ ನಾಲ್ಕು ವರ್ಷ ಮುಂಚೆಯೇ ಬಂದವನಷ್ಟೆ. ಆಗಿನ ಕ್ರಮದಂತೆ ಮೊದಲು ಬಂದ ಮಿಶನರಿಗಳು ಅನಂತರ ಬಂದವರಿಗೆ ಸ್ಥಾನಿಕ ಭಾಷೆಯನ್ನು ಕಲಿಸಬೇಕು. ವೈಗಲ್ ಕನ್ನಡ – ತುಳು ಭಾಷೆಗಳನ್ನು ಹಾಗೆ ಕಲಿತನೆನ್ನಬಹುದೆ ? ಇಲ್ಲ. ಮೊಗ್ಲಿಂಗನೇ ಹೀಗೆ ಹೇಳಿದ್ದಾನೆ :

> "When and how he learned Canerese in which I don't, and if any Missionary excelled him, I cannot tell though we lived day and night together for several days."

ಆರಂಭ ಕಾಲದ ಮಿಶನರಿ ಜನರು ಎಲ್ಲ ಬಗೆಯ ಕೆಲಸಕ್ಕೂ ಅಣಿಯಾಗಬೇಕಿತ್ತಲ್ಲದೆ–ಪ್ರವಚನ, ಅನುವಾದ ಮುದ್ರಣ, ಶಿಕ್ಷಣ, ವೃತ್ತಿ ತರಬೇತಿ, ಏನೆಲ್ಲ. ಮಂಗಳೂರಿಗೆ ಬಂದ ಕೆಲವೇ ತಿಂಗಳಲ್ಲಿ ವೈಗಲ್ ಅಲ್ಲಿಯ ಇಂಗ್ಲಿಶ್ ಶಾಲೆಯನ್ನು ವಹಿಸಿಕೊಂಡನು (೧೮೪೧). ಮಿಶನ್ನಿಗೆ ತನ್ನದೇ ಆದ ಮುದ್ರಣಾಲಯವಿಲ್ಲದ್ದು ಅವನಿಗೆ ಬಹು ದೊಡ್ಡ ಕೊರತೆಯಾಗಿ ಕಂಡಿತು. ಸ್ವದೇಶದಿಂದ ಹೊರಟು ಇಲ್ಲಿಗೆ ಬರುವ ಮುಂಚೆ ಮುಂಬಯಿಯಲ್ಲಿ ಕೈ ಮುದ್ರಣದ, ಯಂತ್ರಗಳನ್ನು ಕಂಡಿದ್ದನು. ಅಲ್ಲಿದ್ದವರ ಅಲ್ಪ ಪರಿಚಯದ ಆಸರೆಯನ್ನು ನೆಚ್ಚಿಕೊಂಡು, ಮುಂಬಯಿಗೆ ಹೋಗಿ ಬಂದು ಮುದ್ರಾ ಯಂತ್ರವನ್ನು ತಂದೇಬಿಟ್ಟನು (೧೮೪೨). ಕರ್ನಾಟಕವಷ್ಟೆ ಅಲ್ಲದೆದಕ್ಷಿಣ ಭಾರತದಲ್ಲಿಯೇ ಶ್ರೇಷ್ಠ ಮುದ್ರಣಾಲ ಯವೆಂದು ೬೦–೭೦ ವರ್ಷಗಳ ಕಾಲ ಖ್ಯಾತಿಯನ್ನು ಪಡೆ ದಿದ್ದ ಬಾಸೆಲ್ ಮಿಶನ್ನಿನ ಮುದ್ರಣ ಕಾರ್ಯಕ್ಕೆ ವೈಗಲನೇ ಹೀಗೆ ನಾಂದಿಯನ್ನು ಹಾಡಿದನೆಂಬುದನ್ನು ಗಮನಿಸ ತಕ್ಕದು.

ಆಮೇಲೆ ವೈಗಲ್‌ನನ್ನು ನೀಲಗಿರಿಗೆ ಕಳಿಸಲಾಯಿತು. ಅಲ್ಲಿಯ ಬ್ರಿಟಿಶ್ ಅಧಿಕಾರಿ ಕೆಸಮಜೋರ್ ಎಂಬವನ ಪ್ರೋತ್ಸಾಹ–ಪೋಷಣೆಯಿಂದ ವೈಗಲ್ ಬಡಗು ಮಿಶನ್ ಸ್ಥಾಪಿಸಿದನು. ತನ್ನ ಕಡೆಗಾಲದಲ್ಲಿ ಅವನು ಕೆಲವು ವರ್ಷ ಧಾರವಾಡದ ಮಿಶನ್ನಿನಲ್ಲಿಯೂ ಸೇವೆ ಸಲ್ಲಿಸಿ ದ್ದಾನೆ.

ವೈಗಲ್‌ನ ಕುಶಾಗ್ರಮತಿತ್ವವು ಮಿಶನ್ನಿನ ಸಹೋ ದ್ಯೋಗಿಗಳಿಗೆ ಆದಾಗಲೇ ಮನದಟ್ಟಾಗಿದ್ದಿತು. He seemed to take things into his mind as one puts food into one's mouth to digest at his ease ; and then it was his own—ಎಂಬ ಮೊಗ್ಲಿಂಗನ ಹೇಳಿಕೆಯ ಇಂಗಿತ ಇದುವೇ. ಜೊತೆಗೆ ವೈರುಧ್ಯವೆನಿಸುವಂಥ ವಿಷಯಗಳಲ್ಲಿಯೂ ಅವನಿಗೆ ಆಳ ವಾದ ಆಸಕ್ತಿ ಇದ್ದಿತು. ಉದಾಹರಣೆಗೆ ಗಣಿತ, ಸಂಗೀತ, ವೈದ್ಯಕೀಯ.

ವಿಶೇಷವಾಗಿ ಉಲ್ಲೇಖಿಸಬೇಕಾದದ್ದು ಅವನ ಭಾರ ತೀಯ ತತ್ವಜ್ಞಾನದ ವ್ಯಾಸಂಗ. ಕ್ರಿ. ಶ. ೧೮೪೬ ರ ಸುಮಾರಿಗೆ ಲಂಡನ್ ಮಿಶನ್ನಿನ ಜಾನ್ ಗ್ಯಾರೆಟ್ ಭಗವದ್ಗೀತೆಯ ವಿವಿಧ ಭಾಷಾನುವಾದಗಳುಳ್ಳ ಹಾಗೂ ವ್ಯಾಖ್ಯೆ ಇರುವ ಆವೃತ್ತಿಯನ್ನು ಹೊರ ತರಬಯಸಿದಾಗ ವೈಗಲ್ ಅವನಿಗೆ ಸಲಹೆ ಇತ್ತುದಲ್ಲದೆ, ಗೀತೆಯ ಕನ್ನಡ ಅನುವಾದದ ತಿದ್ದುಗೆಯಲ್ಲಿ ಆಸರೆಯಾಗಿದ್ದಾನೆ. ಬ್ಯಾರನ್ ಹಂಬೋಲ್ಟ್ ಎಂಬ ಜರ್ಮನ್ ತತ್ವವೇತ್ತನು ಭಗವದ್ಗೀತೆಯನ್ನು ಕುರಿತು ಪ್ರೌಢವಾದ ವ್ಯಾಖ್ಯಾನ ವನ್ನು ಬರೆದಿದ್ದು, ವೈಗಲ್ ಅದರ ಇಂಗ್ಲಿಷ್ ಅನುವಾದ ಮಾಡಿ ಗ್ಯಾರೆಟ್‌ನಿಗೆ ಕಳಿಸಿಕೊಟ್ಟನು. ಜೊತೆಗೆ ಅದಕ್ಕೆ ತನ್ನ ಟೀಕೆ–ಟಿಪ್ಪಣಿಯನ್ನೂ ಸೇರಿಸಿದನು. This interpretation of the learned Baron is very doubtful ಎಂದು ಅಭಿಪ್ರಾಯಿಸುವಷ್ಟು ವೈಗಲನ ಆರ್ಷೇಯ ವ್ಯಾಸಂಗವು ಪ್ರಬುದ್ಧವಾಗಿದ್ದಿತು.

ವೈಗಲನ ಇನ್ನೊಂದು ಮನನೀಯ ಕೃತಿಯೆಂದರೆ ಬನ್ಯನ್ನನ Pilgrim's Progress ದ ಕನ್ನಡಾನುವಾದ. 'ಯಾತ್ರಿಕನ ಸಂಚಾರ' ಎಂದು ಅದರ ಹೆಸರು. ಆ ಮುಂಚೆ ಅದು ಅನುವಾದಗೊಂಡಿದ್ದರೂ (ಬಳ್ಳಾರಿ ಮಿಶನ್ನಿನವ ರಿಂದ) ವೈಗಲನದು ಉತ್ತಮವೆಂದೆನಿಸಿದೆ. ಇಷ್ಟೇ ಅಲ್ಲ, ಮೂಲದಲ್ಲಿಯ ಪದ್ಯಗಳನ್ನು ಕನ್ನಡದ್ದೇ ಆದ ವೃತ್ತಗಳಲ್ಲಿ (ಚೌಪದಿ, ಷಟ್ಪದಿ) ಅನುವಾದಿಸಲಾಗಿದ್ದು ಅವು ಹೊಸ ಗನ್ನಡದ ಆದಿಮ ಪದ್ಯಗಳೆನಿಸಿವೆ. (ರಂ. ಶ್ರೀ. ಮುಗಳಿ ಯವರು ತಮ್ಮ 'ಕನ್ನಡ ಸಾಹಿತ್ಯದ ಇತಿಹಾಸ' ಎಂಬ

ವಿವಿಧ ಭಾರತೀಯ ಭಾಷಾನುವಾದಿತ ಕೃತಿಯಲ್ಲಿ ಅದರ ಈ ಹೆಚ್ಚುಗಾರಿಕೆಯನ್ನು ಎತ್ತಿ ತೋರಿಸಿದ್ದಾರೆ).

ಆವನ ಭಾಷಾಂತರ ಸಾಮರ್ಥ್ಯವನ್ನು ತನ್ನದರೊಂದಿಗೆ ಹೋಲಿಸಿಕೊಳ್ಳುತ್ತ ಮೊಗ್ಲಿಂಗ್ ಹೇಳುವುದು ಹೀಗೆ :

He had a peculiar gift in translating. He did not like to translate quite literally. But he entered so thoroughly into the spirit and taste of the original before him and had so correct an instinct in seizing the appropriate materials from the stores of the sacred languages for reconstructing the building as it were, on new ground that, if he did not produce photographs, (which too often look lifeless though of course correct), he gave speaking likenesses.

We had many a brotherly battle on this score in translating the scriptures, because I often wished to obtain, what sometimes proved an impossibility, a perfect transfusion not of the substance only, but of the form also of the inspired text into the Canerese mould. ....He would sometimes treat me, who was sadly inferior to him in philological attainments in a manner that would remind me of the hallucination of some learned Professor, seized with profound respect for the scholarship of the follower who carries his books for him !

ಇದು ಮಾತ್ರವಲ್ಲ, ಮಿಶನ್ನಿನವರ 'ಕ್ರೈಸ್ತ ಗೀತಗಳು' ಸಂಕಲನದಲ್ಲಿಯೂ ವೈಗಲನ ಪದ್ಯರಚನೆಗಳಿವೆ. (ಅದರ ೧೮೪೪ರ ಪ್ರಥಮ ಆವೃತ್ತಿಯ ೧೦೦ ಗೀತಗಳಲ್ಲಿ ೨೩ ಗೀತಗಳು ವೈಗಲನವೇ ಆಗಿವೆ). ಇದೊಂದು ಮಾದರಿ :

(ಮೂಲ :Gott erhalte.........)

ಮೃತ್ಯುವಿನ ಬಂಧವನ್ನು ಬಿಡಿಸಿದ ಮನುಜ !
ಶತ್ರು ತಂದ ಸೇನೆಯನ್ನು ಓಡಿಸಿದ ನಾಯಕ !
ತ್ರಾಣದಿಂದ ಲೋಕವಾಳು, ಕ್ರೂಜೆ ತಾಳಿದವನೆ !
ಜಯಪ್ರದನಾಗಿ ಬಾಳು, ಘನವುಳ್ಳ ರಾಜನೆ

೦ ೦ ೦

ಕ್ಷೇಮವಾಗಿ ಸಾಯುತ್ತೇನೆ ತಂದೆಗಾತ್ಮವೊಪ್ಪಿಸಿ
ಗೋರಿದ್ವಾರ ಹಾಯುತ್ತೇನೆ ನಿನ್ನ ಗೋರಿ ನೆನಸಿ
ಈ ಶರೀರವನ್ನು ಕೀಟ ತಿಂದರೇನು ಚಿಂತೆಯು ?
ನಿತ್ಯ ಮಹಿಮೆ ಕಿರೀಟ ಹೊಂದಿ
ಹರ್ಷಗೊಂಬೆನು.

ಆಧುನಿಕ ಸಾಹಿತ್ಯದ ಆರಂಭ ಕಾಲದ ಕವಿತೆ ಇದಾಗಿದ್ದರೂ ಸಾಕಷ್ಟು ಉತ್ತಮ ಮಟ್ಟದ ರಚನೆಯೇ ಆಗಿದೆ. ಹೊಸಗನ್ನಡ ಕವಿತಾ ರಚನೆಗೆ ಕ್ರೈಸ್ತ ಪದ್ಯಗಳೇ ಮೊದಲ ಹೆಜ್ಜೆಗಳು. ಅದನ್ನು ಆರಂಭಿಸಿದವರಲ್ಲಿ ವೈಗಲ್ ಎದ್ದು ತೋರುತ್ತಾನೆ.

ಜರ್ಮನಿಯ ಸುಪ್ರಸಿದ್ಧ ZDMG ಪತ್ರಿಕೆಯಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಕುರಿತು, ತಕ್ಕಮಟ್ಟಿಗೆ ಸುದೀರ್ಘವಾದ ಲೇಖವೊಂದು ಪ್ರಕಟವಾಯಿತು. ಅದುವರೆಗೆ ಕುಮಾರವ್ಯಾಸಭಾರತ, ಜೈಮಿನಿಭಾರತ, ರಾಜಶೇಖರವಿಳಾಸ, ದಾಸರ ಕೆಲವು ಹಾಡುಗಳು-ಮುಂತಾಗಿ ಕೆಲವೇ ಕೃತಿಗಳು ಕನ್ನಡ ಕಾವ್ಯದ ಪ್ರತೀಕಗಳಾಗಿ ಬಳಕೆಯಲ್ಲಿದ್ದುವು-ಅದೂ ತಾಡವೋಲೆ, ಇಲ್ಲವೆ ಕೈಬರಹದ ಕಾಗದಪ್ರತಿಗಳ ರೂಪದಲ್ಲಿ. ಕನ್ನಡ ಸಾಹಿತ್ಯದ ಪರಂಪರೆಯ ಕಲ್ಪನೆ ಕನ್ನಡಿಗರಿಗೇ ಇರಲಿಲ್ಲ. ಹೀಗಿರುತ್ತಾ ಯುರೋಪಿಯನ್ನರಿಗೆ ಅದರ ಪರಿಚಯ ಮಾಡಿಕೊಟ್ಟದ್ದು ಇನ್ನಷ್ಟು ಹೆಗ್ಗಳಿಕೆಯ ಅಂಶವಾಗಿದೆ.

ಈ ಲೇಖದ ಕರ್ತೃ ವೈಗಲ್. ಅದನ್ನು ಈತ ಬರೆದದ್ದಕ್ಕೆ ತುಸು ಹಿನ್ನೆಲೆ ಇದೆ. ಆ ಕಾಲಕ್ಕೆ ಮಿಶನ್ನಿನ ತರಬೇತಿ ಕೇಂದ್ರದ ಪ್ರಾಚಾರ್ಯನಾಗಿದ್ದ ಡಾ॥ ಹಾಫ್‌ಮನ್ ಇಂಥದೊಂದು ಲೇಖವನ್ನು ಬರೆಯಲು ಮೊಗ್ಲಿಂಗನಿಗೆ ಕೇಳಿದ್ದನು. (ಆವಾಗ ಮೊಗ್ಲಿಂಗ್ ಸ್ವದೇಶದಲ್ಲಿಯೆ ಇದ್ದ. ಆದರೆ ಅವನು "ಮೂರು ತಿಂಗಳ ಅವಧಿಯನ್ನು ಕೊಡಿರಿ. ಈ ವಿಷಯದಲ್ಲಿ ನನಗಿಂತ ಬಲ್ಲಿದನಾದ ವೈಗಲ್‌ನಿಂದ ಬರೆಸಿ ತರಿಸುವೆ" ಎಂದು ಹೇಳಿದನಂತೆ.

ಸರಿ, ಅವನ ಪತ್ರವನ್ನು ಹಡಗವೊಂದು ಹೊತ್ತು ತಂದು ವೈಗಲನಿಗೆ ಒಪ್ಪಿಸಿತು. ಇನ್ನೀಗ ಆ ಹಡಗು ಮರಳಿ ಹೋಗುವುದರೊಳಗೆ ಎಂದರೆ ೧೦-೧೫ ದಿನಗಳ ಅವಧಿಯಲ್ಲಿ ಬರೆದು ಕಳಿಸಬೇಕೆಂದು ಮೊಗ್ಲಿಂಗನ ಆಗ್ರಹ. ಅಂತೂ ಲೇಖವನ್ನು ಮುಗಿಸಿ ಕಳಿಸಿದ್ದಾಯಿತು. ಬೇಗ ಪ್ರಕಟವೂ ಆಯಿತು.

ಹೀಗೆ ಸಮಯದ. ಆದಕ್ಕಿಂತ ಹೆಚ್ಚಾಗಿ ಸಾಮಗ್ರಿಯ ಅಭಾವ ಇರುವಾಗಲೂ ವೈಗಲ್ ಈ ಲೇಖದಲ್ಲಿ ಹೇಳಿದ ಕೆಲವು ಅಂಶಗಳು ವೈಶಿಷ್ಟ್ಯಪೂರ್ಣವೆನಿಸಿವೆ. ಉದಾ.ಗೆ ಆತನು ಸುರುವಿಗೆ ಕನ್ನಡ ಭಾಷೆಯನ್ನು ಸಂಸ್ಕೃತ ಹಾಗೂ ದ್ರಾವಿಡ ಭಾಷೆಗಳಿಗೆ ಹೋಲಿಸುತ್ತ ವಿವರಿಸಿದುದು. ಈ ಬಗೆಯ ತೌಲನಿಕ ಅಭ್ಯಾಸ ಆಗಿನ ದಿನಗಳಲ್ಲಿ ಇರಲೇ ಇಲ್ಲ. ಸಾಹಿತ್ಯ ಕೃತಿಗಳ ವಿಚಾರವಾಗಿ ಬರೆಯುತ್ತ, ಯಕ್ಷಗಾನ ಪ್ರಸಂಗಗಳು ಹಾಗೂ ಜಾನಪದ ಹಾಡುಗಳು ಇವನ್ನು ಸಾಹಿತ್ಯದ ಅಂಗವಾಗಿಯೇ ಪರಿಗಣಿಸಿದುದು. 'ಜನಪದ ಸಾಹಿತ್ಯವು ಸ್ವತಂತ್ರ ಶುದ್ಧ ಕಾವ್ಯ; ಅಂತರ್ ಸೌಂದರ್ಯದಲ್ಲಿ ಲಿಖಿತ ಕಾವ್ಯಗಳಿಗೆ ಯಾವುದಕ್ಕೂ ಕಡಿಮೆ ಅಲ್ಲ. ಅದರಂತೆ ಇಲ್ಲಿಯ ಜನಪದ ಕಥೆಗಳು ಪ್ರಪಂಚದ ಯಾವುದೇ ಜನಪದ ಕಥನಗಳಿಗೂ ಸರಿಸಾಟಿಯಾಗಿವೆ" ಎಂದು ಹೇಳಿ ಅವಕ್ಕೆ ಸಾಹಿತ್ಯಿಕ ಮೌಲ್ಯವನ್ನು ತಂದುಕೊಟ್ಟಿದ್ದಾನೆ. (ಮುಂದೆ ಕನ್ನಡ ಸಾಹಿತ್ಯವಾಹಿನಿಯು ಸಾಗಿ ಬಂದಿದ್ದರೂ. ಜನಪದ ಸಾಹಿತ್ಯಕ್ಕೆ ಮನ್ನಣೆ ದೊರೆತುದು ಕಳೆದ ೪೦ ವರ್ಷಗಳಿಂದೀಚೆಗೆ ಮಾತ್ರ). ಮುಂದುವರಿದು ವೈಗಲ್ ೧೮೨೦-೧೮೪೫ರ ವರೆಗಿನ ಕ್ರೈಸ್ತವಾಙ್ಮಯವನ್ನೂ ಸಮೀಕ್ಷೆ ಮಾಡಿದ್ದಾನೆ. ಆ ನಿಮಿತ್ತದಿಂದ 'ಇಲ್ಲಿಯ ದೇಶೀಯರು ಕಲಿತಿರೋದು ಅಷ್ಟಕ್ಕಷ್ಟೆ, ಹೇಗೆ ಬರೆದರೂ ನಡೀತದೆ' ಎಂಬ ಗ್ರಹಿಕೆಯಿಂದ ಹಸಿಬಿಸಿಯಾಗಿ ಇವರುಗಳು ಅನುವಾದ ಮಾಡಿದ್ದಾರೆಂದು ಟೀಕಿಸುವ ಧೈರ್ಯವನ್ನೂ ತೋರಿದ್ದಾನೆ.[1]

ಹಳಗನ್ನಡ ಶಬ್ದಗಳ ಕೋಶದಂತಿರುವ 'ಕರ್ನಾಟಕ ಶಬ್ದಮಂಜರಿ' ಎಂಬ ಚಿಕ್ಕ ಕೃತಿಯಿದೆ. ಇದು ಕನ್ನಡದ ಅಮರಕೋಶವೇ ಸೈ ಎಂಬುದಾಗಿ ವೈಗಲ್ ಮೇಲಿನ ಲೇಖದಲ್ಲಿ ತನ್ನ ಮೆಚ್ಚಿಕೆಯನ್ನು ಸೂಚಿಸಿದ್ದಾನೆ. ಈ ಮೆಚ್ಚಿಕೆಯ ಪರಿಣಾಮವೂ ಎಂಬಂತೆ ವೈಗಲ್ ಅದನ್ನು ಇಂಗ್ಲಿಶ್‌ಗೆ ಅನುವಾದಿಸುವುದೆಂದು ಕೈಗೆತ್ತಿಕೊಂಡ. ಆದರೆ ಅದನ್ನು ಮುಗಿಸಿದಂತೆ ತೋರಲಿಲ್ಲ.[2]

ಕನ್ನಡ ಭಾಷೆಯಲ್ಲಿ ಅವನು ಪಡೆದಿದ್ದ ಪರಿಣತಿಯಿಂದಾಗಿ ಅವನು ಹಲವಾರು ಚಿಕ್ಕ ಮತಪುಸ್ತಕಗಳನ್ನು ಬರೆಯಬೇಕಾಗಿ ಬಂದಿತು.[3] ಆದರೆ ಕ್ರೈಸ್ತ ಸಾಹಿತ್ಯಕ್ಕೆ ಅವನಿಂದ ಸಂದ ಬಹು ದೊಡ್ಡ ಕೊಡುಗೆ ಎಂದರೆ ಬೈಬ

---

1. ಈ ಲೇಖದ ಐತಿಹಾಸಿಕ ಮಹತ್ವವನ್ನು ಮನದಂದು ಗೀತಾ ಧರ್ಮಪಾಲ ಎಂಬವರು ಅದರ ಇಂಗ್ಲಿಶ್ ಅನುವಾದವನ್ನು The Quarterly Journal of the Mythic Society, Bangalore—ಈ ಪತ್ರಿಕೆಯಲ್ಲಿ (೧೯೮೧) ಪ್ರಕಟಪಡಿಸಿದ್ದಾರೆ.

2. ಬಾಸೆಲಿನ ಆರ್ಕೈವ್ಜ್‌ಗೆ ನಾನು ಹೋದಾಗ ಇದರ ಒಂದೆರಡು ಹಾಳೆಗಳು ಮಾತ್ರ ನನಗೆ ನೋಡಸಿಕ್ಕಿದುವು. ಅಂದಹಾಗೆ ಈ ಅವನ ಹಸ್ತಾಕ್ಷರವೂ ಮಿಶನ್ನಿನ ಮುದ್ರಣಾಲಯದಲ್ಲಿ ಮುದ್ರಿತವಾದ ಕೆಲವು ಕಲ್ಲಚ್ಚಿನ ಪುಸ್ತಕಗಳ ಹಸ್ತಾಕ್ಷರವೂ ಒಂದೇ ಆಗಿದ್ದುದು ಕಂಡು ಬಂತು. ತಾತ್ಪರ್ಯ: ವೈಗಲನೇ ಬಳಪದ ಕಲ್ಲಿನ ಮೇಲೆ ಅಕ್ಷರಗಳನ್ನು ಕೊರೆದು ಮುದ್ರಣಕ್ಕೆಂದು ಅಣಿಗೊಳಿಸಿರಬೇಕು. ಮಂಗಳೂರು ಮುದ್ರಣಕ್ಕೆ ನಾಂದಿಯನ್ನು ಹಾಡಿದವನೆಂಬ ಮಾತಿಗೆ ಈ ಕೈಂಕರ್ಯವನ್ನೂ ಸೇರಿಸಬೇಕು.

3. ಅವಾವುವೆಂದರೆ:

—ಪ್ರಾರ್ಥನೆಗಳು, ಮುಂ. (Canerese Prayers Private Prayers for Native Christians for the morning and evening of every day of the week), ಪು. ೮೮

—ದೇವರ ವಾಕ್ಯದ ಬೋಧನೆಯ ಪ್ರಶ್ನೋತ್ತರ (First Catechism), ಪು. ೧೨

— ದೃಢೀಕರಣದ ಪ್ರಶ್ನೋತ್ತರ (Second Catechism to be learned for confirmation)

ಲಿನ ಕನ್ನಡಾನುವಾದದ ಪರಿಷ್ಕರಣ ಕಾರ್ಯ. ಅನೇಕರಿಗೆ ಗೊತ್ತಿದ್ದ ಹಾಗೆ ಮದ್ರಾಸ ಆಕ್ಸಿಲಿಯರಿ ಬೈಬಲ್ ಸೊಸೈಟಿಯು ೧೮೪೪ರಲ್ಲಿ ಕರ್ನಾಟಕದ ಎಲ್ಲ ಪ್ರೊಟೆಸ್ಟಂಟ್ ಮಿಶನ್ ಸಂಸ್ಥೆಗಳ ಪ್ರತಿನಿಧಿಗಳಿರುವ ಒಂದು ಸಮಿತಿಯನ್ನು ರಚಿಸಿ, ಆಗಣ ಕನ್ನಡ ಬೈಬಲಿನ ನವೀಕರಣದ (revision) ಕೆಲಸವನ್ನು ಒಪ್ಪಿಸಿತು. ವೆಸ್ಲಿಯನ್, ಲಂಡನ್ ಮಿಶನ್ ಸಂಸ್ಥೆಗಳಿಂದ ಬಂದ ಪ್ರತಿನಿಧಿಗಳಲ್ಲಿ ಹಲವರು ಹಿರಿಯ ಮಿಶನರಿಗಳಿದ್ದಾಗ್ಯೂ ಇದರ ಅಧ್ಯಕ್ಷತೆಯನ್ನು ವಹಿಸಿಕೊಟ್ಟದ್ದು ೩೪ ವರ್ಷದ ವೈಗಲ್‌ನಿಗೆ.

ಮದ್ರಾಸ ಸಂಘದವರು ಮೊದಲಿಗೆ ಹೊಸ ಒಡಂಬಡಿಕೆಯ ಅನುವಾದ ಭಾಗಗಳನ್ನು ನವೀಕರಿಸ ಹೇಳಿದ್ದರು. ವೈಗಲ್ ಯಾವ ದೇಶೀ ಮುನಶಿಯ (ಆಗಿನ ಕಾಲದ ಪದ್ಧತಿಯಂತೆ) ಸಹಾಯವನ್ನು ಪಡೆಯದೇ, ತಾನೇ ಆ ಕೆಲಸವನ್ನು ಪೂರೈಸಿದುದು ಅವನ ಭಾಷಾ ಪರಿಣತಿಗೆ ನಿದರ್ಶನವಾಗಿದೆ. ಅಂತೂ ಆ ಕೆಲಸ ಸಮರ್ಪಕವಾಗಿ ಮುಗಿದದ್ದನ್ನು ಕಂಡು ಹಳೆಯ ಒಡಂಬಡಿಕೆಯ ಕಾರ್ಯವನ್ನೂ ಇವನಿಗೇ ಒಪ್ಪಿಸಿದರು.

ವೈಗಲ್ ಜನರೊಂದಿಗೆ ಆಗಿಂದಾಗ ಹೊಂದಿಕೊಳ್ಳುವ ಸ್ವಭಾವದವನಿರಲಿಲ್ಲ. ಪರಿಚಯ ಕಡಿಮೆ ಇದ್ದರೆ ಮುದುಡಿಕೊಂಡು ಬಿಡುತ್ತಿದ್ದ. ಈ ಪರಿಷ್ಕರಣ ಸಮಿತಿಯಲ್ಲಿ ಆರು ಜನ ಇದ್ದರು. ಅನುವಾದಿತ ಇಲ್ಲವೆ ಪರಿಷ್ಕೃತವಾದುದನ್ನು ಓದಿ ಚರ್ಚಿಸುವುದು ವಾಡಿಕೆ. ವೈಗಲ್ ತನ್ನ ಭಾಗವನ್ನು ಓದಿ ಹೇಳಿದಾಗ ಸ್ವಾಭಾವಿಕವಾಗಿಯೇ ಬೇರೆ ಪದಗಳನ್ನು ಚರ್ಚಿಸುತ್ತಿದ್ದರು. ವೈಗಲನಿಗೆ ಆಗ ಮುಜುಗರ, ತಪ್ಪಿತಸ್ಥನ ಭಾವನೆ–ನನ್ನ ಅನುವಾದ ಸಾಮರ್ಥ್ಯವನ್ನೆ ಕೆಣಕುತ್ತಿದ್ದಾರೆ ಎಂಬ ರೀತಿಯಲ್ಲಿ. ಅನೇಕ ಬಾರಿ ತನ್ನದು ಸರಿ ಎಂದು ತೋಚಿದ್ದರೂ ಅದನ್ನು ಗಟ್ಟಿಯಾಗಿ ಸಮರ್ಥಿಸಿಕೊಳ್ಳಲು ಹಿಂದೇಟು. ಕಾರಣ ಗೊತ್ತೆ ? ಹಾಗೇ ಮಾಡಿದರೆ ಇತರರಿಗಿಂತ ತಾನು ಶ್ರೇಷ್ಠ ಎಂದು ಪ್ರದರ್ಶಿಸಿದಂತಾಗಲಾರದೆ ? ...ಹೀಗಿರುತ್ತ ಯಾವುದೊ ಒಂದು ಸಭೆಯಲ್ಲಿ ಆರರ ಪೈಕಿ ಮೂವರು ಮಾತ್ರ ಹಾಜರಿದ್ದರಂತೆ. ವೈಗಲ್‌ನಿಗೆ ಆಗ ಪರಮ ನಿಶ್ಚಿಂತೆ !

ಪ್ರವಚನ ಸಂದರ್ಭಗಳಲ್ಲಿಯೂ ಈ ಮನೋಭಾವದ ಪಡಿನೆಳಲು ವ್ಯಕ್ತವಾಗುತ್ತಿತ್ತು. ಆಗಿನ ಕಾಲದಲ್ಲಿ ಸಂತೆ, ಪೇಟೆಯ ಸ್ಥಳಗಳಲ್ಲಿ ಪ್ರಚಾರ–ಪ್ರವಚನಗಳನ್ನು ನಡೆಸಬೇಕಿತ್ತಲ್ಲವೆ. ಅದನ್ನು ಕೇಳ ಬರುವವರಲ್ಲಿ ಹೆಚ್ಚಿನವರು ಕ್ರೈಸ್ತಮತ ವಿರೋಧಿಗಳು, ತಾನೇ. ಪ್ರಸಂಗ ಬಂದರೆ ಅವರು ಮಿಶನರಿ ಜನರೊಡನೆ ಕಾಲ್ಕೆದರಿ ಜಗಳ ತೆಗೆಯಲೂ ಸಿದ್ಧ. ಅಂಥ ಸಭೆಯಲ್ಲಿ ಪ್ರಭಾವಯುತವಾಗಿ ಪ್ರವಚನ ಮಾಡುವರೆ, ಹೆಬಿಕ್,ಮೊಗ್ಲಿಂಗರಂತಹರೇ ಸೈ ! ಅದೇ, ಚರ್ಚಿನ ಶಾಂತ ವಾತಾವರಣದಲ್ಲಿ, ಆಸ್ತಿಕ ಭಾವನೆ ಇದ್ದವರ ಸಮ್ಮುಖದಲ್ಲಿ ಪ್ರವಚನ ಮಾಡುವರೆ, ವೈಗಲನಂತೆ ನಿತಾಂತವಾಗಿ ಭಾವಪೂರ್ಣವಾದ ಪ್ರವಚನ ಮಾಡುವವರು ಬಾಸೆಲ್ ಮಿಶನ್ನಿನಲ್ಲಿ ಇನ್ನಾರೂ ಇದ್ದಿರಲಾರರು.

ಈ ಬಗೆಯ ಮಿದುತನವೇ ಕುಟುಂಬ ಜೀವನದಲ್ಲಿ ಅವನನ್ನು ಹೆಂಗರುಳಿನವನನ್ನಾಗಿ ಮಾಡಿದ್ದಿತು. ಮಕ್ಕಳಿಗೆ ಸಾದಾ ನೆಗಡಿ–ಕೆಮ್ಮು ಬಂದರೂ ಅವನು ಕಳವಳಗೊಳ್ಳುತ್ತಿದ್ದನು. ಪತ್ನಿ ಪಾಲನ್‌ಳಿಗೆ ಒಮ್ಮೆ ಜ್ವರ. ಅದು ನಿಂತ ಮೇಲೂ ಅವಳಿಗೆ ಇನ್ನೂ ಮೈಬಿಸಿ ಎಂಬ ರೀತಿಯಲ್ಲೇ ಶುಶ್ರೂಷೆ ಮಾಡುತ್ತಿದ್ದನಂತೆ !

ವೈಗಲ್ ನೋಡುವುದಕ್ಕೆ ಲಕ್ಷಣವಂತ. ಅಗಲವಾದ ಹಣೆ, ವೈಚಾರಿಕತೆಯನ್ನೂ ವಿಷಣ್ಣಭಾವವನ್ನೂ ಏಕಕಾಲಕ್ಕೆ ಹೊರ ಸೂಸುವಂತಹ ಕಣ್ಣುಗಳು. ತಕ್ಕಮಟ್ಟಿಗೆ ಎತ್ತರದ ನಿಲುವೇ. ಆದಾಗ್ಯೂ ಎದೆ ಬಾಗಿಸಿಯೇ ಓಡಾಡುವ ಪ್ರವೃತ್ತಿಯವ. ವೇಷ ಭೂಷಣದತ್ತ ಗಮನ ಕೊಟ್ಟವನೇ ಅಲ್ಲ. "ದಾಡಿ ಮಾಡಿಕೊಳ್ಳುವುದಕ್ಕಷ್ಟೆ ಕನ್ನಡಿಯನ್ನು ಬಳಸುತ್ತಿದ್ದ–ಅದೂ ಒಂದೆರಡು ಮಿನಿಟು ಮಾತ್ರ" ಎಂದು ಮೊಗ್ಲಿಂಗ್ ನಗೆಯಾಡಿದ್ದಾನೆ.

ಆದರೇನು, ವೈಗಲ್ ಅಷ್ಟೊಂದು ಆರೋಗ್ಯವಂತನಲ್ಲ. ಬೌದ್ಧಿಕವಾಗಿ ಹಾಗೂ ದೈಹಿಕವಾಗಿ ತುಂಬಾ ಶ್ರಮಿಸುತ್ತಿದ್ದನಾದ್ದರಿಂದ ಮೇಲಿಂದ ಮೇಲೆ ಅಜಾರಿ ಬೀಳುತ್ತಿದ್ದ. ಆಗೆಲ್ಲ ಸಾಯುವ ಮಾತನ್ನೂ ಆಡುತ್ತಿದ್ದನಂತೆ ("ಪಾಲಿನ್, ಪ್ರಾಣ ಹೋಗುವಾಗ ಹೆಚ್ಚು ಮಾತಾಡಲು ಆಗಲಿಕ್ಕಿಲ್ಲ. ಈಗ ಹೇಳಿಬಿಡುವೆ"–ಇ.). ಕ್ರಿ. ಶ. ೧೮೫೫ರ ಜೂನ್ ತಿಂಗಳಲ್ಲಿ ಒಂದು ದಿನ ಜೋರಾಗಿ ಜ್ವರ ಬಂದು, ಮೈಯಲ್ಲಿ ಗದಗುದಿಕೆ ಆರಂಭವಾಯಿತು. ಆ ರಾತ್ರಿ ಕಳೆದು ಬೆಳಗಿನ ಜಾವದಲ್ಲಿ ಅವನು ಕೊನೆಯುಸಿರನ್ನು ಎಳೆಯಬಹುದೆಂಬ ಕಲ್ಪನೆ.

ಮನೆ ಜನ. ಸಹೋದ್ಯೋಗಿಗಳಿಗೆ ಇರಲೇ ಇಲ್ಲ. ಮರಣ ಕಾಲಕ್ಕೆ ಅವನಿಗೆ ಕೇವಲ ೩೯ ವರುಷ.

ಅವನ ಸಾವು ಸನ್ನಿಹಿತವೆಂದು ತಿಳಿದು ಬಂದಿದ್ದರೆ, ತಮ್ಮಿಬ್ಬರಲ್ಲಿ ಈ ರೀತಿಯ ಸಂಭಾಷಣೆ ನಡೆಯಬಹುದಿತ್ತೆಂದು ಮೊಗ್ಲಿಂಗ್ ಊಹಿಸಿಕೊಂಡಿದ್ದಾನೆ :

"ಡಿಯರ್ ಗಾಡ್‌ಫ್ರೆ, ನೀನು ಈ ಲೋಕದಿಂದ ಇಲ್ಲವಾದ ಮೇಲೆ, ನಿನ್ನ ಬಗ್ಗೆ ನಾನು ಏನು ಹೇಳಲಿ– ಎಂದು ಯೋಚಿಸುತ್ತಿದ್ದೇನೆ."

"ಚೇಷ್ಟೆ ಬೇಡ, ಹರ್ಮನ್. ನಾನು ಸತ್ತಮೇಲೆ 'ನಮ್ಮ ಗಾಡ್‌ಫ್ರೆ ಹೀಗಿದ್ದ ಹಾಗಿದ್ದ' ಎಂದು ಏನೇನೆಲ್ಲ ಹೇಳಬೇಡ. ನಾನೊಬ್ಬ ಹುಲು ಮನುಷ್ಯ. ನನ್ನ ಬಗ್ಗೆ ಎಷ್ಟು ಕಡಿಮೆ ಹೇಳ್ತೀಯೋ, ಅಷ್ಟು ಒಳ್ಳೆಯದು."

ಈ ಬಗೆಯ ಶಾಲೀನತೆ ಮಿಶನರಿ ಜನರಲ್ಲಿರಬೇಕಾದ ಸ್ತುತ್ಯ ಗುಣವೇ ಆದರೂ, ಅದು ಅತಿಯಾಗಿದ್ದರೆ ದೋಷವೇ ಸೈ !

ಆಧಾರ :

೧. H. Moegling : Memoir of the late Rev. G. Weigle Christian Herald, Madras, 1855

೨. Basel ನ Mission Archives ನಲ್ಲಿರುವ ಕೆಲವು ದಾಖಲೆಗಳು

೩. ಶ್ರೀನಿವಾಸ ಹಾವನೂರ : ಹೊಸಗನ್ನಡದ ಅರುಣೋದಯ, ಮೈಸೂರು, ೧೯೭೪

ದಿವಂಗತ ಡಾ॥ ಎ. ಎಸ್. ಕುಲಕರ್ಣಿ

ವಿಜ್ಞಾನೇಶ್ವರನ ಮತ್ತೂರು ಶಾಸನ

'ಮಿತಾಕ್ಷರ'ದ ಕರ್ತೃ ವಿಜ್ಞಾನೇಶ್ವರ ಕರ್ನಾಟಕದ ಒಬ್ಬ ಗಣ್ಯ ಬುದ್ಧಿಜೀವಿ. ಯಾಜ್ಞವಲ್ಕ್ಯಸ್ಮೃತಿಯ ಬಗ್ಗೆ ಅವನು ಬರೆದ ಟೀಕಾಗ್ರಂಥ 'ಮಿತಾಕ್ಷರ' ಬಂಗಾಲ ಮತ್ತು ಕೇರಳವನ್ನುಳಿದು ಇಡೀ ಭಾರತವರ್ಷದಲ್ಲಿ ಮಾನ್ಯತೆ ಪಡೆದ ಹಿಂದೂ ಕಾನೂನು ಗ್ರಂಥ. ಈತ ಕಲ್ಯಾಣದಲ್ಲಿ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಇದ್ದವನು. ಈ ಮತ್ತೂರು ಶಾಸನವು ಅವನು ಇದೇ ನಾಡಿನ ಹುಟ್ಟಾ ಕನ್ನಡಿಗನೆಂಬುದನ್ನು ಸ್ಪಷ್ಟೀಕರಿಸಿದೆ. ಹಿಂದೆ ಡಾ॥ ಪಾಂ. ಭೀ. ದೇಸಾಯಿಯವರು ಇದನ್ನು ಪತ್ತೆಹಚ್ಚಿ ೧೯೩೨ರಲ್ಲಿ ಪ್ರಾಚೀನ ಕರ್ನಾಟಕ ನಿಯತಕಾಲಿಕದಲ್ಲಿ ಅದರ ಪರಿಚಯ ಮಾಡಿಸಿದ್ದರಾದರೂ ಆ ಶಾಸನ ಎಲ್ಲೂ ಪೂರ್ತಿ ಪ್ರಕಟವಾಗಿರಲಿಲ್ಲ. ದಿ॥ ಎ. ಎಸ್. ಕುಲಕರ್ಣಿ ಅವರು ಹುಮ್ನಾಬಾದ್‌ನಲ್ಲಿ ಜ್ಯೂನಿಯರ್ ಕಾಲೇಜು ಪ್ರಿನ್ಸಿಪಾಲರಾಗಿಯೂ ಮುಂದೆ ಕಲ್ಬುರ್ಗಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿಯೂ ದುಡಿದವರು; ಅಕಾಲಮೃತ್ಯುವಿಗೆ ತುತ್ತಾದ ಕ್ರಿಯಾಶೀಲ ವಿದ್ವಾಂಸರು. ಅವರು ಪ್ರತಿ ಮಾಡಿದ್ದಂತೆ ಈ ಮತ್ತೂರು ಶಾಸನದ ಪಾಠವನ್ನು ಕೊಡಲಾಗಿದೆಯಲ್ಲದೆ ಈ ಬಗ್ಗೆ ಡಾ॥ ದೇಸಾಯಿ ಅವರು ೧೯೩೨ರಲ್ಲಿ ಪ್ರಕಟಿಸಿದ್ದ ಟಿಪ್ಪಣಿಯನ್ನೂ ಈ ಕೆಳಗೆ ಕೊಡಲಾಗಿದೆ.

ಸಂಪಾದಕರು

ಶ್ರೀ ವಿಜ್ಞಾನೇಶ್ವರ ಪಂಡಿತ

ಚಾಲುಕ್ಯ ವಿಕ್ರಮಾದಿತ್ಯನ ಆಸ್ಥಾನದಿಂದ ಮಿತಾಕ್ಷರಾ ಗ್ರಂಥವನ್ನು ರಚಿಸಿ ಇಡೀ ಹಿಂದುಸ್ತಾನಕ್ಕೆ ಧರ್ಮಶಾಸ್ತ್ರದ ಬೆಳಕನ್ನೀಯುವ ವಿಜ್ಞಾನೇಶ್ವರರ ಬಗ್ಗೆ ಇದುವರೆಗೆ ವಿಶೇಷ ಸಂಗತಿಗಳೇನೂ ತಿಳಿದಿರಲಿಲ್ಲ. ಕಲ್ಬುರ್ಗಿ ತಾಲ್ಲೂಕಿನ ಮತ್ತೂರು ಎಂಬಲ್ಲಿಯ ಶಾಸನದಿಂದ ವಿಜ್ಞಾನೇಶ್ವರರ ಅನೇಕ ಹೊಸ ಸಂಗತಿಗಳು ತಿಳಿಯುತ್ತವೆ. ವಿಜ್ಞಾನೇಶ್ವರರು ಬಿಲ್ಹಣ ಕವಿಯಂತೆ ಹೊರನಾಡಿನ ಆಶ್ರಿತರಲ್ಲ. ಅಟ್ಟಳನಾಡಿನಲ್ಲಿಯ ಮಾಸೆಯಮಡು ಅವರ ಜನ್ಮಸ್ಥಳ. ಅವರ ತಂದೆ ಸೋಮರಾಜ, ತಾಯಿ ಭಾಗ್ಯವನಿತೆ. ಅವರ ಪೂರ್ವದ ಹೆಸರು ಕಂಚ. ಅವರ ಹೆಂಡತಿ ಕೇತಿಕಬ್ಬೆ. ಅವರ ಮಕ್ಕಳು ಮರಿತೂರಲ್ಲಿ (ಮತ್ತೂರಲ್ಲಿ) ಪೆರ್ಗಡೆಯಾಗಿ ಆಳುತ್ತಿದ್ದರು. ಕಲ್ಯಾಣದ ಬಳಿ ಮಾಸೆಯಮಡು ಎಂಬೂರು ಸಿಕ್ಕಿದೆ. ಶಾಸನ ಕಾಲ ಕ್ರಿ. ಶ. ೧೧೨೪. (ಪಾಂ. ಭೀ. ದೇಸಾಯಿ : 'ಹೊಸಬೆಳಕು', ಪ್ರಾಚೀನ ಕರ್ನಾಟಕ, ೧–೨, ೧೯೩೨, ಪು. ೪೧).

ಮತ್ತೂರಿನ ಶಿವಾಲಯದಲ್ಲಿ ದೊರೆತ ಕ್ರಿ. ಶ. ೧೧೨೫ರ ಜನವರಿ ೬ನೇ ತಾ॥ನ ಶಾಸನ

೧. ಶ್ರೀಯುಂಶ್ರೀಪದ್ಮನಾಭಂಗಖಿಳಭುವನ ಜನಸ್ತುತ್ಯೆಯಾಗಿಲ್ದ ವಾಗೇಶ್ರೀಯುಂಸ್ವಪದ್ಮಗರ್ಭಂಗಮರಪರಿವೃಡಶ್ರೀ

೨. ಯಂನಿಂದ್ರಂಗೆ ವೀರಶ್ರಿಯಂ ಶ್ರನಂದಿಕೇಶಂಪ್ರಮಥ ಸಮಿತಿಗೀಶಾಂಘ್ರಿಪಂಕೇಜಭಕ್ತಿಶ್ರ

೩. ಯಂ ಮಾಹೇಶಗ್ಗಿತ್ತನ್ದುಮನೆಸೆದಂ ಶ್ರಪಾರ್ವತೀಶಂಮಹೇಶಂ॥ ಶ್ರೀವರಸನೆಗೆಟ್ದಿ ಪೊಕ್ಕುೞತಾ ಮಱೆಯೊೞು ಪುಟ್ಟಿದ ಜನ

೪. ಪೆರ್ಮ್ಮಗನತುಳಂ ಭಾವಜನಿಶಾಶನಬುಧಿವೃತಾವನಿಪರಿರಕ್ಷಪಾೞತಂ ಮಾಸವ್ಯಂ ॥ ಕಾರಣಪುರ್ಷ ನೆಗೞ್ದಿ ನೀ

೫. ರಜ ಭವಾತ್ಮಜಂಗೆ ಧರೆ ಪೊಗೞ್ವಿನೆಗು ಹಾರೀತನೊಗೆದನುದಧಿಗಂಭೀರಂ ಬಾೞರ್ಕತೇಜನಸದೃಶಮಹಿಮಂ॥ ಜೞರುಹಮಿತ್ರನ

೬. ಮೃದುಪದಜೞಜಯುಗಕ್ಕೆಯ್ದುಗೆಂದು ಭಕ್ತಿಯೋ ಪಿತ್ರಾಚುೞಕಜೞದಿಂದವೊಗೆದಂ ಬೞಯುತನಪ್ರತಿಮನ

೭. ಭೀಮನಭಿಜನಧವಳ॥ ಮಳರಹಿತಮೆನಿಪ ಚುಳಿಕಾಜೞದೊಳಿಗೆದುದೞಿನಾಗೞಿಸದೃ ಸಮಹಿಮಂ ಚಳಕನ್ಮ ಪನೆನಿಪ ಪೆಸರಂತಳಿ

೮. ದಾಟ್ದಿಂ ಜೞಧಿವ್ರಿತಮಹೀ ಮಂಡಳಮಂ ॥ ಆತನ ವಂಸಜರಖಿಳಧರಾತೞಮಂ ಮುದದಿನಾೞೌಧರಕಿರ್ಬ್ಬ್ಗುಣ ವಿಖ್ಯಾತನ ವೀರಾಂಬುಧಿ ಸಂಜಾತನ ಚಾಳಕ್ಯವಾೞ್ದ್ರ್

೯. ವರ್ದ್ಧನಚನ್ದ್ರರ್॥ ಭೂನುತನಾಶ್ರಿತಪ್ರಕರಕಲ್ಪ ಕುಜಾತನೆನಿಪ್ಪ ಸೋಮನಂತಾಸರನಾಥನಿಂ ಕಿಱಿಮನಂಕದವ್ವೊಂಕದ ವಿಕ್ರಮಾರ್ಜುನಂ ಭಾನುನಿಭಪ್ರಭಂ ಹಯ

೧೦. ಪುರಂದರನವ್ಯವಧೂಮರಸ್ತುತಂ ದಾನವಿನೋದನುದ್ಧತನೃಪೇಂದ್ರ ಪುರಪತ್ರಪುರತ್ರಿಯಂ ಬಕಂ ॥ ಅರಾಯ ಮಕುಟತಾಟಿತಚರಣನೆನೆಸಲು ನೆ

೧೧. ಗೞ್ದಿ ವಿಕ್ರಮಾಂಕನ ರತ್ನೋತ್ಕರನಿಚಿತಮಕುಟತಾಟಿತಚರಣವಿಜ್ಞಾನದೇವರೇಂ ಕೇವೞಮೇ ॥ ನೀರಜಭವನಿ ಭರುದಧಿಗಭೀರ್ವ್ವಿಜ್ಞಾನ ದೇವರವರಮನೆಯೊಳ್

೧೨. ಕಾರಣಪುರುಷರು ನಾಲ್ವರುಪೋರರನ್ನುರೆ ವಿಪುಳಭಾಗ್ಯದೊೞು ಗುಣಗಣದೊಳ್ ॥ ಕಲಿತನದೊೞು ಗಭೀರತೆ ಯೊೞುಂನತಿಯೊೞುಹರಪಾಸಕಾರ

೧೩. ನಿಮ್ಮ ವಿತರವ್ರಿತ್ತಿಯೊೞು ಸರಭಮೆಯ್ದುದಕೇಸರಿ ಕುಂಭಜನ್ಮನೆಂಜಲಿಸವಾೞ್ಧಿ ದಾನವ ಕಾೞೌಂತಕನೆತ್ತದ ಮೇರು ರಾಹುಮುಂಡಲಿಸದ ಚಂದ್ರನೆಂಬುದಖಿ

೧೪. ಳಾವನಿ ಪೆರ್ಗ್ಗಡೆ ಕಾಮದೇವನಂ ॥ ಗರಡುನೋೞಿಂಚೆ ಮಂದರ ದೊೞ ಮೃದು ಹೋಕ್ಷದೊೞು ಕ್ಷವಂಬು ಜೋಘರ ನೊೞಗಿರಿ ಕಾಂಜವನ ಮಿತ್ರನೊಂೞ್ಂದು ಪಯಱ್ಬ್ಬಯೋಧಿ

೧೫. ಯೊೞು ಸರನಿಧಿ ಕಾಮನಿಂ ಕಿ ಱಿಯು ಪೆರ್ಗಡೆ ಸೋಮನೊೞನ್ಮಮಾನವದ್ರೊರ್ರೆ ಪಡಿಪಾಟಿ ಪಾಸಜಿಸಮಂ ॥ ತೊಣೆತೋಡೆನೆ ದೋಸಮುಲ್ಲದೇ ॥ ವಿನಯಾಂಭೋರಾಶಿ ವಿದ್ವ

೧೬. ಜ್ಜನ ಮುಖಕಮೞಾನೀಕ ಪಂಕೇಜ ಮಿತ್ರಂ ಮನುಮಾರ್ಗ್ಗಂ ನಿತ್ಯತೇಜಂ ನಿರುಪಮ ಮಹಿಮಂ ನಿರ್ಮ್ಮಳಂ ನಿರ್ವಿಕಾರಂ ದ್ವಿನದೀ ದಿಂಡೀರ ಪಿಂಡ ಪ್ರಕರ ನಿಭಲಸತ್ಕಿರ್ತ್ತಿ

೧೭. ಸಾಮಾನ್ಯನೇ ಸೋಮನ ತಪ್ಯಂ ಮಾರಸಿಂಗಂ ನಿಜಕುೞ ಕುಮುದಾನಂದ ಸಂಪೂರ್ಣ್ಣಚಂದ್ರಂ॥ ಅನತಾರಾತಿ ಕುೞಾಂಬುಜಕರ ಮದಸ್ತಂಭೇರಮಂ ಕಾಮಿ

೧೮. ನೀಜನನೀಲಾಲಿಸಲೊೞು ಲೋಚನ ಚಕೋರಿ ಪೂರ್ಣ್ಣಚಂದ್ರ ಲಸದ್ವಿನಯಾಂಭೋನಿಧಿ ಮಾರಸಿಂಗನನುಜಂ ಶ್ರೀ ಬೀಚಿರಾಜಂ ಜಗಜ್ಜನ ಚಿನ್ತಾಮಣಿ ರಾ

೧೯. ಜಪೂಜಿತನೀಳಾ ಲೋಕೈಕ ಕಲ್ಪದ್ರುಮಂ ॥ ಪತಿಭಕ್ತೆ ವಿಮೞಲಂೞಿತಾಯತಲೋಚನಕಮೞವದನೆ ಘಟಕುಚ ಯುಗೆ ಸನ್ನುತ ಕೀರ್ತ್ತಿ ಬೀಚಿ

೨೦. ರಾಜನ ಸತಿ ಚಾಮಲದೇವಿಯೆಂದು ಪೊಗಳ್ವುದು ಲೋಕಂ ॥ ಎನೆ ನೆಗಳ್ದವರಾನ್ವಯ ವೆನ್ತೆಸಲವಟ್ಟಟೀನಾಡೊಳೆಸೆವ ಮಾಸೆಯ ಮಡು ಸದ್ವಿನು

೨೧. ತ ಶಿವಾಲಯುಚಯದಿಂದನುಪಪಮಿತವನಾಳಿಯಿಂದೆ ಸೊಗಯಿಸಿತೋರ್ಕ್ಕುಂ ॥ ಆ ಗ್ರಾಮ ವಿಳಾಸಿನಿಯಲಸ ಗೃವಕಳಾ

೨೨. ಪದಂತಿರೆ ಸೇವಂ ಪೊಣರ್ದನತ್ಯುಗ್ರಾರಿ ಘನಸವಿೂರನುದಗ್ರಯಶಂ ಸೋಮರಾಜನೂರ್ಜ್ಜಿತತೇಜಂ ॥ ಭೂಮಿಗೆ ದೊರೆಸ್ವೈರಣೆಯೊಳು ಸೋಮನ ಸತಿ

೨೩. ಭಾಗ್ಯವನಿತೆ ಪತಿಹಿತದೆಡೆಯೊಳು ಕಾಮಿನಿಯರೊಳಧಿಕವೆನಲು ಸಾಮಾನ್ಯದಕಾನ್ತೆಯಲ್ಲಯನುಪಮಿತಾಂಗೀ ॥ ಅವರ ತನೂ

೨೪. ಭವಂ ನೆಗಟ್ದ ಕೌಶಿಕ ಗೋತ್ರಲಲಾಮನಂಬುಜೋದ್ಭವಕುಲದೀಪಕಂ ಬುಧನಿಕಾಯವಿಪತ್ತಿತಿಮಿರಾರಿ ಪಾರ್ವ್ವತೀಧವಪದಪಂಕಜಭೃ

೨೫. ಮರನಿಷ್ಟ ವಿಶಿಷ್ಟ ಜನಾಳಿನೇತ್ರ ಕೈರವ ವನ ಚಂದ್ರನುಜ್ವಳಯಶೋನಿಧಿ ಕಂಚನತರ್ಕ್ಯ ವಿಕ್ರಮಂ ॥ ಇಂತೆನಿಸಿ ನೆಗಟ್ದ ಕಂಚನ ಕಾನ್ತೆ

೨೬. ಮಹೀಕಾಂತೆಗಿಂದುಕಾಂತೆಗೆ ಲಕ್ಷ್ಮೀಕಾಂತೆಗೆ ನಳಿಕಾಂತೆಗೆ ದೊರೆ ಕೇತಿಕಬ್ಬೆ ವರಗುಣದೊಳು ॥ ತಿನತಾ ೧

೨೭. ತಿಯನಿಕ್ಕಲುಂ ಮಱಿಗೆ ವಂದಿಟ್ಟೌತನಂಕಾಯಲುಂ ಕನಕಬ್ರಾತಮನರ್ತ್ಥಿಸಂಕುಳದೆಡ ಪ್ರೋಸಪನ್ನ ವಾರ್ತ್ತೀಯಲುಂ ವಿನಯಂಭೋನಿಧಿ

೨೮. ಕಾಮನುಂ ಜಿತಮದಶ್ರೀಸೋಮನುಂ ಮಾರಸಿಂಗನುಮತ್ಯೂರ್ಜಿತಬೀಚಿರಾಜನುಮವಗ್ಗಾನಂದದಿಂ ಪುಟ್ಟಿದರುಂ॥ ಅವರೊಳಧಿಕಂ ಬೀಚಣ

೨೯. ನವರಾತ್ತಯಶೋಭಿರಾಮನೆಸೆವ ಕುಭಿಜ್ಞನಟನಮಿತೋತ್ತಮಾಂಗಂ ಭುವನಸುತಂ ಧರ್ಮಭೂಮಿಯಂ ಪ್ರಕಟಿಸಿದಂ ॥

೩೦. ಶ್ರೀ ರಮಣನೆ ನೀನೆ ಜಯಶ್ರೀರಮಣನೆ ಸತ್ವಪರನೆ ಬೀಚಣಕೀರ್ತಿ ಶ್ರೀರಮಣನಾಗೆ ಪಡೆದೈ ಶ್ರೀರಮ

೩೧. ಣದನನ್ತ ಕೋಟಿಕಲ್ಪಾಯುವರಂ ॥ ನಿನಗಾಯುಂ ಶ್ರಯುಮಂ ಮಾಡಿದನ

೩೨. ದುಱಯಶಂ ಶಂಕರಂ ದೇವದೇವಂ ದ್ಯುನದೀಚಿತ್ತಪ್ರಿಯಂ ಪಾಣ್ದುರವಿಮಳತನುತ್ತಾರ ಸಹಾಶ ಶಂಖದ್ವರ್ಜಾತ್ಕಿಂ ॥ ಭೇಂದ್ರಚಂದ್ರಂ ಪ್ರ

೩೩. ಬಳ ಜಳಧರಂ ಕ್ಷೀರವಾರಾಶಿಫೇನೋಜ್ವಳರಾಶಿಗದ್ರಾಜಹಂಸಂ ಶಿವನೊಸೆಯೆ ಸದಾನಂದಮುಂಬೀಚಿ ನಿನ್ನೊಳ್ ॥ ಕಂದ ॥ ನು

೩೪. ಡಿದಿಟ್ಟಿರಡಂ ನುಡಿಯಂ ಪಿಡಿದುದನಾದ್ಯಂತಾಪಯ್ದೆಪಿಡಿವಂ ಕಪುಗಲಿ ವಿವೇಕ ಬೀಚಂ ತೋರ್ದಡೆ ಜವನೊಸೆದೊಡೀವ ದಾನ ವಿನೋದಂ ॥ ಚಿ

೩೫. ತ್ರ ಲತಿಕೆ ॥ ಜಲಧಿಯ ಗುಂಪು ಮಂದರದ ಪೆಂಪು ಧರಿತ್ರಿಯದಿಂಪು ಬೀಚಿಯೊಳ್ ಮಱಯಜದಂಪು ಮಲ್ಲಿಗೆಯ ಕಂಪು

೩೬. ವಿನೋದದ ಸೊಂಪು ಚಾಗದುಟ್ಟಿವಿಸುವಲಂಪು ತನ್ನ ಮನದೊಳ್ಗೆದೆಗೊಂಡಿರ ಶಾಂತ ಚಿತ್ತದಿಂ ಬಳೆದನುರಾಗಮೆಂಬಲತೆಪರ್ಬ್ಬದು

೩೭. ದೀ ಭುವನ ತ್ರಯಾಂಗಟಿಂ ॥ ಸ್ಥಿರವಾಗೆ ಪರಮನಿತ್ತುದು ಪರಮಾಯುವನನ್ತಕೋಟಿ ಕಲ್ಪಾಯುವರಂ ಸ್ಥಿರುಪಿಕ್ಕೆ ಬು

೩೮. ಧನಸಮೂಹಂ ಪರಸೆ ಸದಾನಂದದಿಂದಮಾಯುಂ ಶ್ರೀಯುಂ ಶ್ವಯುಂ ಸರನಿಧಿವೃತಭೂತಳದೊಳು ಕರಚೆಲ್ವಂ ಕುಂತಳವಾದ ನೀತಟಿ

೩೯. ಮದಱೊಳು ಕರಚೆಲ್ವನಲಂದೆ ಸಾಸಿರಮದಱೊಳೆ ಚೆಲ್ವನತ್ತಿಗೊಂಕನಾಡು ॥ ಆ ವಿಷಮಕ್ಕಧಿನಾಥಂ ಭಾವಜ ನಿಭನಮಟಿ

೪೦. ಕೀತ್ತಿ ರಿಪುನೃಪಕುಟಿ ವಿದ್ರಾವಣನಿವನೆನೆ ನೆಗಟ್ದಂ ಕೇವಳಮೆ ಬಿಬ್ಬ ಭೂಪನ ಪ್ರತಿರೂಪಂ॥ ಶ್ರೀಕರನವನ ತನೂಜಂ

೪೧. ಪಾಕದ್ವಿಟು ವಿಭವನೆನಿಪ ಗೊಂಕನ್ರಿಪಾಟಿಂ ಲೋಕೇಂದು ವಿಸದ ಕೀರ್ತಿ ಪತಾಕಂ ಕಮನೀಯ ಗಾತ್ರನುತ್ ಪಳನೇತ್ರಂ ॥ ಗಂ

೪೨. ಡ್ದರಗಂಡಂ ರಿಪುನ್ರಿಪ ಸುಡಾಟಿಮ್ರಿಂಗೆಂದ್ರಂನೆನಿಪ ಗೊಂಕನತನೆಯಂ ಚೆಂಡಪರಾಕ್ರಮಿನಾಹವಸೌಂಡನೆನಲು ನೆಗಟ್ದನಲ್ತೆ ಕತ್ತನ್ರಿಪಾಳಂ ॥

೪೩. ಎನೆ ನೆಗಟ್ದ ಕತ್ತಭೂಪನ ತನಯಂ ಸಂಗ್ರಾಮರಾಮನ ಸದ್ರಿಸ ಮಹಿಮಂ ಮನುಜ ಮನೋಜಂ। ರಿಪುನ್ರಿಪ ವನಜ ವನಾನೀಕನು. ॥

೪೪. ತ ಸಸಾಂಕಂ ಗೊಂಕಂ॥ ಆ ವಿಷಯಾಂತರಾಟಿದೊಟಿಗಾನತನಾಟಿವನಾಳಿಯಂಲಸದ್ದೇವ ಗ್ರಿಹಾಟಿಯಂ ಸುಕಪಿಶಾಟಿ । ಯನೊಪ್ಪುವ

೪೫. ನಂದನಾಳಿಯಿಂ ತೀವಿ ಸಮಸ್ತ ಸಮಸ್ತ ದಿಕುತಟದೊಳೊಪ್ಪುವ ವಾಪಿ ತಟಾಕ ರಾಜಿಯಂ ಭಾವಿಸಿ ನೋರ್ಪ್ಪಡಿನ್ನು ಮಟಿತೂದಮರೇಂದ್ರಪುರಕ್ಕಂಮಗ್ಗಳಂ ॥

೪೬. ಎಸೆವ ಪುರವರದ ವಿಪ್ರ ಪ್ರಸರಂ ನಿಖಿಳಾರ್ತ್ಥ ಸಾಸ್ತ್ರ ಪಾರಂಗಮರರ್ಥಿನಸುವ ಭಟಪ್ಪಿನರಿದುಂ ರಣರಸಿಕಪ್ಪನತಿ ಹಿತೆಯರೆನಿಪರಲ್ಲಿಯ ಸತಿ

೪೭. ಯರು ॥ ಕೇಡಿಲ್ಲದ ಧರ್ಮಮನಾಂ ಮಾಡುವೆನೆಂದತ್ತಿಯಿಂದೆ ಪೆರ್ಗಡೆ ಬೀಚಂ ನೋಡಿತತುಪುರದೊಳಾರಂ ನಾಡಾಡಿಗಟುಂಬಮಪ್ಪ ಬೀಯಮ

೪೮. ಮೆಱೆದು । ಇದು ವಿಸ್ವಕರ್ಮ್ಮ ನಿರ್ಮಿತವಿದು ಪುಣ್ಯದಪುಂಜಮೆಂದು ವಿಬ್ಧನಿಕಾಯಂ ಮುದದಿನಭಿವರ್ಣಿಸಲು ಶಿವಸದನಮನೆತ್ತಿಸಿದನೊಸೆದುಕೀರ್ತ್ತಿವಿಳಾಸಂ ॥

೪೯. ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪ್ರಿಥ್ವೀವಲ್ಲಭ ಮಹಾರಾಜಾಧಿರಾಜಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯ ಕುಟಿತಿಟಕ । ಚಾಳುಕ್ಯಾಭರಣಂ

೫೦. ಶ್ರೀಮತ್ತ್ರಿಭುವನಮಲ್ಲ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ್ಕತಾರಂ ಸಲುತಂ ಶ್ರೀಮತ್ ಜಯನ್ತೀಪುರದ ನೆಲೆ

೫೧. ವೀಡಿನೊಳ್ ಸುಖಸಂಕಥಾವಿನೋದದಿ । ರಾಜ್ಯಂಗೈಯುತ್ತಮಿರ ॥ ಸ್ವಸ್ತಿ ಯಮನಿಯಮಸ್ವಾಧ್ಯಾಯ ಧ್ಯಾನಧಾರಣಮೌನಾನುಷ್ಠಾನ ಜಪಸಮಾ

೫೨. ಧಿಶೀಟಸಂಪನ್ನರುಂ ಶ್ರೀಮತ್ರಿಭುವನಮಲ್ಲ ದೇವರ ಪರಮಾರಾಧ್ಯರುಮಪ್ಪ ಶ್ರೀಮತ್ ವಿಜ್ಞಾನೇಶ್ವರ ಭಟ್ಟಾರಕ ದೇವರ ಮಗಂ ಸ್ವಸ್ತಿ ಸಮ

೫೩. ಸ್ತಗುಣಸಂಪನ್ನರಪ್ಪ ಶ್ರೀಮತುಪೆರ್ಗ್ಗಡೆ ಬೀಚಿರಾಜ ಮಱೆತೂಱಲು ಪ್ರತಿಷ್ಠೆಯ ಮಾಡಿಸಿದ ಮಹಾದೇವಗ್ಗಂ ಕೇಶವದೇವಗ್ಗಂ। ಸ್ವಸ್ತಿ ಸಮಧಿಗತ

೫೪. ಪಂಚಮಹಾಶಬ್ದ ಮಹಾಮಂಡಳೇಶ್ವರ ಕದಂಬಮಹೇಶ್ವರ ವಿಜಯಲಕ್ಷ್ಮೀಕಾನ್ತ ತುರಕರೇವನ್ತನಲವೆಪಡಂಗ ಮನ್ನೆಯಸಿಂಗ ಸತ್ಯರಾಧೇಯ ಸಾಹಸವೈ

೩೫. ನತೇಯ । ನೀತಿ ಚಾಣಾಕ್ಯ ಸಮೋಘವಾಕ್ಯ । ಪರೋಪಕಾರವ್ಯಾಪಾರಪಾರಾಯಣ ವೈರಿನಾರಾಯಣ ಸುಜನಜನ ಕುಮುದ ಹಿಮಕರಬನ್ದು

೩೬. ಜನಕಮಲದಿವಾಕರ ಗುಣರತ್ನಭೂಷಣ ಶಿಷ್ಟಜನಪೋಷಣ ದೇವದ್ವಿಜಗುರುಪಾದಾರಾಧಕ ಪರಬಳಸಾಧಕ ದಾನವಿನೋದ ಮೃಗಮದಾಮೋದ

೩೭. ನಾಮಾದಿ ಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾಮಂಡಲೇಶ್ವರಂ ಬಿಬ್ಬರಸರುಂ ಗೊಂಕರಸನುಂ ಪ್ರಭುಮುಖ್ಯವಾಗಿ ಶ್ರೀಮಚ್ಚಾಳುಕ್ಯವಿಕ್ರಮವರ್ಷದ ೪೮ ನೆಯ ಶೋಭಕೃ

೩೮. ಸಂವತ್ಸರದ ಮಾಘ ಶುದ್ಧ ೭ ಪಷ್ಟವಾರ ಸೂರ್ಯ್ಯಗ್ರಹಣ ನಿಮಿತ್ತವಾಗಿ ಶ್ರೀ ವೀಚೇಶ್ವರ ದೇವರ್ಗ್ಗೆಯೂರಿಂ ಪಡುವಣ ಬೇವಿನಕೆಱೆಯಕೆಯ್ಯಿಂದ ತೆಂ

೩೯. ಕ ಹೋಚನಬಾವಿಗೆ ಹೋದಪೆರ್ವಟ್ಟೆಯಿಂ ಪಡುವಲು ದೇವರಂಗಭೋಗಕ್ಕಂ ಪೂಜೆಗಂ ಚೈತ್ರಪವಿತ್ರಕ್ಕುಂ ನಿವೇದ್ಯಕ್ಕುಂ ಬೊನ್ತೇಶ್ವರ ಗಡಿಬದಫಳಿಯ ಪಿರಿಯ ಮ

೪೦. ತ್ತನ್ನಾಲ್ಕು ಪಞ್ಚಮಹಾಶಬ್ದಮುಂ ಧೂಪಜಗಟೆಯುಮಂ ಬಾಜಿಸುವ ಹಱಕಾಱರ್ಗ್ಗೆ ಮತ್ತೆರಡುಯಿಪ್ಪತ್ತಿವ ಸಂಜೆಯೊಳ್ ದೇವರ್ಗೆ ಸುಖದಿಂ ಭೋಗಮಾಪ್ಪ

೪೧. ಸಂಖ ಪಾಟಿಂಗೆ ಕಮ್ಮವಱಸೂಱು ಅಸ್ತುಸರ್ವ್ವನಮಶ್ಯವಾಗಿ ಬಿಟ್ಟ ಮತ್ತರು ೬, ಕಮ್ಮ ೭೦೦, ಯೂರಿಂ ಮೂಡಣಸೆಜ್ಜೆವಾರಿಸಿ ಬಿಟ್ಟ ತೋಟದಿಂ ಬಡ

೪೨. ಗಲು ತೋಟಕ್ಕೆ ಬಿಟ್ಟ ಕಾಲ್ಪಡಿಯ ಮತ್ತರು ೧, ನಂದಾದೀವಿಗೆಯೆಣ್ಣೆಗೆ ಗಾಣಂಗಟಲು ಧಾರೆಯೆಣ್ಣೆ ಮಾರಿದ ಭತ್ತದಲು ಪೊಂಗೆ ಸ

೪೩. ಲಗ ವೆತ್ತ ತಂಬಲಿಂಗಮ್ಮಾರಿದ ಯೆಲೆಯ ಹೇಱಿಂಗೆಯೆಲೆಯಿಪ್ಪತ್ತಯ್ದುಮಾಱಿದ ಪೊಂಗೆಯುಡಕೆ ಹತ್ತು, ಮಾಱಿಸೆಟ್ಟಿ ಪ್ರತಿಷ್ಠೆಯಂ ಮಾಡಿಸಿ

೪೪. ದ ಸೂರ್ಯದೇವರ್ಗ್ಗೆ ನಿವೇದ್ಯಕ್ಕೆ (ನಟ್ಟಮಾರದ) ಬಟ್ಟೆಯಂ ಮೂಡ ಮೂಲಿಗೆಗೆಯಿಂದಂ ಬಡಗಲು ಬಿಟ್ಟ ಕಮ್ಮ ೪೫೦, ಇನ್ತೀಧರ್ಮ್ಮಮಂ ಪ್ರತಿಪಾಲಿಸಿದವರ್ಗೆ

೪೫. ವಾರಣಾಸಿ ಕುರುಕ್ಷೇತ್ರದೊಳು ಸಾಸಿರ ಕವಿಲೆಯಂ ಕೋಡುಮಂ ಕೋಲಗುಮಂ ಸುವರ್ಣ್ನದೊಳಂ ಪಞ್ಚರತ್ನದೊಳಂ ಕಟ್ಟಿಸಿಯುಭಯ ಮುಖಿ

೪೬. ಗೊಟ್ಟ ಫಲಮಕ್ಕು ಇಧರ್ಮ್ಮಮನಳಿದವಂ ವಾರಣಾಸಿಯೊಳು ಕವಿಲೆಯುಮಂ ಬ್ರಾಹ್ಮಣರುಮುಂ ತನ್ನ ಸ್ವಹಸ್ತದಿಂದಳಿದ ಪಾತಕ

೪೭. ನಕ್ಕು । ಸಾಮಾನ್ಯೋಯಂ ಧರ್ಮಸೇತುರ್ನ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ॥ ಸರ್ವಾನೇತಾನ್ ಭಾಗಿನಃ ಪಾರ್ತ್ಥಿವೇಂದ್ರಾನ್ ಭೂ

೪೮. ಯೋ ಭೂಯೋಯಾಚತೇ ರಾಮಚಂದ್ರಃ ॥ ಸ್ವದತ್ತಾಂ ಪರದತ್ತಾಂ ವಾಯೋಹರೇತ್ ವಸುಂಧರಾಂ । ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯ

೪೯. ತೇಕೃಮಿ ॥ ಊರೊಡೆಯರಕ್ಕ ಮನ್ನೆಯರೂರಾಳ್ವರಸಕ್ಕು ನಾಡಕೊಣ್ಡೆಯರಕ್ಕೆನ್ನಾರಾದೊಡಮೀಧರ್ಮ್ಮಮ ನಲಿದವರೋರನ್ತಿರೆ ರೌರವಕ್ಕೆ ಗ

೫೦. ಲಗಲನಿಲಿವರ್ ॥ ಪ್ರಮುದಿಂದಿನ್ತಿದನೆಯ್ದೆ ಕಾದ ಪುರುಷನಂಗಾಯುಂ ಮಹಾಶ್ರೀಯುಮಕ್ಕುಮಿದಂ ಕಾಯದ ಪಾತಕಂಗೆ ಫಲವುಂ ತೀರ್ತ್ಥಗಳೊಳ್

೫೧. ವಾರಣಾಸಿಯೊಳಿತ್ತುಗ್ರ ಮುನೀಂದ್ರರಂ ಪಶುಗಳಂ ವೇದಾಢ್ಯರಂ ಕೊಂದ ಮಿಕ್ಕಾಯಶಂ ಪೊರ್ದ್ದುಗುಮೆಂದು ಸಾರಿದಪುದೀ ಧಶೈಳಾಕ್ಷರಂ ಧಾತ್ರಿಯೊಳ್ ॥

೫೨. ಶ್ರೀಮತ್ ಕುಬಕರಣಿಕುನಿಗೆ ಭೈರವ ನಾಮಣನ ಬರೆಪಂ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಡಾ॥ ಜಿ. ಎಸ್. ದೀಕ್ಷಿತ್

ಹಳೇಬೀಡು ಪುರಾತನ ಚರಿತ್ರೆ : ಪರಿಶೀಲನೆ

'ಹಳೇಬೀಡು ಪುರಾತನ ಚರಿತ್ರೆ' ಎನ್ನುವ ಈ ಗ್ರಂಥವು ಗತಿಸಿದ ಹಳೇಬೀಡು ಪಟೇಲ್ ಶಿವನಂಜೇಗೌಡರಿಂದ ರಚಿಸಲ್ಪಟ್ಟು ಬೆಂಗಳೂರು ಗೌರ್ನಮೆಂಟ್ ಮುದ್ರಾಲಯ ದಲ್ಲಿ ೧೯೧೯ ರಲ್ಲಿ ಮುದ್ರಿಸಲ್ಪಟ್ಟಿತು. ಈ ಪುಸ್ತಕದ ಒಂದು ಪ್ರತಿಯನ್ನು ದಿವಂಗತ ಶ್ರೀ ಸಕಲೇಶಪುರದ ಶ್ರೀಕಂಠಯ್ಯನವರ ಮಕ್ಕಳು ಶ್ರೀ ಎಸ್. ರಾಮಚಂದ್ರ ಅವರು ನನಗೆ ಓದಲಿಕ್ಕೆ ಕೊಟ್ಟಿದ್ದಕ್ಕೆ ಅವರಿಗೆ ನನ್ನ ವಂದನೆಗಳು. ಈ ಲೇಖನದ ಉದ್ದೇಶ ಈ ಪುಸ್ತಕದ ಕಿರುಪರಿಚಯ. ಈ ಪುಸ್ತಕದ ಕೊನೆಯ ಭಾಗದಲ್ಲಿ ಶ್ರವಣಬೆಳ್ಗೊಳದಲ್ಲಿ ಗಲಾಟೆಯಾಯಿತು, ಆಗ (೧೮೯೬-೯೭) ಗುಜರಾತಿ ದೇಶಸ್ಥರು ಅಲ್ಲಿಯ ಜೈನಧರ್ಮಗ್ರಂಥಗಳನ್ನು ಮೂಡಬಿದಿರೆಗೆ ರವಾನಿಸಿದರು ಎಂದಿದೆ.[1] ೧೯೧೯ ರಲ್ಲಿ ಇದರ ಮುದ್ರಣವಾಗಿರುವು ದರಿಂದಲೂ ಅಷ್ಟೊತ್ತಿಗೆ ಲೇಖಕರು ಗತಿಸಿದ್ದ ರೆಂದು ಹೇಳಿರುವುದರಿಂದಲೂ ಈ ಗ್ರಂಥದ ಬರವಣಿಗೆ, ಲೇಖಕರು ಗತಿಸಿದ್ದು ಮತ್ತು ಪುಸ್ತಕದ ಮುದ್ರಣಗಳು ಕ್ರಮವಾಗಿ ೧೮೯೭ ರಿಂದ ೧೯೧೯ ರೊಳಗೆ ಆದವು. ಗ್ರಂಥವನ್ನು ಸು. ೧೯೦೦ ರಲ್ಲಿ ಬರೆದರೆಂದು ಇಟ್ಟುಕೊಳ್ಳ ಬಹುದು.

ಹಿಂದಿನ ಕಾಲದ ಪಟೇಲರಿಗೆ ತಮ್ಮ ಊರಿನ ಬಗ್ಗೆ ಇದ್ದ ಅಭಿಮಾನಕ್ಕೆ ಈ ಪುಸ್ತಕ ಒಂದು ನಿದರ್ಶನ. ಈ ಪಟೇಲರಲ್ಲಿ ಅಭಿಮಾನದ ಜತೆಗೆ ವಿದ್ವತ್ತು ಮತ್ತು ವಿನಯಗಳು ಕೂಡಿದ್ದವು. ಪೀಠಿಕೆಯಲ್ಲಿನ ಈ ವಾಕ್ಯ ಇದನ್ನು ಸ್ಪಷ್ಟಪಡಿಸುತ್ತದೆ : "ಅಲ್ಪಜ್ಞನಾದ ನಾನು ಹಳೇಬೀಡು ಪುರಾತನ ಚರಿತ್ರೆಯನ್ನು ಸಂಗ್ರಹಿಸಿಕೊಂಡು ಸಿಕ್ಕಿದ ಶಿಲಾಶಾಸನದ ಸಹಾಯದಿಂದಲೂ ಪುರಾತನ ಕವಿ ಗಳಿಂದ ರಚಿತವಾದ ಕಾವ್ಯಗಳ ಆಧಾರದಿಂದಲೂ ಪ್ರತ್ಯಕ್ಷ ತೋರುವ ಸಾಕ್ಷಿಯಿಂದಲೂ ತೋಚಿದಮಟ್ಟಿಗೆ ವಿವರಿಸುತ್ತೇನೆ." ಈ ವಾಕ್ಯದಲ್ಲಿ ಹೇಳಿರುವ ಹಾಗೆ ರಾಘವಾಂಕ ಮತ್ತು ಕೆರೆಯಪದ್ಮರಸರ ಕಾವ್ಯಗಳನ್ನೂ ಚೆನ್ನಬಸವಪುರಾಣವನ್ನೂ ಲೇಖಕರು ಉಪಯೋಗಿಸಿ ಕೊಂಡಿದ್ದಾರೆ.

ಈ ಪುಸ್ತಕದಲ್ಲಿ ಎರಡು ಭಾಗಗಳಿವೆ. ಮೊದಲಿನ ಭಾಗದಲ್ಲಿ ೩೦ ಪುಟಗಳಲ್ಲಿ ಹೊಯ್ಸಳರ ಇತಿಹಾಸವಿದೆ. ಎರಡನೇ ಭಾಗದಲ್ಲಿ ೩೧ ರಿಂದ ೧೨೩ ಪುಟಗಳವರೆಗೆ ಹೊಯ್ಸಳೇಶ್ವರ ದೇವಸ್ಥಾನದ ವಿವರವಾದ ವರ್ಣನೆ ಯಿದೆ. ಮೊದಲಿನ ಭಾಗದಲ್ಲಿ 'ಹೊಯ್ಸಳ' ಹೆಸರು ಹೇಗೆ ಬಂತು, ಮೂಲಪುರುಷನು ಆದಮೇಲೆ ರಾಜರು ಯಾರು ಯಾರು ಆಳಿದರು, ಅವರ ಆಳ್ವಿಕೆಯಲ್ಲಿ ಮುಖ್ಯವಾದ ಘಟನೆಗಳು ಯಾವು–ಈ ವಿಷಯಗಳಿವೆ. ಹೊಸದಾಗಿ ತಿಳಿದುಕೊಳ್ಳುವಂತಹವು ಒಂದೆರಡು ವಿಷಯಗಳಿವೆ. ಹೊಯ್ಸಳ ಇತಿಹಾಸವಲ್ಲದೆ, ವಿಜಯ ನಗರ ಕಾಲದಲ್ಲಿ ಹಳೇಬೀಡಿನಲ್ಲಿ ಆದ ಕೆಲವು ಬದಲಾವಣೆ ಗಳನ್ನು ಲೇಖಕರು ಹೇಳುತ್ತಾರೆ. ಇವೂ ಹೊಸವು. ಈಗ ಇವೆಲ್ಲಾ ಯಾವು ಅನ್ನುವುದನ್ನು ನೋಡೋಣ.

1. ಶಿವನಂಜೇಗೌಡ : ಹಳೇಬೀಡು ಪುರಾತನ ಚರಿತ್ರೆ, ಪು. ೪

ಎರಡನೇ ನರಸಿಂಹಬಲ್ಲಾಳನು ಸಂಸ್ಕೃತ, ಕನ್ನಡ, ಅರವು, ತೆಲುಗು, ಮರಾಠಿ, ಮೊದಲಾದ ವಿದ್ಯಾಶಾಲೆಗಳನ್ನು ಇಡಿಸಿದನೆಂದು ಚರಿತ್ರೆಯಿಂದಲೂ ಶಾಸನದಿಂದಲೂ ತಿಳಿಯಬರುತ್ತೆಂದು ಈ ಪುಸ್ತಕದಲ್ಲಿದೆ.[2] ಮೂರನೇ ನರಸಿಂಹಬಲ್ಲಾಳನ ತಿರುಮಕೂಡಲ ತಾಲ್ಲೂಕಿನ ತಡಿ ಮಾಲಿಂಗಿ ಶಾಸನದಿಂದ ಈ ತರಹ ಶಾಲೆಗಳಿದ್ದವೆನ್ನುವುದಕ್ಕೆ ಒಂದು ಉದಾಹರಣೆಯಿದೆ. ೧೨೯೦ ನೆಯ ಇಸ್ವಿಯ ಈ ಶಾಸನದಲ್ಲಿ "ನಾಗರಕಂನಡ ತಿಗುಳಾರ್ಯ್ಯವನೋದಿಸುವ ಬಾಲಶಿಕ್ಷೆ ಉಪಾಧ್ಯರ ಜೀವಿತಕ್ಕೆ ವರ್ಷ ೧ಕ್ಕೆ ಗದ್ಯಾಣ ಆರು" ಎಂತಿದೆ.[3] ತಿಗುಳಾರ್ಯ್ಯ ಎಂದು ಈ ಶಾಸನದಲ್ಲಿ ಬರುವ ಶಬ್ದಕ್ಕೆ ಇದುವರೆಗೂ ತಮಿಳು ಮರಾಠಿ ಎಂದು ಅರ್ಥಮಾಡಿ, ಸಂಸ್ಕೃತ, ಕನ್ನಡ, ತಮಿಳು, ಮರಾಠಿಗಳನ್ನು ಮಾಲಂಗಿಯಲ್ಲಿ ಕಲಿಸುವ ವ್ಯವಸ್ಥೆಯಿತ್ತೆಂದು ಹೇಳಲಾಗಿದೆ. ಆದರೆ ತಿಗುಳಾರಿ ಎನ್ನುವ ಹಳೆಯ ಲಿಪಿ ನಮ್ಮಲ್ಲಿತ್ತು. ಈ ಲಿಪಿಯಲ್ಲಿರುವ ಅನೇಕ ಹಸ್ತಪ್ರತಿಗಳು ಪಶ್ಚಿಮ ತೀರದ ಪ್ರದೇಶದಲ್ಲಿ ಸಿಗುತ್ತವೆ. ಆದ್ದರಿಂದ ಈ ಶಾಸನದಲ್ಲಿ ಬರುವ ತಿಗುಳಾರ್ಯ್ಯ ಶಬ್ದಕ್ಕೆ ಈ ಲಿಪಿಯನ್ನು ಕಲಿಸಿತ್ತಿದ್ದರೆಂದು ಅರ್ಥ ಮಾಡಬೇಕೆನ್ನುವ ಅಭಿಪ್ರಾಯವು ಈಚೆಗೆ ಬಂದಿದೆ. ಆದರೆ ಪ್ರಸ್ತುತ ಪುಸ್ತಕದಲ್ಲಿ ಮೇಲೆ ಹೇಳಿದ ಹಾಗೆ ಅರವ ಮರಾಠಿಗಳನ್ನು ಶಾಲೆಗಳಲ್ಲಿ ಕಲಿಸುವ ಏರ್ಪಾಡು ಇತ್ತೆನ್ನುವುದನ್ನು ನೋಡಿದರೆ ತಿಗುಳಾರ್ಯ್ಯ ಶಬ್ದಕ್ಕೆ ಮೊದಲಿನ ಅರ್ಥವನ್ನು ಮಾಡಬಹುದೆಂದು ತೋರುತ್ತದೆ.

ವಿಜಯನಗರ ಸ್ಥಾಪನೆಯ ಬಗ್ಗೆ ತೆಲುಗು ಮತ್ತು ಕನ್ನಡ ಜನಗಳಲ್ಲಿ ವಾದವಿರುವುದು ಸರ್ವವಿದಿತ. ಈ ಪುಸ್ತಕದಲ್ಲಿ ಕನ್ನಡ ವಾದಕ್ಕೆ ಬೆಂಬಲ ಸಿಗುವ ಕೆಲವು ವಿವರಗಳಿವೆ. ಈಗ ಅವುಗಳನ್ನು ನೋಡೋಣ. ಈ ಗ್ರಂಥದಲ್ಲಿ ನರಸಿಂಹಬಲ್ಲಾಳ II ನ ಆಳ್ವಿಕೆಯನ್ನು ವರ್ಣಿಸುತ್ತಾ ಹೀಗೆ ಹೇಳಿದೆ: ಇದೇ ರಾಜನು "ದೆಹಲಿ ಚಕ್ರವರ್ತಿಗಳು ಆಶೆಯಿಂದ ತಲೆಹಾಕುವುದನ್ನು ತಿಳಿದು ತನ್ನ ದೇಶಕ್ಕೆ ಕಡೆಯ ಗಡಿಯಾಗಿಯೂ ಶತ್ರುಗಳು ಬರುವ ಮಾರ್ಗವಾಗಿಯೂ ಇರುವ ಹಂಪೆಯ ಕ್ಷೇತ್ರದ ಬಳಿ ಹೊಸಮಲೆದುರ್ಗವೆಂಬ ಪಟ್ಟಣವಂ ಕಟ್ಟಿ ದ್ವಾರಸಮುದ್ರದ ಹಿರಿಯ ತಳವಾರನನ್ನು ಅಲ್ಲಿ ಇಟ್ಟನು. ಅವನ ಮಗ ಕಂಪಿಲನು, ಆತನ ಸುತ ಕೊಮಾರ ರಾಮನು."[4] ಈ ಘಟನೆಗಳೆಲ್ಲಾ ಎರಡನೇ ನರಸಿಂಹ ಬಲ್ಲಾಳನ ಕಾಲದಲ್ಲಿ ಆಗಿರಲಿಕ್ಕಿಲ್ಲ. ಆಗ ದೆಹಲಿ ಸುಲ್ತಾನರು ದಕ್ಷಿಣಕ್ಕೆ ಬರುವ ಭೀತಿ ಇರಲಿಲ್ಲ. ಈ ಭೀತಿ ಹುಟ್ಟಿದ್ದು ಮೂರನೇ ಬಲ್ಲಾಳನ ಕಾಲದಲ್ಲಿ. ಆದ್ದರಿಂದ ಅವನೇ ಹೊಸಮಲೆದುರ್ಗವನ್ನು ಹಂಪೆಯ ಪರಿಸರದಲ್ಲಿ ಕಟ್ಟಿರಬೇಕು. ಅವನೇ ದ್ವಾರಸಮುದ್ರದ ಹಿರಿಯ ತಳವಾರನನ್ನು ಅಲ್ಲಿ ಇಟ್ಟಿರಬೇಕು. ಈತನು ಮುಮ್ಮಡಿ ಸಿಂಗೆಯನಾಯಕ. ಎನ್. ವೆಂಕಟರಮಣಯ್ಯನವರು ಮುಮ್ಮಡಿಸಿಂಗೆಯನಾಯಕನು ಯಾದವ ಸೇವೆಯಲ್ಲಿ ಮುಂದಕ್ಕೆ ಬಂದನೆಂದು ಬರೆಯುತ್ತಾರೆ. ಆದಕ್ಕೆ ವಿರುದ್ಧವಾಗಿ ಅವನು ಹೊಯ್ಸಳರ ಸೇವೆಯಲ್ಲಿದ್ದವನು, ಅವನ ಮಗ ಕಂಪಿಲರಾಯ, ತಂದೆ–ಮಗ ಇಬ್ಬರೂ ಮೂರನೇ ಬಲ್ಲಾಳನ ಜತೆಗೆ ಹೊಡೆದಾಡಿದರು. ಆಗಿನ ಕಾಲದಲ್ಲಿ ಇದು ಏನೂ ಆಶ್ಚರ್ಯವನ್ನುಂಟು ಮಾಡುವ ವಿಷಯವಾಗಿರಲಿಲ್ಲ. ಹೊಯ್ಸಳರು ಕಲ್ಯಾಣದ ಚಾಲುಕ್ಯರ ಸೇವಕರು. ಆದರೆ ಅವರ ಜತೆಗೆ ಹೊಡೆದಾಡಿದರು. ಅದೇ ರೀತಿ ಅವರ ಸೇವಕರಾದ ಕಂಪ್ಲಿಯ ರಾಜರು ಅವರ ಜತೆಗೆ ಹೊಡೆದಾಡಿದರು. ಈ ಗ್ರಂಥದಿಂದ ಮೂರನೇ ವೀರಬಲ್ಲಾಳ ಹಂಪೆಯ ಹತ್ತಿರ ಒಂದು ಹೊರಕೋಟೆ ಕಟ್ಟಿದನೆನ್ನುವ ಕನ್ನಡಿಗರ ವಾದಕ್ಕೆ ಪುಷ್ಟಿ ದೊರಕುತ್ತದೆ. ಅಲ್ಲದೆ ಕಂಪಿಲರಾಯನ ವಂಶಸ್ಥರು ಮೊದಲಿಗೆ ಹೊಯ್ಸಳರ ಸೇವಕರಾಗಿದ್ದರೆನ್ನುವ ಹೊಸ ವಿಷಯವನ್ನು ಈ ಪುಸ್ತಕದಿಂದ ತಿಳಿದುಕೊಳ್ಳುತ್ತೇವೆ.

ಈ ಇತಿಹಾಸ ವಿಭಾಗದಲ್ಲಿ ವಿಜಯನಗರದ ಕಾಲದ ಕೆಲವು ಹೊಸ ವಿಷಯಗಳು ತಿಳಿಯುತ್ತವೆ. ವಿಜಯನಗರ ಕಾಲದಲ್ಲಿ ಹಳೇಬೀಡು ಸಂಪೂರ್ಣವಾಗಿ ಶಿಥಿಲವಾಗಿ ಜನಸಂಚಾರಕ್ಕೆ ಅಸಹ್ಯವಾಗಿತ್ತು. ಅಲ್ಲಿಯ ಅರಸರು ಈ ಊರಿನ ಹಿಂದಿನ ವೈಭವಯುತ ಇತಿಹಾಸವನ್ನು ತಿಳಿದು

---

2. ಪು. ೧೧
3. ಎ. ಕ., V (ಹೊಸತು), ತಿನ ೨೩೭
4. ಹಳೇಬೀಡು ಪುರಾತನ ಚರಿತ್ರೆ, ಪು. ೧೧

ಕೊಂಡು, ಅದಕ್ಕೆ ಹೊಸಕೋಟೆ ಕಟ್ಟಿಸಿ ಆ ಊರಿಗೆ ಜೀರ್ಣಬೀಡೆಂದು ಹೆಸರು ಇಟ್ಟರು. ಅಲ್ಲಿಯ ದೇವಸ್ಥಾನಗಳಲ್ಲಿ ಬಿದ್ದುಹೋಗುವ ಭಾಗಗಳಲ್ಲಿ ಕಂಭಗಳನ್ನು ನಿಲ್ಲಿಸಿ ದೇವಸ್ಥಾನಗಳನ್ನು ಬೀಳದಹಾಗೆ ಉಳಿಸಿದರು. ಈ ಕಂಭಗಳನ್ನು ಪ್ರೌಢರಾಯನ ಕಂಭಗಳೆಂದು ಕರೆಯಲಾಗಿದೆ. ಈ ಹೆಸರಿನಿಂದ ಈ ಪುನರುಜ್ಜೀವನ ಕಾರ್ಯವು ಪ್ರೌಢರಾಯ ಅಂದರೆ ಎರಡನೇ ದೇವರಾಯನ ಕಾಲದಲ್ಲಿ ಆಯಿತೆನ್ನಬಹುದು. ಇದರ ಜತೆಗೆ ಜೀರ್ಣಬೀಡನ್ನು ವಿಜಯನಗರದ ಅರಸರು ಒಂದು ಆಡಳಿತ ಕೇಂದ್ರವನ್ನಾಗಿ ಮಾಡಿದರು. ಇಂತಹ ಕೇಂದ್ರಗಳಿಗೆ ಅವರು ಕಟ್ಟೆಮನೆ ಎನ್ನುತ್ತಿದ್ದರು. ಗ್ರಾಮಗಳಲ್ಲಿ ಇತ್ಯರ್ಥವಾಗದ ವ್ಯಾಜ್ಯಗಳನ್ನು ಕಟ್ಟೆಮನೆಗಳಿಗೆ ಕಕ್ಷಿಗಾರರು ತೆಗೆದುಕೊಂಡು ಹೋಗುತ್ತಿದ್ದರು. ಜೀರ್ಣಬೀಡನ್ನು ಒಂದು ಕಟ್ಟೆಮನೆ ಮಾಡಿದ್ದರಿಂದ ಅದಕ್ಕೆ ಸ್ವಲ್ಪ ಪ್ರಾಶಸ್ತ್ಯ ಬಂತು.[5] ಮುಂದೆ ಜೀರ್ಣಬೀಡು ಹಳೇಬೀಡು ಆಯಿತು.

ಈ ಇತಿಹಾಸ ವಿಭಾಗದಲ್ಲಿಯೆ, ಹಳೇಬೀಡಿನ ಹಳೆಯಕೋಟೆ ಹೊಸಪೇಟೆಗಳು, ಅರಮನೆಯಿದ್ದ ಭಾಗ, ರಾಣೀವಾಸ, ಗೋವಿನಪುರವೆಂಬ ದನಗಳನ್ನು ಕಟ್ಟುವ ಭಾಗ, ಹುವ್ವೇನಹಳ್ಳಿ (ಹೂವಾಡಿಗರ ಕೇರಿ), ಒಂಟೆಗಳು ನಿಲ್ಲುವ ಸ್ಥಳ, ಇತ್ಯಾದಿ ಬೇರೆ ಬೇರೆ ಭಾಗಗಳನ್ನು ಲೇಖಕರು ಗುರುತಿಸಿದ್ದಾರೆ. ಇಂತಹ ವಿವರವಾದ ಹಳೇಬೀಡಿನ ವರ್ಣನೆ ಇದೇ ಮೊದಲನೆಯದು. ಇದರ ಸಹಾಯದಿಂದ ಆ ಕ್ಷೇತ್ರದಲ್ಲಿ ಉತ್ಖನನ ಮಾಡುವ ಹಾಗೆ ಇದೆ. ಕರ್ನಾಟಕದಲ್ಲಿ ಹಂಪೆಯಂತೆ ವಿಶಾಲವಾದ ರಾಜಧಾನಿ ಇದಾಗಿತ್ತು.[6]

ಎರಡನೆಯ ಭಾಗದಲ್ಲಿ ಹೊಯ್ಸಳೇಶ್ವರ ದೇವಸ್ಥಾನದ ವಿವರವಾದ ವರ್ಣನೆ ಇದೆ. ಈ ವರ್ಣನೆ ಇವತ್ತೂ ಓದುವ ಹಾಗೆ ಇದೆ. ಇಷ್ಟು ವಿಸ್ತೃತವಾದ ವರ್ಣನೆ ಎಲ್ಲಿಯೂ ಸಿಗುವುದಿಲ್ಲ. ಈ ಭಾಗವನ್ನೇ ಪುನಃ ಮುದ್ರಿಸಿದರೆ ಆ ದೇವಸ್ಥಾನಕ್ಕೆ ಒಳ್ಳೆಯ ಕೈಪಿಡಿಯಾಗಬಲ್ಲದು ಅಲ್ಲದೆ, ಅವತ್ತಿಗೂ ಇವತ್ತಿಗೂ ಎಷ್ಟೊ ವಿಗ್ರಹಗಳು ಹಾಳಾಗಿರಬಹುದು. ಇಲ್ಲವೆ ಕಳವಾಗಿರಬಹುದು. ಅಂತಹ ವಿಗ್ರಹಗಳ ಅಪೂರ್ವ ವರ್ಣನೆ ಇಲ್ಲಿ ಸಿಗುತ್ತದೆ. ಈಗಿನ ಕಲೆಯ ವಿದ್ವಾಂಸರು ಕನ್ನಡದಲ್ಲಿ ಬರೆದರೆ ಇಂಗ್ಲೀಷ್ ವರ್ಣನೆಯ ಭಾಷಾಂತರವಿದ್ದ ಹಾಗೆ ಇರುತ್ತದೆ. ಪಟೇಲರಿಗೆ ಇಂಗ್ಲೀಷ್ ಬರುತ್ತಿತ್ತೊ ಇಲ್ಲವೊ ಗೊತ್ತಿಲ್ಲ. ಅವರ ವರ್ಣನೆಯಲ್ಲಿ ಇಂಗ್ಲೀಷ್‌ನ ಛಾಯೆ ಇಲ್ಲ. ಎಷ್ಟೋ ಸಲ ಸುಂದರವಾದುದನ್ನು ವರ್ಣಿಸಲಿಕ್ಕೆ ನಮ್ಮಲ್ಲಿ ಶಬ್ದಗಳಿರುವುದಿಲ್ಲ. ಈ ಗ್ರಂಥದಲ್ಲಿ ಶಿಲ್ಪ ಸೌಂದರ್ಯವನ್ನು ಸರಿಯಾಗಿ ವರ್ಣಿಸುವ ಶಬ್ದ ಸಂಪತ್ತು ಇದೆ. ವರ್ಣನೆ ಹೇಗೆ ಮಾಡಬೇಕೆಂಬುದನ್ನು ಕಲಿಯುವ ಹಾಗೆ ಇದೆ. ದೇವಸ್ಥಾನದ ಸೌಂದರ್ಯವನ್ನು ಕುರಿತು ಲೇಖಕರು ಹೀಗೆ ಹೇಳುತ್ತಾರೆ: "ಈ ದೇವಸ್ಥಾನವು ನೋಟಕರನ್ನು ತಮ್ಮ ತಮ್ಮ ಕೆಲಸ ಕಾರ್ಯಗಳ ತೊರೆಯಿಸಿ ನಿರ್ವಿಣ್ಣ ಹೃದಯವನ್ನೇ ಮಾಡಿ ಬಲೆಯೊಳ್ ಸಿಕ್ಕಿದ ಮೃಗದಂತೆ ಪೊರ ಬಿಡದೆ ಅಲ್ಲಿಯೆ ನಿಲ್ಲಿಸುವುದು."[7] ಗರ್ಭಗುಡಿಯ ಬಾಗಿಲಲ್ಲಿ ಎರಡು ದ್ವಾರಪಾಲಕರ ವಿಗ್ರಹಗಳಿವೆ. ಅವುಗಳವರ್ಣನೆ ನೋಡಿ: "ಇವುಗಳು ಕಿರೀಟದೊಳು ವಿರಳವಾಗಿ ಬಿಡಿಸಿದ ರುಂಡಮಾಲೆಗಳಿಂದಲೂ ನೇರವಾಗಿ ಸುತ್ತಿದ ಕಿರುಜಡೆಗಳಿಂದಲೂ ಇವುಗಳೊಳು ತೋರ್ಪ ವಿಚಿತ್ರವಾದ ಕೆಲಸದಿಂದಲೂ ಹಣೆಯ ಮೇಲೊಪ್ಪುವ ಸುರುಳಿರೋಮಗಳಿಂದಲೂ ಕಿರುನೋಟದ ಗಾಂಭೀರ್ಯದ ಅಂಗಾಂಗದೊಳು ಆಭರಣ ಪಾಂತು ಓರೆಯಾಗಿ ನಿಂತು ಗದೆ, ತ್ರಿಶೂಲ, ಡಮರುಗಳ ಪಿಡಿದು ಹಾರ ಹೀಲಾವಳಿಗಳಿಂದ ಸಿಂಹನೋಪಾದಿ ಗಂಡು ಫಣದೊಡನೆ ವ್ಯತ್ಯಾಸ ಪಾದವಿಟ್ಟು ನಡುವಿನೊಳು ಒಳ ಉಡಿಗೆ, ವೀರಗಾಸೆ, ಮಲ್ಲಗಂಟು, ಕೀರ್ತಿಮುಖ ಯುಕ್ತವಾಗಿವೆ. ಪಾರ್ಶ್ವಗಳಲ್ಲಿ ಚಾಮರವಾಂತ ಸ್ತ್ರೀ ವಿಗ್ರಹಗಳ ಮೇಲ್ಗಡೆ ದ್ರಾಕ್ಷೀಲತೆಯ ಜಾಲರಿಯಂತೆ ಬಿಡಿಸಿದ್ದಾನೆ. ಶಿರದೊಳು ಧರಿಸಿದ ಕಿರೀಟದ ವಿಚಿತ್ರವಾದ ಕೆಲಸವ ವರ್ಣಿಸಲಸಾಧ್ಯ."[8]

---

5. ಅದೇ, ಪು. ೨೫-೬
6. ಅದೇ, ಪು. ೨೦-೩
7. ಅದೇ, ಪು. ೧೨೩
8. ಅದೇ, ಪು. ೧೨೧

ಬೇಲೂರು - ಹಳೇಬೀಡುಗಳ ದೇವಸ್ಥಾನಗಳಲ್ಲಿಯ ಸ್ತ್ರೀ ವಿಗ್ರಹಗಳ ಸೌಂದರ್ಯ ಜಗತ್‌ಪ್ರಸಿದ್ಧ. ಹೂಗುಚ್ಛ ಕೈಯೆತ್ತಿ ತುದಿ ಬೆರಳ ತೋರುವ ಸ್ತ್ರೀ ಪ್ರತಿಮೆಯ ಈ ವರ್ಣನೆಯನ್ನು ನೋಡಿ: "ಅಮೃತ ಕಲಶವವಾಂತು ಚಾಮರವ ಪಿಡಿದು ತೋಳೆತ್ತಿ ಕೈಯಾಡಿಸುವ ಅಂದವು, ಕರವೆತ್ತಿ ಕುಸುಮಗಳ ಕೊಯ್ಯುವ ಚಂದದಿ ಅಂಗವ ತೋರುವ ಸ್ತ್ರೀಯಳು ಓರೆಯಾದ ಸೆರಗ ಕರದೊಳು ಪಿಡಿದು ಜಗ್ಗಿದಂಗದೊಡನೆ ಹಾರ ಹೀರಾವಳಿಗಳಿಂದ ಮುಖಚಂದ್ರಿಕೆಯೊಳು ನರ್ತಿಸುವ ಮುಂಗುರುಳಿನೊಳು ಅರೆನೋಟದ ಬಿರುದುಟಿಯಿಂದ ಚಕ್ರಾಕಾರದ ಮುಡಿಯೊಳುಪ್ಪುವುದು ಮನೋಹರವಾಗಿದೆ." [9]

ಭಾರತೀಯ ವಾಸ್ತುಶಿಲ್ಪದ ಇತಿಹಾಸವನ್ನು ಮೊಟ್ಟ ಮೊದಲಿಗೆ ಅಧಿಕಾರಯುತವಾಗಿ ಬರೆದಿರುವ ಯುರೋಪಿಯನ್ ವಿದ್ವಾಂಸ ಫರ್ಗೂಸನ್ ಭಾರತವನ್ನೆಲ್ಲಾ ಸುತ್ತಾಡಿ ನಮ್ಮ ಎಲ್ಲಾ ಪುರಾತನ ಕಟ್ಟಡಗಳನ್ನು ಪರೀಕ್ಷಿಸಿ ಅವುಗಳನ್ನು ವರ್ಗೀಕರಿಸಿ ಅವುಗಳ ಮೌಲ್ಯಮಾಪನ ಮಾಡಿದ್ದಾನೆ. ಆತನಿಗೆ ಯುರೋಪಿಯನ್ ವಾಸ್ತುಶಿಲ್ಪದ ಇತಿಹಾಸದ ಅಧ್ಯಯನದಲ್ಲಿಯೂ ಅಷ್ಟೆ ಪರಿಣಿತೆ ಇತ್ತು. ಅವನ ಪ್ರಕಾರ ಗ್ರೀಕರ ಕಟ್ಟಡಗಳಲ್ಲಿ ಪಾರ್ಥೆನಾನ್ ಹೇಗೆ ಅತಿ ಸುಂದರವೊ ಹಾಗೆ ಭಾರತೀಯ ದೇವಸ್ಥಾನಗಳಲ್ಲಿ ಹೊಯ್ಸಳೇಶ್ವರ ದೇವಸ್ಥಾನವು ಅಷ್ಟೆ ಸುಂದರವೆಂದಿದ್ದಾನೆ. [10] ಪಟೇಲ್ ಶಿವನಂಜೇಗೌಡರಿಗೆ ಫರ್ಗೂಸನ್ನನ ಬರಹ ಗೊತ್ತಿತ್ತೊ ಇಲ್ಲವೊ ತಿಳಿಯದು. ಆದರೆ ಅವರು ಇಲ್ಲಿಯ ಶಿಲ್ಪಗಳಲ್ಲಿ ದೂರದರ್ಶಕ ಯಂತ್ರವನ್ನು ಉಲ್ಲೇಖಿಸಿರುವುದರಿಂದಲೂ ಮತ್ತು ಅದನ್ನು ಟೆಲಿಸ್ಕೋಪ್ ಎಂದು ಕರೆಯುವುದರಿಂದಲೂ ಯುರೋಪಿಯನ್ನರು ಪತ್ತೆ ಮಾಡಿದ ಈ ವಿಷಯ ಗೊತ್ತಿತ್ತೆಂದು ಹೇಳಬಹುದು. ಪಟೇಲರಿಗೆ ಪಾಶ್ಚಿಮಾತ್ಯರ ಬರವಣಿಗೆ ಗೊತ್ತಿರಲಿ ಗೊತ್ತಿಲ್ಲದೆ ಇರಲಿ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳು ಚೆನ್ನಾಗಿ ಗೊತ್ತಿದ್ದವು. ಹೊಯ್ಸಳೇಶ್ವರ ದೇವಸ್ಥಾನವು ಶ್ರೀಚಕ್ರದಿಂದ ಕಟ್ಟಿದೆ. ಶ್ರೀಚಕ್ರಕ್ಕೆ ಪ್ರತಿ ಮೂಲೆಯೂ ಪ್ರತಿ ಕಂಭವೂ ಮೂಲೆ ಮೂಲೆಗಳಿಂದಲೇ ಶಿಲ್ಪಶಾಸ್ತ್ರ ಮರ್ಯಾದಾನುಸಾರವಾಗಿ ನಿರ್ಮಿಸಿವೆಯೆಂದು ಹೇಳಿದ್ದಾರೆ. [11] ಅವರು ಈ ವಿಗ್ರಹಗಳನ್ನು ಮತ್ತು ವಿಗ್ರಹಗಳು ಹೇಳುವ ಕಥೆಗಳನ್ನು ವರ್ಣಿಸಲು ಅನೇಕ ಪುರಾಣಗಳನ್ನು ಉದಾಹರಿಸುತ್ತಾರೆ. ಅವುಗಳಲ್ಲಿ ಕೆಲವು ಇವು; ಭವಿಷತ್‌ಪುರಾಣ, ದೇವೀಭಾಗವತ, ಭಾಗವತ, ಅದರಲ್ಲೂ ದಶಮಸ್ಕಂಧ, ಶಂಕರಸಂಹಿತೆ, ಸೂತಸಂಹಿತೆ, ಲೈಂಗಪುರಾಣ, ಶೈವಪುರಾಣದ ಧರ್ಮಸಂಹಿತೆ, ಮಹಾಭಾರತ ಮತ್ತು ರಾಮಾಯಣ. ನರ್ತಕ ನರ್ತಕಿಯರು ಭರತಶಾಸ್ತ್ರ ರೀತ್ಯಾ ನರ್ತಿಸುತ್ತಾರೆಂದು ಮತ್ತು ಪ್ರತಿಮೆಗಳು ಕಳಾಶಾಸ್ತ್ರ ರೀತ್ಯಾನುಸಾರವಾಗಿ ದ್ವಾರಕ ಚುಂಬನ ಮತ್ತು ಷೋಡಶ ಬಂಧನಯುಕ್ತವಾಗಿವೆಯೆಂದು ಬರೆದಿದ್ದಾರೆ. [12]

ಲೇಖಕರು ಈ ಗ್ರಂಥದ ಬೇರೆ ಬೇರೆ ಕಡೆ ಹಳೇಬಿಡೀನ ದೇವಸ್ಥಾನಗಳು ಹಾಳಾಗುವುದಕ್ಕೆ ಕಾರಣಗಳನ್ನು ತಿಳಿಸಿದ್ದಾರೆ: "ಕೆಲವು ನೆಲಸಮನಾಗಿ ಬಿದ್ದ ಕಲ್ಲುಗಳನ್ನು ಕೋಟೆ ಕೊತ್ತಲು, ಹಳ್ಳ, ಭಾವಿ, ಕಟ್ಟೆ, ಇವುಗಳಿಗೆ ಸೇರಿಸಿದ್ದಾರೆ. ನಿಂತ ಕೆಲವು ದೇವಸ್ಥಾನದ ವಿಗ್ರಹಗಳ ಕಲ್ಲುಗಳು ಅಲ್ಲಿಯೇ ಭೂಗತವಾಗಿವೆ.... ಸ್ವದೇಶ ಪರದೇಶದವರು ನೋಟಕ್ಕಾಗಿ ಬಂದವರು ಸಲಕ್ಷಣ ವಿಗ್ರಹಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ." [13] ಪರದೇಶದವರು ಅಪಹರಿಸಿದ್ದಕ್ಕೆ ಲೇಖಕರು ಒಂದು ಉದಾಹರಣೆಯನ್ನು ಕೊಡುತ್ತಾರೆ. ೧೭೯೯ರಲ್ಲಿ ಶ್ರೀರಂಗ

---

9. ಅದೇ, ಪು. ೯೬
10. ಡಾ॥ ಎಂ. ಶೇಷಾದ್ರಿ ಅವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದುದು—Dr. B. Sheik Ali (Ed.): The Hoysala Dynasty, p. 183
11. ಹಳೇಬೀಡು ಪುರಾತನ ಚರಿತ್ರೆ, ಪು. ೩೧
12 ಅದೇ, ಪು. ೩೪
13. ಅದೇ, ಪು. ೩೧

ಪಟ್ಟಣದ ಪತನವಾದ ಮೇಲೆ ಲಾಲಿ ಮತ್ತು ಬೇಲಿ ಎನ್ನುವ ಇಂಗ್ಲೀಷ್ ಸರದಾರರು ಹೊಯ್ಸಳೇಶ್ವರ ದೇವಸ್ಥಾನವನ್ನು ನೋಡಿ ಆಶ್ಚರ್ಯದ ಕೆಲಸಕ್ಕೆ ಮರುಳಾಗಿ ಒಂದು ಬಸವಣ್ಣ ವಿಗ್ರಹದ ಕೊರಳ ಘಂಟೆ ಮತ್ತು ಒಂದು ಸಣ್ಣ ವಿನಾಯಕ ವಿಗ್ರಹವನ್ನು ಅಪಹರಿಸಿಕೊಂಡು ಹೋದರು.[14] ಇಂತಹ ಅಪಹರಣ ಗಳನ್ನು ಅನೇಕ ಯೂರೋಪಿನ ದೇಶಿಯರು ಮಾಡಿದ್ದಾರೆ. ಸಣ್ಣ ರಾಷ್ಟ್ರವಾದ ಡೆನ್ಮಾರ್ಕ್‌ನವರು ಹೊಯ್ಸಳ ವಿಗ್ರಹಗಳನ್ನು ಎಷ್ಟು ತೆಗೆದುಕೊಂಡು ಹೋಗಿದ್ದಾರೆಂದರೆ, ಈಚೆಗೆ ಕೆಲವು ವರ್ಷಗಳ ಕೆಳಗೆ, ಅವರು ಒಬ್ಬ ಭಾರತೀಯ ತಜ್ಞನನ್ನು ನೇಮಿಸಿ ಕೋಪನ್ ಹೇಗನ್ ವಸ್ತುಸಂಗ್ರಹಾಲಯದಲ್ಲಿರುವ ಹೊಯ್ಸಳ ವಿಗ್ರಹಗಳ ವಿವರವಾದ ಪಟ್ಟಿಯನ್ನು ತಯಾರು ಮಾಡಿಸಿದರು. ಸಣ್ಣರಾಷ್ಟ್ರವಾದ ಡೆನ್ಮಾರ್ಕಿನಲ್ಲೆ ಇಷ್ಟು ಹೊಯ್ಸಳ ವಿಗ್ರಹಗಳಿದ್ದರೆ, ಸಂಪದ್ಭರಿತ ವಿಶಾಲವಾದ ಅಮೇರಿಕೆಯಲ್ಲಿ ಎಷ್ಟು ಇರಬೇಡ. ಇನ್ನೂ ಇಷ್ಟು ವಿಗ್ರಹ ಗಳ ಅಪಹರಣಗಳು ಆಗದೆ ಇದ್ದ ಕಾಲದಲ್ಲಿ ನಮ್ಮ ಅತ್ಯಂತ ಸುಂದರವಾದ ಹೊಯ್ಸಳೇಶ್ವರ ದೇವಸ್ಥಾನದ ವರ್ಣನೆಯನ್ನು ಮಾಡಿ ಪಟೇಲ್ ಶಿವನಂಜೇಗೌಡರು ತಮ್ಮ ಊರು ಹಳೇಬೀಡಿಗೂ ಕರ್ನಾಟಕಕ್ಕೂ ಅನುಪಮ ಸೇವೆಯನ್ನು ಈ ಗ್ರಂಥದ ಮೂಲಕ ಸಲ್ಲಿಸಿದ್ದಾರೆ.

ಭಾರತ ಸರ್ಕಾರದ ಪುರಾತತ್ವ ಶಾಖೆಯವರು ನಮ್ಮ ದೇಶದ ಪುರಾತನ ಕಾಲದ ರಾಜಧಾನಿಗಳನ್ನೂ ದೊಡ್ಡ ಪಟ್ಟಣಗಳನ್ನೂ ಸಂರಕ್ಷಿಸುತ್ತಿದ್ದಾರೆ ಮತ್ತು ಅವಶ್ಯವೆನಿಸಿದರೆ ಅವುಗಳ ಕ್ಷೇತ್ರದಲ್ಲಿ ಉತ್ಖನನ ಮಾಡುತ್ತಿದ್ದಾರೆ. ಉದಾಹರಣೆಗೆ, ಅಕ್ಬರನ ರಾಜಧಾನಿಯಾಗಿದ್ದ ಫತೇಪುರ್ ಸಿಕ್ರಿಯಲ್ಲಿಯ ಕಟ್ಟಡಗಳನ್ನು ಸಂರಕ್ಷಿಸುತ್ತಿದ್ದಾರೆ. ಮತ್ತು ಹಂಪಿಯಲ್ಲಿರುವ ದೇವಸ್ಥಾನಗಳನ್ನು ಸಂರಕ್ಷಿಸುತ್ತಿದ್ದಾರೆ. ಈ ಕೆಲಸದ ಜತೆಗೆ ಉತ್ಖನನ ನಡೆಯಿಸಿ ಹಂಪೆಯ ಪುರಾತನ ಅವಶೇಷಗಳನ್ನು ಹೊರಗೆ ತೆಗೆಯುತ್ತಿದ್ದಾರೆ. ಹಳೇಬೀಡಿನಲ್ಲಿಯೂ ಕೂಡ ಹಂಪೆಯಲ್ಲಿ ಮಾಡಿದ ಹಾಗೆ ಮೇಲಿರುವ ಕಟ್ಟಡಗಳನ್ನು ಸಂರಕ್ಷಿಸಬೇಕು. ಭೂಗತವಾಗಿರುವದನ್ನು ಭೂಶೋಧನೆಯಿಂದ ಹೊರಗಡೆ ತೆಗೆಯಬೇಕು. ಇಂತಹ ಕೆಲಸಕ್ಕೆ ಶಿವನಂಜೇಗೌಡ, ಸಕಲೇಶಪುರದ ಶ್ರೀಕಂಠಯ್ಯ, ಆರ್. ನರಸಿಂಹಾಚಾರ್ಯ ಮತ್ತು ಎಂ. ಎಚ್. ಕೃಷ್ಣ ಅವರುಗಳ ಬರೆವಣಿಗೆಗಳು ಅತ್ಯಂತ ಉಪಯುಕ್ತ.

---

14. ಅದೇ, ಪು. ೩೮

ಡಾ॥ ಎಸ್. ರಾಜಶೇಖರ

ಹಂಪೆಯ ಕೃಷ್ಣದೇವರಾಯನ ಅಪೂರ್ವ ವಿಗ್ರಹ

ವಿಜಯನಗರದ ಅರಸ ಕೃಷ್ಣದೇವರಾಯನು ಕಳಿಂಗ ದಿಗ್ವಿಜಯ ಕೈಕೊಂಡಾಗ ಮೊದಲು ಮುತ್ತಿದುದು ಉದಯಗಿರಿ ರಾಜ್ಯದ ಮುಖ್ಯ ಪಟ್ಟಣವಾದ ಉದಯಗಿರಿಯನ್ನು. ಕ್ರಿ. ಶ. ೧೫೧೨ರಲ್ಲಿ ಉದಯಗಿರಿಕೋಟೆಯನ್ನು ಮುತ್ತಿದರೂ ಅದನ್ನು ತನ್ನ ವಶವಾಗಿರಿಸಿಕೊಂಡಿದ್ದು ಕ್ರಿ. ಶ. ೧೫೧೩ರಲ್ಲಿ. ಉದಯಗಿರಿಯನ್ನು ಜಯಿಸಿದ ನಂತರ ಕೃಷ್ಣದೇವರಾಯನು ಅರಸಿಯರಾದ ತಿರುಮಲಾದೇವಿ ಮತ್ತು ಚಿನ್ನಾದೇವಿಯರೊಂದಿಗೆ ತಿರುಪತಿ ಮತ್ತು ಶ್ರೀಶೈಲಗಳಿಗೆ ಹೋಗಿ ಅಲ್ಲಿ ಕ್ರಮವಾಗಿ ವೆಂಕಟೇಶ್ವರ ಮತ್ತು ಮಲ್ಲಿಕಾರ್ಜುನ ದೇವರನ್ನು ಪೂಜಿಸಿ, ದಾನಗಳನ್ನಿತ್ತು ರಾಜಧಾನಿ ವಿಜಯನಗರಕ್ಕೆ ಹಿಂದಿರುಗುವಾಗ ವಿಜಯದ ದ್ಯೋತಕವಾಗಿ ಉದಯಗಿರಿಯಿಂದ ಶ್ರೀ ಬಾಲಕೃಷ್ಣನ ಮೂರ್ತಿಯೊಂದನ್ನು ತನ್ನೊಂದಿಗೆ ತಂದನು.

ರಾಜಧಾನಿಯಲ್ಲಿ ಆ ವಿಗ್ರಹದ ಪ್ರತಿಷ್ಠಾಪನೆಗಾಗಿ ಹೊಸದಾಗಿ ದೇವಾಲಯವನ್ನು ನಿರ್ಮಿಸಿದನು. ಅದೇ ಬಾಲಕೃಷ್ಣ ದೇವಾಲಯ. ಇದನ್ನು ಕೃಷ್ಣಸ್ವಾಮಿ ದೇವಾಲಯವೆಂದೂ ಕರೆಯುತ್ತಾರೆ. ಬಾಲಕೃಷ್ಣನ ವಿಗ್ರಹವನ್ನು ಕ್ರಿ. ಶ. ೧೫೧೫ ಫೆಬ್ರುವರಿ ತಿಂಗಳ ೧೯ನೇ ದಿನಾಂಕದಂದು ಪ್ರತಿಷ್ಠೆ ಮಾಡಲಾಯಿತು. ಈ ದೇವಾಲಯದಲ್ಲಿರುವ ಶಾಸನವೊಂದರಲ್ಲಿ "ಶ್ರೀಮನ್ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀವೀರ ಕೃಷ್ಣರಾಯರು ಉದಯಗಿರಿಯಿಂದ ಬಿಜಮಾಡಿಸಿಕೊಂಡು ಬಂದ ಶ್ರೀಬಾಲಕೃಷ್ಣದೇವರ ಪ್ರತಿಷ್ಠೆಯ ಮಾಡಿ, ಆ ಪ್ರತಿಷ್ಠೆ ಕಾಲದಲ್ಲಿ ಕೃಷ್ಣದೇವರಿಗೆ ನವರತ್ನ ಖಚಿತ ನಾನಾ ವಿಧ ಆಭರಣಗಳನ್ನು ಸುವರ್ಣರಜತಾದ್ಯುಪಕರಣಗಳನೂ" ಸಮರ್ಪಿಸಿದನೆಂದು ವರ್ಣಿಸಲಾಗಿದೆ. 1

ಬಾಲಕೃಷ್ಣ ದೇವಾಲಯವು ಗರ್ಭಗೃಹ, ಪ್ರದಕ್ಷಣಾ ಪಥ, ಸುಕನಾಸಿ, ಅರ್ಧಮಂಟಪ, ನವರಂಗ, ಮುಖಮಂಟಪಗಳನ್ನೂ ಪರಿವಾರ ದೇವತೆಗಳಿಗಾಗಿ ಚಿಕ್ಕ ದೇವಾಲಯಗಳನ್ನೂ ಹೊಂದಿದೆ. ಮುಖಮಂಟಪದ ಕಂಬಗಳ ಮೇಲೆ ಅನೇಕ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಶಿಲ್ಪಗಳು ಹೆಚ್ಚಾಗಿ ವೈಷ್ಣವ ಸಂಪ್ರದಾಯಕ್ಕೆ ಸೇರಿದವುಗಳಾಗಿವೆ. ಮುಖಮಂಟಪದ ಮುಂದಿನ ಸಾಲಿನ (ಗರ್ಭಗೃಹಕ್ಕೆ ಎದುರಾಗಿ ಇರುವ) ಕಂಬವೊಂದರಲ್ಲಿ ಪಶ್ಚಿಮದ ಕಡೆಗೆ ಇರುವ ಉಬ್ಬುಶಿಲ್ಪವೊಂದು ವಿಶಿಷ್ಟವಾದುದಾಗಿದೆ. ಈ ಶಿಲ್ಪದಲ್ಲಿ ಕೃಷ್ಣದೇವರಾಯನು ತ್ರಿಭಂಗಿಯಲ್ಲಿ ನಿಂತಿದ್ದು, ಇವನು ಬಾಲಕೃಷ್ಣನ ಪ್ರತಿಮೆಯ ಮುಂದೆ ಅಂಜಲಿಹಸ್ತದಲ್ಲಿ ಇದ್ದಾನೆ. ಬಾಲಕೃಷ್ಣನನ್ನು ಪೀಠವೊಂದರ ಮೇಲೆ ಮಂಡಿ ಊರಿ ನಡೆಯುತ್ತಿರುವ ಭಂಗಿಯಲ್ಲಿ ತೋರಿಸಲಾಗಿದೆ. ಬಲಗೈಯಲ್ಲಿ ಬೆಣ್ಣೆಯ ಮುದ್ದೆಯನ್ನೂ ಹಿಡಿದಿದ್ದಾನೆ. ಕೃಷ್ಣದೇವರಾಯನು ಧೋತಿಯನ್ನು

1. South Indian Inscriptions, Vol. 4, No. 254

ಉಟ್ಟಿದ್ದು ತೆರೆದ ಕೋಟಿನಂತಹ ಮೇಲಂಗಿಯನ್ನು ಧರಿಸಿದ್ದಾನೆ. ತಲೆಯ ಮೇಲೆ ಧರಿಸಿದ ಟೋಪಿ ಎತ್ತರವಾಗಿರದೆ ಗಿಡ್ಡಾಗಿದ್ದು, ಚಿದಂಬರಂದಲ್ಲಿಯ ನಟರಾಜ ದೇವಸ್ಥಾನದಲ್ಲಿಯ ಕೃಷ್ಣದೇವರಾಯನ ಶಿಲ್ಪದಲ್ಲಿದ್ದಂತೆ ಇದೆ.

ಗರ್ಭಗುಡಿಯಲ್ಲಿ ಪ್ರತಿಷ್ಠೆ ಮಾಡಲಾಗಿದ್ದ ಬಾಲಕೃಷ್ಣನ ವಿಗ್ರಹವು ಪ್ರಸ್ತುತ ಮದ್ರಾಸದಲ್ಲಿಯ ಸರಕಾರದ ವಸ್ತುಸಂಗ್ರಹಾಲಯದಲ್ಲಿದೆ.[2] ಈ ಮೂರ್ತಿಯಲ್ಲಿ ಬಾಲಕೃಷ್ಣನು ಮಂಡೆ ಊರಿ ನಡೆಯುತ್ತಿರುವ ಭಂಗಿಯಲ್ಲಿ ಇರದೆ ಪೀಠದ ಮೇಲೆ ಕುಳಿತ ಭಂಗಿಯಲ್ಲಿರುವದು ಗಮನಾರ್ಹ. ಕೃಷ್ಣದೇವರಾಯನು ಉದಯಗಿರಿಯಿಂದ ವಿಜಯನಗರಕ್ಕೆ ಬಿಜಯ ಮಾಡಿಸಿದ ಬಾಲಕೃಷ್ಣನಿಗೆ ದೇವಾಲಯವನ್ನು ಕಟ್ಟಿದುದಲ್ಲದೆ, ತನ್ನ ಭಕ್ತಿಯನ್ನು ಮೇಲೆ ವರ್ಣಿಸಲಾದ ಶಿಲ್ಪವೊಂದರಲ್ಲಿ ಅಜರಾಮರವಾಗಿ ಉಳಿಯುವಂತೆ ಮಾಡಿದ್ದಾನೆ. ಕೃಷ್ಣದೇವರಾಯನ ಅನೇಕ ಶಿಲ್ಪಗಳು ದೊರೆತಿದ್ದರೂ ಈ ರೀತಿ ದೇವರನ್ನು ಪೂಜಿಸುತ್ತಿರುವ ಶಿಲ್ಪವು ಬೇರೆಲ್ಲೂ ಕಂಡು ಬಂದಿಲ್ಲ,

---

2. C. Shivarama Murthy : 'Balakrishna From Hampi in the Madras Museum', Journal of Oriental Research, Madras, Vol. 10, 1936, pp. 275-76

ಕೆ. ಜಗನ್ನಾಥ ಶಾಸ್ತ್ರಿ

ಪೊಂಬುರ್ಚನಾಡಿನ ಅರಸು ಪರಂಪರೆ

ಹೊಂಬುಚ ಒಂದು ಚಿಕ್ಕ ಗ್ರಾಮ. ಇದು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿದೆ. ಇದು ಜೈನ ಧರ್ಮೀಯ ದಿಗಂಬರ ಪಂಥದವರ ಯಾತ್ರಾಸ್ಥಳ. ಒಂದು ಅತಿಶಯ ಕ್ಷೇತ್ರ. ಇದರ ಕೀರ್ತಿ ಭಾರತದ ಉದ್ದಗಲಕ್ಕೂ ಹಬ್ಬಿದೆ. ಹೊಂಬುಚದಲ್ಲಿ ಒಟ್ಟು ೨೮ ಶಿಲಾಶಾಸನಗಳಿವೆ. ಕ್ರಿ. ಶ. ೮೦೦ ರಿಂದ ಕ್ರಿ. ಶ. ೧೫೩೦ ರ ವರೆಗೆ ಇವುಗಳ ಹರವು ಇದೆ.

೧. ಶಾಸನಗಳ ವಿವರ (Inscriptions of Shimoga Dirtrict ನಲ್ಲಿ ಹೇಳಿರುವಂತೆ) :

	ಪ್ರದೇಶ	ಒಟ್ಟು ಶಾಸನಗಳು	ಅವಧಿ	'ಇನ್ಸ್ಕ್ರಿಪ್ಷನ್ಸ್ ಆಫ್ ಶಿವಮೊಗ್ಗ ಡಿಸ್ಟ್ರಿಕ್ಟ್'ನಲ್ಲಿ ಹೇಳಿರುವ ಶಾಸನಗಳ ಸಂಖ್ಯೆ
೧	ಪಂಚ ಬಸದಿ	೧೧	ಕ್ರಿ. ಶ. ೯೫೦ ರಿಂದ ಕ್ರಿ.ಶ. ೧೨೯೬	೩೫ ರಿಂದ ೪೬ ರ ವರೆಗೆ
೨	ಪದ್ಮಾವತಿ ದೇವಾಲಯ	೧೦	ಕ್ರಿ.ಶ. ೧೦೬೦ ರಿಂದ ಕ್ರಿ.ಶ. ೧೫೩೦	೪೬, ೪೮ ರಿಂದ ೫೬ ರ ವರೆಗೆ
	ಈಗ ಈ ದೇವಾಲಯದ ಬಳಿ ಹತ್ತು ಶಾಸನಗಳೂ ಇಲ್ಲ. ದೇವಾಲಯದ ಪುನರ್ನಿರ್ಮಾಣ ಸಮಯದಲ್ಲಿ ಸ್ಥಳಾಂತರಿಸಲಾಗಿದೆ.			
೩	ಸೂಳೆ ಬಸದಿ	೨	ಕ್ರಿ.ಶ. ೧೦೬೨ ರಿಂದ ಕ್ರಿ.ಶ. ೧೦೬೭	೫೭, ೫೮
	೫೭ ನೆಯ ಶಾಸನ, ಒಂದು ಮಾನಸ್ಥಂಭದ ಮೇಲಿದೆ. ಮಾನಸ್ಥಂಭವನ್ನು ಈಗ ಪಾರ್ಶ್ವನಾಥ ದೇವಾಲಯದ ಮುಂದೆ ಸಭಾಂಗಣದ ಮುಂಭಾಗದಲ್ಲಿ ತಂದು ಸ್ಥಾಪಿಸಲಾಗಿದೆ.			
೪	ಚಂದ್ರಪ್ರಭ ಬಸದಿಯ ಗೋಡೆಯ ಮೇಲೆ	೧	ಕ್ರಿ. ಶ. ೧೦೬೬	೫೯
೫	ಗುಡ್ಡದ ಬಸದಿ	೧	—	೬೦
	ಈಗ ಗುಡ್ಡದ ಬಸದಿ ಇಲ್ಲ. ಇದನ್ನು ನೆಲಸಮ ಮಾಡಲಾಗಿದೆ. ಹಾಗಾಗಿ ಈ ಶಾಸನವನ್ನು ನೋಡುವುದೂ ಕಷ್ಟ.			
೬	ಕಮಠೇಶ್ವರ ದೇವಾಲಯ	೧	ಕ್ರಿ. ಶ. ೮೦೦ ರಿಂದ ಕ್ರಿ. ಶ. ೧೨೮೮	೬೧
	ಈ ದೇವಾಲಯದ ಪ್ರವೇಶ ದ್ವಾರದ ಮೇಲೆ ದ್ವಾರಬಂಧದ ಮೇಲೆ ಒಂದು ಶಾಸನವಿದೆ.			

'ಹುಂಚ' ಹೆಸರಿನ ಹಿನ್ನೆಲೆ: ಪ್ರಾಚೀನ ಕಾಲದಿಂದಲೂ ಈ ಪ್ರಾಂತವನ್ನು ಬೇಡರ ನಾಯಕರು ಆಳುತ್ತಿದ್ದರು. ಈಗಿನ ಹುಂಚ- ಎಂಬ ಗ್ರಾಮ ಇರುವಲ್ಲಿ ಹಿಂದೆ 'ಕನಕಪುರ' ಎಂಬ ಊರು ಇತ್ತು. ಈಗಿನ ಹುಂಚ ಮತ್ತು ಭಿಲ್ಲೇಶ್ವರ- ಈ ಎರಡು ಊರುಗಳೂ ಸೇರಿ ಆಗಿನ ಕನಕಪುರವಾಗಿತ್ತು. ಈ ಸುತ್ತಲ ಹಿರಿಯ ಜನರು ತಿಳಿದಿದ್ದ 'ಶ್ರೀ ಭಿಲ್ಲೇಶ್ವರ ಮಹಾತ್ಮೆ' ಎಂಬ ಜನಪದಕಾವ್ಯದ ಪದ್ಯಗಳನ್ನು ನಾನು ಸಂಗ್ರಹಿಸುತ್ತಿದ್ದೇನೆ. ಇದು ಸಾಂಗತ್ಯದಲ್ಲಿ ರಚಿತವಾಗಿದೆ. ಇದರ ಒಂದು ಪದ್ಯ ಹೀಗಿದೆ:

ಕನಕಪುರದ ಅರಸ ಕನಕನಾಯಕ ಧೀರ ।
ಕನಕವನ್ನೇ ದಾನ ನೀಡೆ ।
ಮನಮೆಚ್ಚಿ ಪೊಂಬಿಚ್ಚಪುರವೆಂದು ಕರೆದರು ।
ವಿನಯದಿ ಪೊಗಳಿ ಪಾಡುತಲಿ ॥

ಈ ಪದ್ಯದಿಂದ ಈ ಪ್ರದೇಶವನ್ನು ಕನಕನಾಯಕ ಎಂಬ ಬೇಡರ ತಲೆಯಾಳು ಆಳುತ್ತಿದ್ದನೆಂದೂ ರಾಜಧಾನಿಯ ಹೆಸರು ಕನಕಪುರವೆಂದೂ ಅವನು ಪೊನ್ನನ್ನೇ ಬಿಚ್ಚ(ಭಿಕ್ಷ)ವಾಗಿ ಕೊಡುತ್ತಿದ್ದುದರಿಂದ ಅರ್ಥಿಗಳು ಇದನ್ನು 'ಪೊಂಬಿಚ್ಚಪುರ' ಎಂದು ಕರೆದರೆಂದೂ ದೃಢಪಡುತ್ತದೆ. 'ಶ್ರೀಪದ್ಮಾವತೀಮಹಾತ್ಮೆ ಅಥವಾ ಜಿನದತ್ತರಾಯಪುರಾಣ' ಎಂಬ ಸಾಂಗತ್ಯ ಗ್ರಂಥವೊಂದಿದೆ. ಇದನ್ನು ಪದ್ಮನಾಭಕವಿ ಬರೆದಿದ್ದಾನೆ. ಇದು ಸಾಂಗತ್ಯದಲ್ಲಿದೆ. ಈ ಪ್ರದೇಶವನ್ನು ಬೇಡರ ನಾಯಕ ಆಳುತ್ತಿದ್ದನೆಂಬುದಕ್ಕೆ ಒಂದು ಪದ್ಯ ಹೀಗೆ ಹೇಳುತ್ತದೆ.

ಜಿನದತ್ತರಾಯ ಲಕ್ಕಿಮರದ ಬಳಿ ಬಂದು ಇದ್ದಾನೆ. ಹೊಸಬನಾದ ಇವನನ್ನು ಕಂಡ ವನಚರರು ಹತ್ತಿರ ಬರುತ್ತಾರೆ. ಆಗ ಜಿನದತ್ತ ಕೇಳುತ್ತಾನೆ:

ವನವ ರಕ್ಷಿಪರಾರು ಗೃಹವೆಲ್ಲಿ ನಿಮಗೆಂದು ।
ಜಿನದತ್ತರಾಯ ಕೇಳಿದನು ॥

ಇದಕ್ಕೆ ವನಚರರ ಉತ್ತರ:

ವನವೀ ಬ್ಯಾಡನಾಯಕನದು ನಮಗೀ ।
ವನದೊಳಗಾವಾಸ ಸ್ವಾಮಿ ॥

ಇದೇ ಕಾವ್ಯದ ಪ್ರಸ್ತಾವನೆಯಲ್ಲಿ ಕವಿ ಒಂದು ಶ್ಲೋಕವನ್ನು ಉದ್ಧರಿಸುತ್ತಾನೆ. (ಈ ಪದ್ಯ ಪದ್ಮಾವತಿ ಅಮ್ಮನವರ ಗರ್ಭಗುಡಿಯಲ್ಲಿದ್ದ ಒಂದು ಶಾಸನದಲ್ಲಿದೆ. ದೇವಾಲಯವನ್ನು ಪುನರ್ನಿರ್ಮಾಣ ಮಾಡಿದಾಗ ಈ ಶಾಸನವನ್ನು ಸ್ಥಳಾಂತರಿಸಿದ್ದಾರೆ). ಆ ಶ್ಲೋಕ ಹೀಗಿದೆ:

ಕಲ್ಯಬ್ದೇ ಶತಪಂಚಕೇ ಪ್ರಭವ ಸಂವತ್ಸರೇ
ಸತ್ತಮೇ ಸ್ಮಾತ್ತಪಸ್ಯೇ ।
ಸಪ್ತಮ್ಯಾಂ ಕೃಷ್ಣಪಕ್ಷೇ ಪ್ರವರ ಗುರುದಿನೇ
ಕುಂಭಲಗ್ನೇ ಪ್ರಸೀದೇ ।
ಮೂಲಾಭೇ ಸಿದ್ಧಿಯೋಗೇ ಪ್ರಕಟಿತ ವಿಭವೇ
ಸುಪ್ರಶಸ್ತಾಂ ಚಕಾರ ।
ರಾಜಾ ಜೈನೇಂದ್ರದತ್ತಃ ಕನಕಮಯಪುರೇ
ಯಕ್ಷದೇವೀಂ ಪ್ರತಿಷ್ಠಾ ॥

ಕಲಿವರ್ಷದ ಐದುನೂರನೆಯ ಪ್ರಭವ ಸಂವತ್ಸರದಲ್ಲಿ ಫಾಲ್ಗುಣ ಕೃಷ್ಣ ಸಪ್ತಮಿ, ಗುರುವಾರ, ಕುಂಭಲಗ್ನವೂ ಮೂಲಾನಕ್ಷತ್ರವೂ ಸಿದ್ಧಿಯೋಗವೂ ಇರುವ ಶುಭ ಮುಹೂರ್ತದಲ್ಲಿ ಜೈನೇಂದ್ರದತ್ತ(ಜಿನದತ್ತ)ನು ಕನಕಮಯ ಪುರದಲ್ಲಿ ಯಕ್ಷದೇವಿ(ಪದ್ಮಾವತಿ)ಯನ್ನು ಪ್ರತಿಷ್ಠಾಪಿಸಿದನು.

ಈ ಆಧಾರಗಳಿಂದ ಈಗಿನ ಹುಂಚವು ಆಗ ಕನಕಪುರ ಎಂದು ಹೆಸರು ಪಡೆದಿತ್ತು ಎಂಬುದು ಸ್ಪಷ್ಟಪಡುತ್ತದೆ. ಅಲ್ಲದೆ ಜಿನದತ್ತರಾಯ ಈ ಪ್ರದೇಶಕ್ಕೆ ಬರುವ ಮೊದಲೇ ಕನಕಪುರಕ್ಕೆ ಪೊಂಬಿಚ್ಚಪುರ ಎಂಬ ಹೆಸರೂ ಇತ್ತೆಂದೂ ದೃಢವಾಗುತ್ತದೆ ಇದು ರಾಜಧಾನಿಯಾದ್ದರಿಂದ 'ಪೊಟ್ಟಿ ಪೊಂಬಿಚ್ಚಪುರ' ಎಂದು ಕರೆದಿರಬಹುದು. ಕಾಲಾಂತರದಲ್ಲಿ ಇದು ಪೊಂಬಿಚ್ಚ— ಪೊಂಬುಚ್ಚ— ಹೊಂಬುರ್ಚ— ಹೊಂಬುಚ— ಹುಂಚ ಆಗಿದೆ.

ಅರಸೊತ್ತಿಗೆಯ ಪರಂಪರೆ: ಶಾಸನಗಳಲ್ಲಿ ವಿವರಿಸಿರುವಂತೆ ಪೊಂಬುರ್ಚ ರಾಜ್ಯದ ಅರಸು ಪರಂಪರೆ ಹೀಗಿದೆ:

ಉತ್ತರಭಾರತದಲ್ಲಿ ಮಥುರೆ ಒಂದು ರಾಜ್ಯ. ಅದನ್ನು ಉಗ್ರವಂಶದವರು ಆಳುತ್ತಿದ್ದರು. ರಾಹ ಎಂಬುವನು ಈ ವಂಶದಲ್ಲಿ ಪ್ರಸಿದ್ಧನಾಗಿದ್ದವನು. ಅವನು ಕುರುಕ್ಷೇತ್ರದಲ್ಲಿ ನಡೆದ ಭಾರತ ಯುದ್ಧದಲ್ಲಿ ಹೋರಾಡಿ ಗೆಲ್ಲಲು, ನಾರಾಯಣನು ಮೆಚ್ಚಿ ಒಂದು ಶಂಖವನ್ನೂ ವಾನರಧ್ವಜವನ್ನು ಕೊಟ್ಟನು. ಅನಂತರ ಹಲವರು ರಾಜ್ಯವಾಳಿದರು. ಸಹಕಾರ ಎಂಬ ಅರಸ ಆಳುತ್ತಿದ್ದ ಕಾಲ. ಆತ ನರಮಾಂಸ ತಿನ್ನಲು ಪ್ರಾರಂಭಿಸಿದ. ಅವನ ಹೆಂಡತಿ ಶ್ರಿಯಾದೇವಿ. ಇವಳಲ್ಲಿ ಹುಟ್ಟಿದವನು ಜಿನದತ್ತ. ಜಿನದತ್ತ ತಂದೆಯಾದ ಸಹಕಾರ ದೇವನ ನಡತೆಗೆ ಹೇಸಿ, ರಾಜ್ಯವನ್ನು ಬಿಟ್ಟು, ದಕ್ಷಿಣಾಭಿಮುಖವಾಗಿ ಹೊರಟ. ಮಾರ್ಗಮಧ್ಯದಲ್ಲಿ ತನ್ನನ್ನು ತಡೆದ ಸಿಂಹರಥ ಎಂಬ ಅಸುರನನ್ನು ಕೊಂದ. ಇದನ್ನು ಮೆಚ್ಚಿದ ಜಕ್ಕಿಯಬ್ಬೆ (ಪದ್ಮಾವತಿದೇವಿ) ಸಿಂಹಲಾಂಛನವನ್ನು ಕೊಟ್ಟಳು. ಮುಂದುವರಿದು ಬಂದ ಜಿನದತ್ತ ಅಂಧಕಾಸುರ ಎಂಬ ಅಸುರನನ್ನು ಕೊಂದನು. ಆ ಸ್ಥಳದಲ್ಲಿದ್ದ ಊರಿಗೆ ಅಂಧಾಸುರ ಎಂದೇ ಹೆಸರು ಇಟ್ಟನು. (ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರದ ಬಳಿ ಈ ಊರು ಇದೇ ಹೆಸರಿನಿಂದ ಈಗಲೂ ಇದೆ). ಅನಂತರ ಕನಕಪುರ(ಈಗಿನ ಹುಂಚ)ಕ್ಕೆ ಬಂದು ಕನಕಾಸುರನನ್ನು ಕೊಂದನು. ಕುಂದದ ಕೋಟೆಯಲ್ಲಿದ್ದ (ತೀರ್ಥಹಳ್ಳಿ ತಾಲ್ಲೂಕಿನ ಕುಂದಾದ್ರಿ) ಕರ ಮತ್ತು ಕರದೂಷಣ ಎಂಬ ರಾಕ್ಷಸರನ್ನು ಯುದ್ಧಮಾಡಿ ಓಡಿಸಿದ. ಇದರಿಂದ ಪ್ರಸನ್ನಳಾದ ಪದ್ಮಾವತಿದೇವಿಯು ಕನಕಪುರ ಎನಿಸಿದ ಪೊಂಬುರ್ಚದ ಲೊಕ್ಕಿಯ ಮರದಲ್ಲಿ ನೆಲೆಸಿ, ಲೊಕ್ಕಿಯಬ್ಬೆ ಎಂಬ ಎರಡನೆಯ ಹೆಸರನ್ನು ಪಡೆದಳು. ಅನಂತರ ಜಿನದತ್ತನಿಗೆ ಈ ಊರನ್ನೇ ರಾಜ್ಯಸ್ಥಾನ (ರಾಜಧಾನಿ) ಮಾಡಿಕೊಳ್ಳುವಂತೆ ಹೇಳಿದಳು. ಇಲ್ಲಿ ಜಿನದತ್ತನೂ ಅನಂತರ ಇನ್ನೂ ಕೆಲವರೂ ರಾಜ್ಯವಾಳಿದರು.

ಶ್ರೀಕೇಶಿ ಮತ್ತು ಜಯಕೇಶಿ ಎಂಬುವರು ಈ ವಂಶದ ಪ್ರಸಿದ್ಧರಾದ ರಾಜರು. ಶ್ರೀಕೇಶಿಗೆ ವಿವಾಹವಾಗಿತ್ತು. ಅವನ ಹೆಂಡತಿಯ ಹೆಸರು ಮಹಾದೇವಿ. ಇವರ ಮಗ ರಣಕೇಶಿ. ಇವನ ನಂತರ ಹಲವರು ರಾಜ್ಯವಾಳಿದರು.

ಅನಂತರ ಆಳಿದವರಲ್ಲಿ ಹಿರಣ್ಯಗರ್ಭ ಪ್ರಸಿದ್ಧನಾದವನು. ಇವನು ಶಾಂತಳಿಗೆ ನಾಡನ್ನು ಏಕಾಯತ್ತ ಮಾಡಿದನು. ಇವನು ಮಹಾದಾನಿ. ಇವನನ್ನು ಕಂದುಕಾಚಾರ್ಯ, ದಾನವಿನೋದಿ, ವಿಕ್ರಮಶಾಂತರ-ಎಂದು ಕರೆಯುತ್ತಿದ್ದರು. ಇವನ ಹೆಂಡತಿ ಲಕ್ಷ್ಮೀದೇವಿ. ಇವಳು ಬನವಸಿಯ ಅರಸ ಕಾಮದೇವನ ಮಗಳು. ಹಿರಣ್ಯಗರ್ಭ ಮತ್ತು ಲಕ್ಷ್ಮೀದೇವಿಗೆ ಒಬ್ಬ ಮಗನಾದ. ಅವನ ಹೆಸರು ಚಾಗಿ ಶಾಂತರ. ಇವನು ಚಾಗಿಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದನು. ಚಾಗಿಶಾಂತರನಿಗೆ ಆಳುಪರ ಅರಸ ರಣಂಜಯನ ಮಗಳು ಎಂಜಲದೇವಿಯನ್ನು ಕೊಟ್ಟು ವಿವಾಹವಾಗಿತ್ತು. ಇವರ ಮಗ ವೀರಶಾಂತರ. ವೀರಶಾಂತರನಿಗೆ ಆದೆಯೂರ ಶಾಂತಿವರ್ಮನ ಮಗಳು ಜಾಕಲದೇವಿ ಪತ್ನಿಯಾದಳು. ಇವರಿಗೆ ಕನ್ನರಶಾಂತರ ಮತ್ತು ಕಾಮದೇವ ಎಂಬ ಇಬ್ಬರು ಗಂಡುಮಕ್ಕಳಾದರು. (ಕನ್ನರಶಾಂತರನಿಗೆ ವಿವಾಹವಾದಂತೆ ಇಲ್ಲ). ಕಾಮಶಾಂತರನು ಬೀರಬಯಲ್‌ನಾಥನ ಮಗಳು ಚಂದಲದೇವಿಯನ್ನು ಮದುವೆಯಾದನು. ಇವರ ಮಗ ತ್ಯಾಗಿ ಶಾಂತರ. ಕಾಮದೇವನ ನಂತರ ತ್ಯಾಗಿಶಾಂತರ ಪೊಂಬುರ್ಚದ ರಾಜನಾದ. ತ್ಯಾಗಿಶಾಂತರ ಮತ್ತು ನಾಗಲದೇವಿಯ ಮಗ ನನ್ನಿಶಾಂತರ. ಇವನು ಪಲಸಿಗೆ ನಾಡಿನ ಅರಿಕೇಸರಿಯ ಮಗಳು ಸಿರಿಯಾದೇವಿಯನ್ನು ವಿವಾಹವಾದ. ಇವರ ಮಗ ರಾಯಶಾಂತರ. ಇವನು ಅಕ್ಕಾದೇವಿಯನ್ನು ವಿವಾಹವಾದ. ಇವರಿಗೆ ಚಿಕ್ಕವೀರ ಶಾಂತರ ಎಂಬ ಮಗ ಹುಟ್ಟಿದ. ಇವನು ರಾಜನಾಗಿದ್ದಾಗ ಬಿಜ್ಜಲದೇವಿಯನ್ನು ವಿವಾಹವಾದ. ಚಿಕ್ಕವೀರ ಶಾಂತರ-ಬಿಜ್ಜಲದೇವಿಯರ ಮಗ ಅಣ್ಣಮದೇವ. ಅಣ್ಣಮದೇವನಿಗೂ ವಿವಾಹವಾಯಿತು. ಅವನ ಹೆಂಡತಿ ಹೋಚಲದೇವಿ. ಇವರಿಗೆ ಇಬ್ಬರು ಮಕ್ಕಳು. ಹಿರಿಯವಳು ಹೆಣ್ಣು. ಅವಳ ಹೆಸರು ಬೀರಬ್ಬರಸಿ. ಕಿರಿಯವನು ಗಂಡು. ಅವನ ಹೆಸರು ತೈಲಪದೇವ. ಬೀರಬ್ಬರಸಿಯನ್ನು ಆಳುಪರ ಬಂಕಿಯಾಳ್ವನಿಗೆ ಕೊಟ್ಟು ಮದುವೆ ಮಾಡಿದರು.

ಬಂಕಿಯಾಳ್ವನ ತಂಗಿಯಾದ ಮಾಂಕಬ್ಬರಸಿಯನ್ನು ತೈಲಪದೇವ ವಿವಾಹವಾದ. ತೈಲಪನು ಅನಂತರ ಗಂಗರ ರಾಜನಾದ ಪಾಲಯದೇವನ ಮಗಳು ಕೆಳೆಯಬ್ಬರಸಿಯನ್ನೂ ವಿವಾಹವಾದ. ಈ ಕೆಳೆಯಬ್ಬರಸಿಯೇ ಪಟ್ಟದ ರಾಣಿಯಾದಳು. ಇವರಿಗೆ ಮೂವರು ಗಂಡುಮಕ್ಕಳು,

ಬೀರದೇವ, ಸಿಂಗಿದೇವ, ಬ್ರಹ್ಮದೇವ. ಹಿರಿಯನಾದ ಬೀರದೇವನಿಗೆ ನಾಲ್ವರು ಹೆಂಡತಿಯರು. ಮೊದಲನೆಯವಳು ಬೀರಲಮಹಾದೇವಿ. ಇವಳು ಗಂಗ ವಂಶದವಳು. ಎರಡನೆಯವಳು ಬಿಜ್ಜಲದೇವಿ. ಇವಳು ನೊಳಂಬರ ರಾಜ ನರಸಿಂಗದೇವನ ಮಗಳು. ಮೂರನೆಯವಳು ಅಚಲದೇವಿ. ಇವಳಿಗೆ ಮಹಾದೇವಿ ಎಂಬ ಮತ್ತೊಂದು ಹೆಸರೂ ಇತ್ತು. ಇವಳು ಆಳುಪರ ವಂಶದವಳು. ನಾಲ್ಕನೆಯವಳು ಚಾಗಲದೇವಿ.

ಬೀರದೇವನ ಹೆಂಡತಿ ಬೀರಲದೇವಿ, ಗಂಗರ ರಾಜನಾದ ರಕ್ಕಸಗಂಗನ ಸಾಕುಮಗಳು. (ರಕ್ಕಸಗಂಗನಿಗೆ ಒಬ್ಬ ತಮ್ಮ ಇದ್ದ. ಅವನ ಹೆಸರು ಅರುಮುಳಿದೇವ. ಇವನ ಹೆಂಡತಿ ಗಾವಬ್ಬರಸಿ. ಇವರಿಗೆ ಮೂವರು ಮಕ್ಕಳು, ಚಟ್ಟಲದೇವಿ, ಕಂಚಲದೇವಿ ಮತ್ತು ರಾಜ ವಿದ್ಯಾಧರ. ಈ ಮಕ್ಕಳು ಚಿಕ್ಕವರಾಗಿದ್ದಾಗ ತಂದೆ-ತಾಯಿ ಸತ್ತುಹೋಗಿರಬೇಕು. ಅನಂತರ ರಕ್ಕಸಗಂಗನೇ ಈ ಮೂವರನ್ನೂ ಸಾಕಿರಬೇಕು. ಎರಡನೆಯವಳಾದ ಕಂಚಲದೇವಿಗೆ ವೀರಲದೇವಿ ಎಂಬ ಹೆಸರೂ ಇತ್ತೆಂದು ತೋರುತ್ತದೆ. ಇವಳೇ ಬೀರದೇವನ ಹಿರಿಯ ರಾಣಿ). ಬೀರದೇವ-ಬೀರಲದೇವಿಯರಿಗೆ ನಾಲ್ಕು ಜನ ಗಂಡು ಮಕ್ಕಳು, ತೈಲಪ, ಗೊಗ್ಗಿಗ, ಒಡ್ಡುಗ ಮತ್ತು ಬಮ್ಮ. ತೈಲನಿಗೆ ಭುಜಬಲಶಾಂತರ ಎಂಬ ಹೆಸರೂ ಗೊಗ್ಗಿಗನಿಗೆ ಗೋವಿಂದರ, ನನ್ನಿಶಾಂತರ ಎಂಬ ಹೆಸರುಗಳೂ ಒಡ್ಡುಗನಿಗೆ ವಿಕ್ರಮಶಾಂತರ, ನನ್ನಿಶಾಂತರ, ಒಡ್ಡಮರಸ ಎಂಬ ಹೆಸರುಗಳೂ ಬಮ್ಮನಿಗೆ ಬ್ರಹ್ಮದೇವ ಎಂಬ ಹೆಸರೂ ಇದ್ದವು.

ಇವರಲ್ಲಿ ತೈಲಪನಿಗೆ ಚಟ್ಟಲದೇವಿಯೊಂದಿಗೆ ವಿವಾಹವಾಗಿತ್ತು. ಇವರಿಗೆ ಪಂಪಾದೇವಿ ಎಂಬ ಮಗಳೂ ಶ್ರೀವಲ್ಲಭ ಎಂಬ ಮಗನೂ ಹುಟ್ಟಿದರು. ಪಂಪಾದೇವಿಗೆ ವಿವಾಹವಾಗಿತ್ತು. (ಪತಿಯ ಹೆಸರು ತಿಳಿಯದು). ಇವಳ ಮಗಳು ಬಾಚಲದೇವಿ.

(ಗೊಗ್ಗಿಗ ಮತ್ತು ಬಮ್ಮನಿಗೆ ವಿವಾಹವಾದಂತಿಲ್ಲ) ಒಡ್ಡುಗನಿಗೆ ವಿವಾಹವಾಗಿದೆ. ಇವನ ಹೆಂಡತಿ ಚಂದಲದೇವಿ. ಇವಳಿಗೆ ಚಾಗಲದೇವಿ ಎಂಬ ಹೆಸರೂ ಇತ್ತು. ಇವಳು ಪಾಂಡ್ಯ ಕುಲದವಳು. ಒಡ್ಡುಗ ಮತ್ತು ಚಂದಲದೇವಿಗೆ ಮೂವರು ಗಂಡುಮಕ್ಕಳು, ತೈಲ, ಗೋವಿಂದ ಮತ್ತು ಬೊಪ್ಪುಗ. ತೈಲನಿಗೆ ತೈಲುಗ, ತೈಲಹ, ತ್ರಿಭುವನಮಲ್ಲ ಹಾಗೂ ಗೋವಿಂದನಿಗೆ ರಾಯಶಾಂತರ ಎಂಬ ಹೆಸರೂ ಇದ್ದುವು. (ಗೋವಿಂದ ಮತ್ತು ಬೊಪ್ಪುಗನಿಗೆ ವಿವಾಹವಾದಂತೆ ಇಲ್ಲ). ತೈಲನಿಗೆ ವಿವಾಹವಾಗಿದೆ. ಅವನ ಪತ್ನಿಯ ಹೆಸರು ಅಕ್ಕಾದೇವಿ. ಇವರಿಗೆ ಮೂವರು ಮಕ್ಕಳು, ಕಾಮದೇವ, ಸಿಂಹ ಮತ್ತು ಅಮ್ಮಣ. ಕಾಮದೇವನಿಗೆ ಪಾಂಡ್ಯಕುಲದ ಬಿಜ್ಜಲದೇವಿ ಪತ್ನಿಯಾದಳು. ಇವರಿಗೆ ಜಗದೇವ, ಸಿಂಗಿದೇವ ಎಂಬ ಗಂಡುಮಕ್ಕಳೂ ಅಳಿಯದೇವಿ ಎಂಬ ಮಗಳೂ ಆದರು.

ಜಗದೇವರಾಯನೇ ಪೊಂಬುರ್ಚನಾಡಿನ ಕೊನೆಯ ರಾಜ. ಇವನು ದೋರಸಮುದ್ರದ ವಿಷ್ಣುವರ್ಧನನ ಮೇಲೆ ಯುದ್ಧ ಮಾಡಿ ಸೋತುಹೋದನು. ಪೊಂಬುರ್ಚದ ನಾಡು ಹೊಯ್ಸಳ ರಾಜ್ಯದಲ್ಲಿ ವಿಲೀನವಾಯಿತು.

ಬೀರಲದೇವಿಯ ವಂಶ : ಇಕ್ಷ್ವಾಕು ವಂಶದಲ್ಲಿ ಧನಂಜಯ ಒಬ್ಬ ರಾಜ. ಇವನ ಹೆಂಡತಿ ಗಾಂಧಾರಿ ದೇವಿ. ಇವರ ಮಗ ಹರಿಶ್ಚಂದ್ರ. ಹರಿಶ್ಚಂದ್ರನ ಹೆಂಡತಿ ರೋಹಿಣೀದೇವಿ. ಇವರಿಗೆ ಇಬ್ಬರು ಗಂಡುಮಕ್ಕಳು, ದಡಿಗ ಮತ್ತು ಮಾಧವ. ದಡಿಗನ ಮಗ ಕಿರಿಯಮಾಧವ. ಇವನ ಮಗ ಹರಿವರ್ಮ. ಹರಿವರ್ಮನ ಮಗ ವಿಷ್ಣುಗೋಪ. ಇವನ ಮಗ ತದಂಗಾಲ ಮಾಧವ. ಇವನಿಗೆ ಇಬ್ಬರು ಗಂಡುಮಕ್ಕಳು. ಅವನೀತ ಮತ್ತು ದುರ್ವಿನೀತ. ದುರ್ವಿನೀತ ಮಹಾಪ್ರತಾಪಿ. 'ವಸುಧೆಗೆ ರಾವಣ' ಎಂದು ಕುಪ್ರಸಿದ್ಧಿಯನ್ನು ಪಡೆದ ಕಾದುವೆಟ್ಟಿ ಎಂಬ ಅರಸನನ್ನು ಇವನು ಕಾಳಗದಲ್ಲಿ ಸೋಲಿಸಿದನು. ದುರ್ವಿನೀತನಿಗೆ ಇಬ್ಬರು ಗಂಡುಮಕ್ಕಳು, ಮುಷ್ಕರ ಮತ್ತು ನೃಪಕಾಮ. ಮುಷ್ಕರನಿಗೆ ಶ್ರೀವಿಕ್ರಮ ಮತ್ತು ಭೂವಿಕ್ರಮ-ಎಂಬ ಇಬ್ಬರು ಗಂಡುಮಕ್ಕಳು. ನೃಪಕಾಮನ ಮೊಮ್ಮಗ ಶ್ರೀಪುರುಷ. ಇವನಿಗೆ ಶ್ರೀವಲ್ಲಭ ಎಂಬ ಹೆಸರೂ ಇತ್ತು. ಶ್ರೀಪುರುಷನಿಗೆ ಇಬ್ಬರು ಗಂಡುಮಕ್ಕಳು, ಶಿವಮಾರ ಮತ್ತು ವಿಜಯಾದಿತ್ಯ. ಶಿವಮಾರನಿಗೆ 'ಸೈಗೊಟ್ಟಿನ್' ಎಂಬ ಬಿರುದೂ ಇತ್ತು. ವಿಜಯಾದಿತ್ಯನ ಮಗ ಎರೆಯಂಗ. ಇವನ ಮಗ ಶ್ರೀ ರಾಜಮಲ್ಲ. ಶ್ರೀ ರಾಜಮಲ್ಲನ ಮಗ ಮರುಳ. ಮರುಳನ ಮಗ ಶ್ರೀ

ಬೂತುಗ. ಇವನಿಗೆ ಎರೆಯಪ್ಪ, ಕಚ್ಚೆಯ ಗಂಗ, ಬೂತುಗ ಪೆರ್ಮಾನಡಿ ಎಂಬ ಮೂವರು ಮಕ್ಕಳು. ಬೂತುಗನ ಹೆಂಡತಿ ರೇವಕ. ಇವರಿಗೆ ಐದು ಜನ ಗಂಡುಮಕ್ಕಳು, ಮರುಳದೇವ, ಮಾರಸಿಂಹ, ಶ್ರೀ ರಾಜವಲ್ಲಭ, ಶ್ರೀ ನೀತಿಮಾರ್ಗ ಮತ್ತು ವಾಸವ ಮಹೀಭುಜ. ಶ್ರೀ ನೀತಿ ಮಾರ್ಗನಿಗೆ ಗೋವಿಂದರ ಎಂಬ ಹೆಸರೂ ಇತ್ತು. ವಾಸವ ಮಹೀಭುಜನ ಹೆಂಡತಿ ಕಂಚಲದೇವಿ. ಇವರ ಮಗ ಗೋವಿಂದರದೇವ. ಇವರ ವಂಶದಲ್ಲಿ ರಕ್ಕಸಗಂಗ ಎಂದು ಪ್ರಸಿದ್ಧನಾದ ವೀರಮಾರ್ತಾಂಡದೇವನು ರಾಜನಾದನು. ಇವನ ತಮ್ಮ ಅರುಮುಳಿದೇವ. ಇವನ ಹೆಂಡತಿ ಗಾವಬ್ಬರಸಿ. ಇವಳು ಕದಂಬ ವಂಶದವಳು. ಅರುಮುಳಿದೇವ ಮತ್ತು ಗಾವಬ್ಬರಸಿಯರಿಗೆ ಮೂವರು ಗಂಡು ಮಕ್ಕಳು, ಚಟ್ಟಲದೇವಿ, ಕಂಚಲದೇವಿ, ರಾಜವಿದ್ಯಾಧರ. (ಬಹುಶಃ ಈ ಮಕ್ಕಳನ್ನು ಬಿಟ್ಟು ತಂದೆ ತಾಯಿ ಸತ್ತುಹೋಗಿರಬೇಕು). (ಆದ್ದರಿಂದ) ರಕ್ಕಸಗಂಗ ಇವರನ್ನು ತನ್ನ ಅರಮನೆಗೆ ತಂದು ಸಾಕಿ ಬೆಳೆಸಿದನು. ಚಟ್ಟಲದೇವಿಯನ್ನು ತೊಂಡೆನಾಡು ನಾಲ್ವತ್ತೆಣ್ಬಾಸಿರಕ್ಕೆ ರಾಜನೂ ಕಂಚಿಯನಾಥನೂ ಆದ ಕಾದುವೆಟ್ಟಿ ಎಂಬುವನಿಗೆ ಕೊಟ್ಟು ಮದುವೆಯಾಗಿತ್ತು. ಎರಡನೆಯವಳಾದ ಕಂಚಲದೇವಿಯನ್ನು ಪೊಂಬುರ್ಚದ ಬೀರದೇವನಿಗೆ ಕೊಟ್ಟು ವಿವಾಹವಾಗಿತ್ತು. ಇವಳಿಗೆ ವೀರಲದೇವಿ ಎಂಬ ಹೆಸರೂ ಇತ್ತು.

ಹೊಂಬುರ್ಚದ ರಾಜ್ಯಸ್ಥಾಪಕ ರಾಳ: ರಾಳ ಎಂಬುವನು ಉತ್ತರದ ಮಥುರೆಯಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಅವನ ತಮ್ಮ ನರಮಾಂಸ ಭಕ್ಷಕನಾಗಿ ನಗರದ ಮನುಷ್ಯರನ್ನೆಲ್ಲ ತಿನ್ನುತ್ತಿರುವುದನ್ನು ರಾಳ ನೋಡಿದನು. ಅವನಿಗೆ ಜಿಗುಪ್ಸೆ ಉಂಟಾಯಿತು. ರಾಳನು ರಾಜ್ಯತ್ಯಾಗಮಾಡಿ ಕುರುಕ್ಷೇತ್ರಕ್ಕೆ ಬಂದನು. ಅಲ್ಲಿ ಅವನನ್ನು ಎದುರಿಸಿದವರೊಡನೆ ಯುದ್ಧ ಮಾಡಿ ಗೆದ್ದನು. ಆಗ ನಾರಾಯಣನು ಮೆಚ್ಚಿ, ಏಕಶಂಖವನ್ನೂ ಹನುಮ ಧ್ವಜವನ್ನೂ ಕೊಟ್ಟನು. ಅನಂತರ ಸಿಂಹರಥ ಎಂಬ ರಾಕ್ಷಸನನ್ನು ಕೊಂದನು. ಇವನ ಶೌರ್ಯಕ್ಕೆ ಮೆಚ್ಚಿದ ಜಕ್ಕಿಯಬ್ಬೆ ಸಿಂಹಲಾಂಛನವನ್ನು ಕೊಟ್ಟಳು. ಅನಂತರ ರಾಳನು ತೆಂಕದಿಕ್ಕಿಗೆ ಪ್ರಯಾಣ ಮಾಡಿದನು. ಅಂಧಾಸುರ ಎಂಬ ರಾಕ್ಷಸನನ್ನು ಕೊಂದನು. ಅಲ್ಲಿಂದ ಕನಕಪುರಕ್ಕೆ ಬಂದು ಕನಕಾಸುರನನ್ನು ಕೊಂದನು. ಅನಂತರ ಕುಂದದ ಕೋಟೆಯಲ್ಲಿದ್ದ ಕರ ಮತ್ತು ಕರದೂಷಣ ಎಂಬ ರಾಕ್ಷಸರನ್ನು ಓಡಿಸಿದನು. ಇದನ್ನು ಕಂಡ ನೊಕ್ಕಿಯಬ್ಬೆ 'ಇದು ರಾಜಸ್ಥಾನ (ರಾಜಧಾನಿ)' ಎಂದು ಹೇಳಿ ಪೊಂಬುರ್ಚದಲ್ಲಿ ನೆಲೆಸಿದಳು. ಇದನ್ನು ಕಂಡ ರಾಳ "ಸಾ-ಅನ್ತಿನೋಳ್" ಎಂದು ಹರ್ಷೋದ್ಗಾರ ಮಾಡಿದನು. ಅಂದಿನಿಂದ ಈ ಅರಸರಿಗೆ 'ಸಾಂತರು' ಎಂಬ ಹೆಸರು ಬಂದಿತು.

ಪದ್ಮಾವತಿದೇವಿಯು ಉತ್ತರದ ಮಥುರೆಯಿಂದ ರಾಳನ ಜೊತೆಯಲ್ಲಿಯೇ ಬಂದು ಪೊಂಬುರ್ಚದಲ್ಲಿ ನೊಕ್ಕಿಯ ಮರದಲ್ಲಿ ನೆಲೆಸಿದಳು. ಅಂದಿನಿಂದ ಪದ್ಮಾವತಿಗೆ ನೊಕ್ಕಿಯಬ್ಬೆ ಎಂಬ ಹೆಸರು ಬಂದಿತು. ಇದನ್ನು 'ಸೆಂಡ' ಎನ್ನುವವನು ಚೆನ್ನಾಗಿ ತಿಳಿದಿದ್ದಾನೆ.

ಪೊಂಬುರ್ಚನಾಡಿನ ಅರಸು ಪರಂಪರೆ

ಉಗ್ರವಂಶ

|

ರಾಹ

|

ಅನೇಕ ವರ್ಷಗಳನಂತರ ಇದೇ ವಂಶದ

|

ಸಹಕಾರ

ಶ್ರಿಯಾದೇವಿ (ಪತ್ನಿ)

|

ಜಿನದತ್ತ (ದಕ್ಷಿಣಕ್ಕೆ ಬಂದು ಪೊಂಬುರ್ಚದ ರಾಜನಾದ)

ಅನೇಕ ವರ್ಷಗಳ ನಂತರ ಇದೇ ವಂಶದ

|

ಶ್ರೀಕೇಶಿ — ಜಯಕೇಶಿ

ಶ್ರೀಕೇಶಿ

ಮಹಾದೇವಿ (ಪತ್ನಿ)

|

ರಣಕೇಶಿ

ಇವರ ನಂತರ ಕೆಲವರು ರಾಜ್ಯವಾಳಿದನು. ಅನಂತರ ಇದೇ ವಂಶದ

|

ಹಿರಣ್ಯಗರ್ಭ

ಲಕ್ಷ್ಮೀದೇವಿ (ಪತ್ನಿ) (ಬನವಾಸಿಯ ಅರಸು ಕಾಮದೇವನ ಮಗಳು)

|

ಚಾಗಿಶಾಂತರ

ಎಂಜಲದೇವಿ (ಪತ್ನಿ) (ಆಳುಪರ ಅರಸ ರಣಂಜಯನ ಮಗಳು)

|

ವೀರಶಾಂತರ

ಚಾಕಲದೇವಿ (ಪತ್ನಿ) (ಅಣೆಯೂರ ಶಾಂತಿವರ್ಮನ ಮಗಳು)

|

ಕನ್ನರಶಾಂತರ — ಕಾಮದೇವ

ಕಾಮದೇವ — ಚಂದಲದೇವಿ (ಪತ್ನಿ) (ಬೀರಬಯಲ್‌ನಾಥನ ಮಗಳು)

|

ತ್ಯಾಗಿಶಾಂತರ — ನಾಗಲದೇವಿ (ಪತ್ನಿ) (ಕದಂಬರ ಹರಿವರ್ಮನ ಮಗಳು)

|

ನನ್ನಿಶಾಂತರ — ಸಿರಿಯಾದೇವಿ (ಪತ್ನಿ) (ಪಲಸಿಗೆನಾಡಿನ ಅರಸ ಅರಿಕೇಸರಿಯ ಮಗಳು)

|

ರಾಯಶಾಂತರ — ಅಕ್ಕಾದೇವಿ (ಪತ್ನಿ)

|

ಚಿಕ್ಕವೀರಶಾಂತರ — ಬಿಜ್ಜಲದೇವಿ (ಪತ್ನಿ)

|

ಅಣ್ಣಮದೇವ — ಹೋಚಲದೇವಿ (ಪತ್ನಿ)

|

ಬೀರಬ್ಬರಸಿ (ಇವಳು ಆಳುಪರ ಬಂಕಿಯಾಳ್ವನ ಪತ್ನಿಯಾದಳು) — ತೈಲಪದೇವ

ತೈಲಪ ದೇವ

೧. ಮಾಂಕಬ್ಬರಸಿ–(ಹಿರಿಯ ಪತ್ನಿ) (ಆಳುಪರ ಬಂಕಿಯಾಳ್ವನ ತಂಗಿ)
೨. ಕೆಳೆಯಬ್ಬರಸಿ (ಕಿರಿಯ ಪತ್ನಿ) (ಗಂಗರ ಪಾಲಯದೇವನ ಮಗಳು)

- ೧ ಬೀರದೇವ [ವೀರಶಾಂತರ ಎಂಬ ಹೆಸರೂ ಇತ್ತು]
  - ೧ ಬೀರಲದೇವಿ [ಪಿರಿಯರಾಣಿ ಗಂಗವಂಶದ ರಕ್ಕಸಗಂಗನ ಸಾಕುಮಗಳು]
  - + ೨ ಬಿಜ್ಜಲದೇವಿ [ಎರಡನೆಯ ಹೆಂಡತಿ, ನೊಳಂಬರಾಜ ನರಸಿಂಗನ ಮಗಳು]
  - + ೩ ಆಚಲದೇವಿ [ಮೂರನೆಯ ಹೆಂಡತಿ ಆಳುಪರ ವಂಶದವಳು]
  - + ೪ ಚಾಗಲದೇವಿ [ನಾಲ್ಕನೆಯ ಹೆಂಡತಿ]
- ೨ ಸಿಂಗಿದೇವ
- ೩ ಬ್ರಹ್ಮದೇವ

ಬೀರಲದೇವಿ ಮಕ್ಕಳು:

- ೧ ತೈಲ [ಭುಜಬಲಶಾಂತರ ಎಂಬ ಹೆಸರೂ ಇತ್ತು] + ಚಟ್ಟಲದೇವಿ (ಪತ್ನಿ)
  - ಪಂಪಾದೇವಿ
    - ಚಂಚಲದೇವಿ
  - ಶ್ರೀವಲ್ಲಭ
- ೨ ಗೊಗ್ಗಿಗ [ಗೋವಿಂದದೇವ ನನ್ನಿಶಾಂತರ ಎಂಬ ಹೆಸರೂ ಇದ್ದವು]
- ೩ ಒಡ್ಡುಗ [ವಿಕ್ರಮಶಾಂತರ ನನ್ನಿಶಾಂತರ ಒಡ್ಡಮರಸ ಎಂಬ ಹೆಸರೂ ಇದ್ದವು] + ಚಂದಲದೇವಿ (ಪಾಂಡ್ಯ ಕುಲದವಳು)
  - ೧ ತೈಲ [ತ್ರಿಭುವನಮಲ್ಲಶಾಂತರ ರಾಯ ತೈಲಹ ಎಂಬ ಹೆಸರೂ ಇದ್ದವು] + ಅಕ್ಕಾದೇವಿ (ಪತ್ನಿ)
    - ೧ ಕಾಮದೇವ + ಬಿಜ್ಜಲದೇವಿ (ಪತ್ನಿ) (ಪಾಂಡ್ಯ ಕುಲದವಳು)
      - ೧ ಜಗದೇವ
      - ೨ ಸಿಂಗಿದೇವ
      - ೩ ಅಳಿಯದೇವಿ
    - ೨ ಸಿಂಹ
    - ಅಮ್ಮಣ
  - ೨ ಗೋವಿಂದ [ರಾಯಶಾಂತರ ಎಂಬ ಹೆಸರೂ ಇತ್ತು]
  - ೩ ಬೊಪ್ಪುಗ
- ೪ ಬಮ್ಮ [ಬ್ರಹ್ಮ ಎಂಬ ಹೆಸರೂ ಇತ್ತು]

ಜಗದೇವನಿಗೆ ಜಗದೇಕದೇವರಾಯ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಇವನೇ ಪೊಂಬುರ್ಚ ನಾಡಿನ ಅರಸೊತ್ತಿಗೆಯ ಕೊನೆಯ ರಾಜ. ಇವನು ದ್ವಾರಸಮುದ್ರದ ವಿಷ್ಣುವರ್ಧನನ ಮೇಲೆ ಯುದ್ಧ ಮಾಡಿ ಸೋತು ಹೋದ. ಈ ರಾಜ್ಯ ಹೊಯ್ಸಳ ರಾಜ್ಯದಲ್ಲಿ ವಿಲೀನವಾಗುತ್ತದೆ.

ಬೀರಲದೇವಿಯ ವಂಶ

- ಇಕ್ಷ್ವಾಕು ವಂಶ
  - ಧನಂಜಯ
    ಗಾಂಧಾರಿದೇವಿ (ಪತ್ನಿ)
    - ಹರಿಶ್ಚಂದ್ರ
      ರೋಹಿಣೀದೇವಿ (ಪತ್ನಿ)
      - ದಡಿಗ
        - ಕಿರಿಯ ಮಾಧವ
          - ಹರಿವರ್ಮ
            - ವಿಷ್ಣುಗೋಪ
              - ತದಂಗಾಲ ಮಾಧವ
                - ಅವಿನೀತ
                - ದುರ್ವಿನೀತ
                  - ಮುಷ್ಕರ
                    - ಶ್ರೀವಿಕ್ರಮ
                    - ಭೂವಿಕ್ರಮ
                  - ನೃಪಕಾಮ
                    - ಶಿವಮಾರ [ಇವನಿಗೆ ಸೈಗೊಟ್ಟನ್ ಎಂಬ ಬಿರುದು ಇತ್ತು]
                    - ಶ್ರೀಪುರುಷ (ನೃಪಕಾಮನ ಮೊಮ್ಮಗ)
                      - ವಿಜಯಾದಿತ್ಯ
                        - ಎರೆಯಂಗ
                          - ಶ್ರೀರಾಜಮಲ್ಲ
                            - ಮರುಳ
                              - ಶ್ರೀಬೂತುಗ
                                - ಎರೆಯಪ್ಪ
                                - ಕಚ್ಚೆಯಗಂಗ
                                - ಬೂತುಗ
                                  ಪೆರ್ಮಾನಡಿ
                                  + ರೇವಕ (ಪತ್ನಿ)
                                  - ೧ ಮರುಳದೇವ
                                  - ೨ ಮಾರಸಿಂಹ
                                  - ೩ ಶ್ರೀರಾಜವಲ್ಲಭ
                                  - ೪ ಶ್ರೀನೀತಿಮಾರ್ಗ
                                  - ೫ ವಾಸವಮಹೀಭುಜ
      - ಮಾಧವ

ವಾಸವ ಮಹೀಭುಜ

ಕಂಚಲದೇವಿ (ಪತ್ನಿ)

- ಗೋವಿಂದರದೇವ
  - ಇವನ ನಂತರ ಈ ವಂಶದ ಕೆಲವರು ರಾಜ್ಯವಾಳಿದರು
    - ವೀರಮಾರ್ತಾಂಡದೇವ [ರಕ್ಕಸಗಂಗ ಎಂಬ ಹೆಸರೂ ಇತ್ತು]
    - ಅರುಮುಳಿದೇವ + ಗಾವಬ್ಬರಸಿ (ಪತ್ನಿ) (ಕದಂಬ ವಂಶದವಳು)
      - ೧ ಚಟ್ಟಲದೇವಿ [ಇವಳು ಕಂಚಿಯ ಅರಸ ಕಾದುವೆಟ್ಟಿಯ ಪತ್ನಿಯಾದಳು]
      - ೨ ಕಂಚಲದೇವಿ [ಇವಳು ಪೊಂಬುರ್ಚ ನಾಡಿನ ಬೀರದೇವನ ಪತ್ನಿಯಾದಳು. ಇವಳಿಗೆ ಬೀರಲದೇವಿ, ವೀರದೇವಿ ಎಂಬ ಹೆಸರೂ ಇದ್ದವು]
      - ೩ ರಾಜವಿದ್ಯಾಧರ

ಆಧಾರ

೧. ಎಪಿಗ್ರಾಫಿಯ ಕರ್ನಾಟಿಕಾ

Inscriptions of Shimoga District—Part II

ಶಾಸನ ಸಂಖ್ಯೆ : 1) ನಗರ ತಾಲ್ಲೂಕು - Nr. 35, 36, 40, 47, 59

2) ತೀರ್ಥಹಳ್ಳಿ ತಾಲ್ಲೂಕು-Ti. 192

3) ಸಾಗರ ತಾಲ್ಲೂಕು–Sa. 80

4) ಇದೇ ಗ್ರಂಥದ ಪೀಠಿಕೆ

೨. ಕರ್ಣಾಟಕ ಪರಂಪರೆ, ಭಾಗ ೧ ಮತ್ತು ೨

೩. ಕರ್ನಾಟಕ ರಾಜ್ಯ ಗೆಜೆಟಿಯರ್-ಶಿವಮೊಗ್ಗ ಜಿಲ್ಲೆ

ಡಾ॥ ಬಿ. ವಸಂತ ಶೆಟ್ಟಿ

ದಕ್ಷಿಣಕನ್ನಡ ಜಿಲ್ಲೆಯಲ್ಲಿ ನೂತನ ಶಿಲಾಯುಗ

ಕರ್ನಾಟಕದ ಕರಾವಳಿ ಜಿಲ್ಲೆಯಾದ ದಕ್ಷಿಣಕನ್ನಡದಲ್ಲಿ ಪುರಾತತ್ವ ಸಂಶೋಧನೆ ಇತ್ತೀಚಿನವರೆಗೆ ನಡೆದಿರಲೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಸುಮಾರು ಒಂದೂವರೆ ದಶಕದ ಹಿಂದೆ ಜಿಲ್ಲೆಯ ಇತಿಹಾಸದ ಪ್ರಾರಂಭದ ಬಗ್ಗೆ ಯೋಚಿಸಿದಾಗಲೆಲ್ಲ, ಸ್ಪಷ್ಟ ಪುರಾತತ್ವ ಆಧಾರಗಳ ಕೊರತೆಯಿಂದ, ಕೂಡಲೇ ನೆನಪಿಗೆ ಬರುತ್ತಿದ್ದುದು ಪರಶುರಾಮ ಅರಬ್ಬೀ ಸಮುದ್ರಕ್ಕೆ ಕೊಡಲಿಯನ್ನೆಸೆಯುವ ಮೂಲಕ ಸಮುದ್ರದ ಈ ಭಾಗವನ್ನು ನೆಲವನ್ನಾಗಿ ಪರಿವರ್ತಿಸಿದನೆಂಬ ಕತೆ. ಇದು ಈ ಕರಾವಳಿ ಪ್ರದೇಶದಲ್ಲಿ ಕಾಡನ್ನು ತನ್ನ ಕಬ್ಬಿಣದ ಕೊಡಲಿಯಿಂದ ಕಡಿದು ಆದಿಮಾನವ ಇಲ್ಲಿ ನೆಲೆಸಿದ್ದ ನೆನಪಿನಿಂದ ಹುಟ್ಟಿದ್ದ ಕತೆಯಿರಬಹುದೆಂದು ಸಂಶೋಧಕರು ಊಹಿಸಿದ್ದಿದೆ.[1]

೧೯೭೦ ರ ನಂತರ ದಕ್ಷಿಣಕನ್ನಡದಲ್ಲಿ ಕಬ್ಬಿಣಯುಗದ ಸಂಸ್ಕೃತಿಯ ಇರುವಿಕೆಯನ್ನು ಸ್ಪಷ್ಟಪಡಿಸುವ ಹಲವು ಸಂಶೋಧನೆಗಳನ್ನು ದಿವಂಗತ ಡಾ॥ ಪಿ. ಗುರುರಾಜ ಭಟ್ ಮತ್ತು ಡಾ॥ ಅ. ಸುಂದರ ಮಾಡಿದರು.[2] ಇವರು ಬೃಹತ್‌ಶಿಲಾಕೋಣೆ ಗೋರಿಗಳು, ಮೃತ್ಪಾತ್ರೆಯ ಸಮಾಧಿಗಳು ಹಾಗೂ ಲಾರಟಲೈಟ್ ಕಲ್ಲಿನಲ್ಲಿ ಕೊರೆದ ಗುಹಾಸಮಾಧಿಗಳನ್ನು ಈ ಜಿಲ್ಲೆಯ ಹಲವು ಕಡೆ ಶೋಧಿಸಿದರು.

ನಾನು ಇತ್ತೀಚಿಗೆ ಬೃಹತ್‌ಶಿಲಾಯುಗದ ಹಲವು ಗೋರಿಗಳನ್ನು ಕಂಡುಹಿಡಿದೆ. ಅವುಗಳಲ್ಲಿ ಹೆಚ್ಚಿನವುಗಳು ಮೃದುವಾದ ಕೆಂಪುಕಲ್ಲಿನಲ್ಲಿ ಬೋರಲಾಗಿರಿಸಿದ ಅರ್ಧಗೋಲಾಕಾರದಲ್ಲಿ ಕೊರೆದವುಗಳು. ಆದರೆ ಕಕ್ಕುಂಜೆ ಎಂಬಲ್ಲಿ ನಾನು ಶೋಧಿಸಿದ ಗೋರಿಗಳು ಪೋರ್ಟ್‌ಹೋಲ್ ಇರುವ ಶಿಲಾಕೋಣೆಗೋರಿಗಳು. ಈ ತನ್ಮಧ್ಯೆ ಡಾ॥ ಪಿ. ರಾಜೇಂದ್ರನ್ ೧೯೮೩ರಲ್ಲಿ ನೇತ್ರಾವತಿ ನದಿ ದಡದ ಉಪ್ಪಿನಂಗಡಿ ಹಾಗೂ ಮಾಣಿಯಲ್ಲಿ (ಜಿಲ್ಲೆಯ ತೆಂಕುಭಾಗ) ಮಧ್ಯ ಮತ್ತು ಅಂತ್ಯ ಶಿಲಾಯುಗದ ಸೂಕ್ಷ್ಮ ಶಿಲಾಯುಧಗಳನ್ನು ಕಂಡು ಹಿಡಿದಿದ್ದರೂ[3] ನೂತನ ಶಿಲಾಯುಗದ ಯಾವುದೇ ಕುರುಹು ಈ ಜಿಲ್ಲೆಯಲ್ಲಿ ಇದುವರೆಗೆ ದೊರೆತಿರಲಿಲ್ಲ.

ಇತ್ತೀಚೆಗೆ ಉಡುಪಿ ತಾಲ್ಲೂಕಿನ ಬಾರಕೂರಿಗೆ ಸಮೀಪ ಭಂಡಿಮಠದ ಹತ್ತಿರ ಗುಡ್ಡದ ಇಳಿಜಾರಿನ ಬೆಟ್ಟುಗದ್ದೆಯೊಂದರಲ್ಲಿ ಏರಿ ಮಾಡುತ್ತಿದ್ದಾಗ ದೊರೆತ

1. ಗ.ವಿ. ರಮೇಶ : ತುಳುನಾಡಿನ ಇತಿಹಾಸ, ಉಡುಪಿ, ೧೯೬೯, ಪು. ೧೭
2. P. Gururaj Bhat : Studies in Tuluva History and Culture, Kallianpur, 1975, pp. VI–X ; A. Sundara : *Megaliths in the Western Coast and Ghat Regions of Karnataka*, Journal of Karnatak University, Vol. X
3. P. Rajendran : 'Megalithic Industries from South Kanara, Karnataka', Bulletin of Deccan College Research Institute, Pune, 1983

ಕಲ್ಲೊಂದರ ಆಕಾರದ ಬಗ್ಗೆ ಕುತೂಹಲ ತಾಳಿ ಶ್ರೀ ರಮೇಶ ಆಚಾರಿ ಎಂಬುವರು ವಿಷಯವನ್ನು ನನ್ನ ಗಮನಕ್ಕೆ ತಂದರು. ಈ ಕಲ್ಲನ್ನು ಪರಿಶೀಲಿಸಿದಾಗ ಇದು ನೂತನ ಶಿಲಾಯುಗದ ಕೊಡಲಿ ಎಂಬುದು ಸ್ಪಷ್ಟ ವಾಯಿತು.

ಈ ಕಲ್ಲಿನ ಕೊಡಲಿ ೧೨.೩ ಸೆಂಟಿಮೀಟರ್ ಉದ್ದ ಮತ್ತು ೬.೪ ಸೆಂಟಿಮೀಟರ್ ಅಗಲ(ಕೆಳಭಾಗ)ವಿದೆ. ಕೊಡಲಿಯ ಮೇಲ್ಭಾಗ ಸ್ವಲ್ಪ ದೊರಗಾಗಿದ್ದು ಕೆಳಭಾಗ ಇದಕ್ಕಿಂತ ಹೆಚ್ಚು ನಯವಾಗಿದೆ. ದೊರಗುಕಲ್ಲನ್ನು ಉಜ್ಜಿ ಚಪ್ಪಟೆ ಹಾಗೂ ಹರಿತವಾಗಿ ಮಾಡಲಾಗಿದೆ. ಪ್ರಾಯಶಃ ಉಪಯೋಗಿಸಿದ್ದರಿಂದ ಹರಿತವಾಗಿದ್ದ ಭಾಗ ಅಲ್ಲಲ್ಲಿ ಎದ್ದುಹೋಗಿದೆ. ಇಲ್ಲಿನ ಪರಿಸರವೂ ನೂತನ ಶಿಲಾಯುಗದ ಜನಜೀವನಕ್ಕೆ ಅನುಕೂಲವಾಗಿತ್ತೆಂಬುದು ಈ ಸ್ಥಳದ ಸರ್ವೇಕ್ಷಣೆಯಿಂದ ತಿಳಿಯಬಹುದಾಗಿದೆ. ಕಲ್ಲಿನ ಆಯುಧ ತಯಾರಿಗೆ ಅಗತ್ಯವಿರುವ ಕಚ್ಚಾವಸ್ತು ಇಲ್ಲಿಯೇ ಇದೆ. ಅಲ್ಲಲ್ಲಿ ಗುಡ್ಡ ಹಾಗೂ ಎತ್ತರ ಪ್ರದೇಶ ದಲ್ಲಿ ಅನೇಕ ಬಂಡೆ ಕಲ್ಲುಗಳು, ಸೀತಾನದಿಗೆ ತಾಗಿ ಕೊಂಡಿರುವ ಅಗಲ ಕಿರಿದಾದ ಬಯಲು, ಇತ್ಯಾದಿ ನೂತನ ಶಿಲಾಯುಗದ ಜನರು ತಮ್ಮ ಜೀವನದ ಅಗತ್ಯ ಗಳನ್ನು ಪೂರೈಸಿಕೊಳ್ಳಲು ಉಪಯುಕ್ತವಾಗಿದ್ದವು.

ಇಲ್ಲಿಂದ ಅನತಿ ದೂರದಲ್ಲೇ ಸೀತಾ ನದಿಯ ತೆಂಕು ದಂಡೆಯ ಮೇಲೆ ಬೃಹತ್ ಶಿಲಾಯುಗದ ಗೋರಿ ಯೊಂದು ಕಂಡುಬಂದಿರುವುದು (ಬೋಳುಗುಡ್ಡೆ) ಹಾಗೂ ಇನ್ನೂ ಒಂದು ಕಿಲೋಮೀಟರ್‌ನಷ್ಟು ಅಂತರದೊಳಗೇ ಇನ್ನೆರಡು ಬೃಹತ್ ಶಿಲಾಯುಗದ ಗೋರಿಗಳು (ಕೆಳ ಕುಂಜಾಲು ಮತ್ತು ಬ್ರಹ್ಮಾವರ) ನನ್ನ ಸಂಶೋಧನಾ ವೇಳೆಯಲ್ಲಿ ದೊರೆತಿರುವುದು, ಈ ಪ್ರದೇಶ ಬೃಹತ್ ಶಿಲಾಯುಗದ ಸಂಸ್ಕೃತಿಯ ಕೇಂದ್ರವಾಗಿತ್ತೆಂಬುದನ್ನು ದೃಢ ಪಡಿಸುತ್ತವೆ. ಇತಿಹಾಸ ಕಾಲದಲ್ಲಂತೂ ಭಂಡಿ ಮಠವು ಪ್ರಸಿದ್ಧ ಐತಿಹಾಸಿಕ ಕೇಂದ್ರವಾಗಿದ್ದ ಬಾರಕೂರಿನ ಒಂದು ವಿಸ್ತರಣೆ(extension)ಯಾಗಿ ಕಂಡುಬರು ತ್ತದೆ. ಈಗ ಇಲ್ಲಿ ನೂತನ ಶಿಲಾಯುಗದ ಕಲ್ಲಿನ ಕೊಡಲಿಯ ಶೋಧನೆ, ಇನ್ನೂ ಹಿಂದೆ ನೂತನ ಶಿಲಾ ಯುಗದ ಸಮಯಕ್ಕೇ (ಕ್ರಿ. ಪೂ. ಸುಮಾರು ೨೫೦೦–೧೦೦೦) ಇಲ್ಲಿ ಜನವಸತಿ ಇತ್ತೆಂಬುದನ್ನು ಸ್ಪಷ್ಟಪಡಿಸಿದೆ. ಇಲ್ಲೀಗ ಸಿಕ್ಕಿರುವುದು ಒಂದು ಕೊಡಲಿಯಾದರೂ ಈ ಪರಿಸರ ಹಾಗೂ ಇಲ್ಲಿ ದೊರೆಯುವ ಕಚ್ಚಾವಸ್ತು ಇಲ್ಲಿಯೇ ಈ ಆಯುಧಗಳ ತಯಾರಿ ನಡೆಯುತ್ತಿತ್ತೆಂಬು ದನ್ನು ಸೂಚಿಸುತ್ತವೆ.[4] ಈ ಪ್ರದೇಶದಲ್ಲಿ ಹೆಚ್ಚಿನ ಸಂಶೋಧನೆಯಿಂದ ದೊಡ್ಡ ಪ್ರಮಾಣದಲ್ಲಿ ಇಂತಹ ಆಯುಧಗಳು ಇತ್ಯಾದಿ ದೊರೆಯಬೇಕಷ್ಟೆ. ಅಂತೂ ಇನ್ನು ಕಬ್ಬಿಣಯುಗದ ಜನ ತಮ್ಮ ಕೊಡಲಿಯ ಉಪ ಯೋಗದಿಂದ ಕಾಡನ್ನು ಕಡಿದು ಇಲ್ಲಿ ಪ್ರಪ್ರಥಮವಾಗಿ ನೆಲೆಸಿದರೆಂಬ ಊಹೆಗೆ ಎಡೆಯಿಲ್ಲ.

ಕರ್ನಾಟಕದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ವಿಸ್ತರಣೆ ಪಶ್ಚಿಮದಲ್ಲಿ ಉತ್ತರಕನ್ನಡ ಜಿಲ್ಲೆ ಹಾಗೂ ಮಲೆನಾಡಿನ ಶಿವಮೊಗ್ಗ ಜಿಲ್ಲೆಯವರೆಗೆ ಇತ್ತೆಂಬುದನ್ನು ಈಗಾಗಲೇ ಡಾ॥ ಸುಂದರ ಮತ್ತು ಡಾ॥ ಎ. ವಿ. ನರಸಿಂಹ ಮೂರ್ತಿಯವರು ಪ್ರಕಟಿಸಿದ್ದು, ಈಗ ಈ ನೂತನ ಶಿಲಾ ಯುಗ ಸಂಸ್ಕೃತಿ ದಕ್ಷಿಣಕನ್ನಡದಲ್ಲೂ ಪಸರಿಸಿತ್ತೆಂಬುದು ತಿಳಿದಂತಾಗಿದೆ.

---

4. H. D. Sankalia : Indian Archaeology Today, p. 78

5. ಈ ಲೇಖನ ತಯಾರಿಗೆ ಡಾ॥ ಎ. ವಿ. ನರಸಿಂಹಮೂರ್ತಿಯವರು ನೀಡಿದ ಸಲಹೆ ಸೂಚನೆಗಳಿಗೆ ಈ ಲೇಖಕ ಋಣಿ.

ಡಾ॥ ಎ. ವಿ. ನರಸಿಂಹಮೂರ್ತಿ

'ಮಾನೌಮಿ ಚೌಪದ'ದಲ್ಲಿ ಉಲ್ಲೇಖಿತವಾಗಿರುವ ನಾಣ್ಯಗಳು

ನಾಣ್ಯಶಾಸ್ತ್ರವು ತನ್ನದೇ ಆದ ಆಕರ ಮತ್ತು ಅಧ್ಯಯನ ವಿಧಾನಗಳನ್ನು ಹೊಂದಿದೆಯಾದರೂ ಶಾಸನಗಳು ಮತ್ತು ಸಾಹಿತ್ಯಿಕ ಗ್ರಂಥಗಳಿಂದ ಆ ಶಾಸ್ತ್ರಕ್ಕೆ ಉಪಯೋಗವಾಗುವ ಹತ್ತಾರು ಅಂಶಗಳು ಇತ್ತೀಚೆಗೆ ಬೆಳಕಿಗೆ ಬರುತ್ತಿವೆ. ಈ ರೀತಿಯ ಅಧ್ಯಯನವು ನಮ್ಮ ದೇಶಕ್ಕೆ ಹೊಸದಾದರೂ ಸಮಾಧಾನದ ಸಂಗತಿಯೆಂದರೆ, ಕೆಲವು ವಿದ್ವಾಂಸರು ಈ ವಿಷಯದ ಕಡೆಗೆ ಗಮನವನ್ನು ಹರಿಸಿರುವುದು. ಶಾಸನಶಾಸ್ತ್ರವು ನಾಣ್ಯಶಾಸ್ತ್ರಕ್ಕೆ ಯಾವ ರೀತಿ ಕೊಡುಗೆಯನ್ನು ನೀಡಬಲ್ಲದು ಎಂಬುದನ್ನು ಇದೇ ಲೇಖಕರು ಬೇರೆಡೆ ತೋರಿಸಿದ್ದಾರೆ.[1] ಅದೇ ರೀತಿಯಲ್ಲಿ, ಕರ್ನಾಟಕ ನಾಣ್ಯಶಾಸ್ತ್ರ ಅಧ್ಯಯನಕ್ಕೆ ಕನ್ನಡ ಸಾಹಿತ್ಯ ಕೃತಿಗಳು ಉಪಯೋಗವಾಗಬಲ್ಲವು ಎಂಬುದನ್ನು ತೋರಿಸುವುದೇ ಈ ಲೇಖನದ ಮುಖ್ಯ ಉದ್ದೇಶ. ಅದಕ್ಕಾಗಿ 'ಮಾನೌಮಿ ಚೌಪದ' ಎಂಬ ಗ್ರಂಥವನ್ನು ಆರಿಸಿಕೊಳ್ಳಲಾಗಿದೆ.[2]

'ಮಾನೌಮಿ ಚೌಪದ' ಅಥವಾ 'ಮಹಾನವಮಿ ಚತುರ್ಪಾದ'ವು ಸುಮಾರು ೧೭೩೦ರಲ್ಲಿ ನಂಜುಂಡಯ್ಯನಿಂದ ರಚಿತವಾದ ಕನ್ನಡ ಕೃತಿ.[3] ಈ ಕವಿಯು ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿದ್ದವನು. ಮೈಸೂರು ಅರಮನೆಯ ದಳವಾಯಿ ಮತ್ತು ಸರ್ವಾಧಿಕಾರಿಯಾಗಿದ್ದ ಕಳಲೆ ವೀರಪ್ಪಾಜಿ ಮತ್ತು ಅವನ ಮಗ ದೇವರಾಜನನ್ನೂ ಈ ಕವಿ ಹೆಸರಿಸುತ್ತಾನೆ. ಮಹಾನವಮಿಯ ದಿನ ಹಾಡುವ ಸಲುವಾಗಿ ಬರೆಯಲಾದ ಈ ಪದಗಳು ಬಹಳ ಸರಳವಾಗಿವೆ. ಅರಮನೆಯ ಅನೇಕ ಅಧಿಕಾರಿಗಳನ್ನು ಹೆಸರಿಸುವಾಗ ನಂಜುಂಡಯ್ಯನು ಈ ಗ್ರಂಥದಲ್ಲಿ ಅರಮನೆಯ ಟಂಕಾಧಿಕಾರಿಯಾಗಿದ್ದ ಚಿನವಯ್ಯನನ್ನು ಉಲ್ಲೇಖಿಸಿ, ಅವನಿಗೆ ಟಂಕಶಾಲೆಗಳ ಬಗೆಗೆ ಇದ್ದ ಜ್ಞಾನವನ್ನು ಹೊಗಳುತ್ತಾನೆ. ಆ ಸಂದರ್ಭದಲ್ಲಿ ಅನೇಕ ನಾಣ್ಯಗಳನ್ನೂ ಇವನು ಹೆಸರಿಸುತ್ತಾನೆ.

ಶಿವರಾಯ ವರಾಹ[4] : ಇದು ಕರ್ನಾಟಕದಲ್ಲಿ ಬಳಕೆಯಲ್ಲಿದ್ದ ಗರಿಷ್ಠ ನಾಣ್ಯ. ವಿಜಯನಗರದ ದೊರೆ ಸದಾಶಿವರಾಯನು ಶಿವ ಮತ್ತು ಪಾರ್ವತಿಯರ ಚಿತ್ರಗಳಿದ್ದ ಚಿನ್ನದ ವರಾಹ ನಾಣ್ಯಗಳನ್ನು ಅಚ್ಚುಹಾಕಿಸಿದನು.

---

1. ನೊಬುರು ಕರಾಶಿಮ (ಸಂ.) : ಇಂಡಸ್ ವ್ಯಾಲಿ ಟು ಮೆಕಾಂಗ್ ಡೆಲ್ಟ, ಮದ್ರಾಸು, ೧೯೮೫ : ಈ ಗ್ರಂಥದಲ್ಲಿರುವ ನನ್ನ ಲೇಖನ : 'ದಿ ರೋಲ್ ಆಫ್ ಎಪಿಗ್ರಫಿ ಇನ್ ದಿ ಸ್ಟಡಿ ಆಫ್ ನ್ಯೂಮಿಸ್‌ಮ್ಯಾಟಿಕ್ಸ್', ಪು. ೭೭-೮೬.
2. ನನ್ನ ಗಮನವನ್ನು ಈ ಗ್ರಂಥದ ಕಡೆಗೆ ಸೆಳೆದವರು ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರು.
3. ಈ ಗ್ರಂಥವನ್ನು ಡಾ॥ ಅನಂತರಂಗಾಚಾರ್ ಅವರು ಸಂಪಾದಿಸಿದ್ದು, ಮೈಸೂರಿನ ಶಾರದಾ ಮಂದಿರದವರು ಇದನ್ನು ೧೯೭೦ ರಲ್ಲಿ ಪ್ರಕಟಿಸಿದ್ದಾರೆ.
4. ಈ ಗ್ರಂಥದ ಪದ್ಯ ೭೯

ಅವುಗಳ ಹಿಂಭಾಗದಲ್ಲಿ ನಾಗರೀ ಲಿಪಿಯಲ್ಲಿ 'ಶ್ರೀ ಪ್ರತಾಪ ಸದಾಶಿವರಾಯ' ಎಂಬ ಶಾಸನವೂ ಇದೆ. ಈ ಪ್ರತಾಪ ಎನ್ನುವ ಪದದಿಂದ, ಈ ನಾಣ್ಯವು ವಿಜಯ ನಗರದ ಸದಾಶಿವರಾಯನದ್ದೆಂದೂ ಕೆಳದಿಯ ಶಿವಪ್ಪ ನಾಯಕನದು ಅಲ್ಲವೆಂದೂ ಖಚಿತವಾಗಿ ತಿಳಿಯುತ್ತದೆ. ಆದುದರಿಂದ ಈ ಗ್ರಂಥದಲ್ಲಿ ಹೇಳಿರುವ ನಾಣ್ಯವು ವಿಜಯನಗರದ ಮಹಾರಾಜನದ್ದೆಂದು ಸುಲಭವಾಗಿ ಹೇಳಬಹುದು.

ಗೆರುಸೊಪ್ಪೆ ರಾಮಚಂದ್ರ ಜಡೆಯ[5]: ಇದು ಯಾವ ನಾಣ್ಯ ಎಂದು ಖಚಿತವಾಗಿ ಹೇಳುವುದು ಕಷ್ಟ. ಗೇರುಸೊಪ್ಪೆಯಲ್ಲಿ ಆ ಕಾಲದಲ್ಲಿ ಪಾಳೆಯಗಾರರು ಆಳುತ್ತಿದ್ದರು. ಆದುದರಿಂದ ಆ ಪಾಳೆಯಗಾರರ ನಾಣ್ಯ ಇದು ಎಂದು ಊಹಿಸಬಹುದು.

ಗುತ್ತಿ ಹೊನ್ನು: ಕರ್ನಾಟಕದಲ್ಲಿ ಹೊನ್ನು ಎನ್ನುವ ನಾಣ್ಯ ಬಾದಾಮಿಯ ಚಾಲುಕ್ಯರ ಕಾಲ ದಿಂದಲೂ ಬಳಕೆಯಲ್ಲಿದ್ದಿತು. ಅನೇಕ ಶಾಸನಗಳಲ್ಲಿ ಇವುಗಳ ಉಲ್ಲೇಖ ಬರುತ್ತದೆ.[6] ಈ ನಾಣ್ಯ ಹೆಚ್ಚು ಬಳಕೆಗೆ ಬರುವುದು ಕಲ್ಯಾಣದ ಚಾಲುಕ್ಯ ಮತ್ತು ಹೊಯ್ಸಳರ ಕಾಲಗಳಲ್ಲಿ. ಸುಮಾರಾಗಿ ಇದೇ ಕಾಲದಲ್ಲಿ ಈ ನಾಣ್ಯಗಳನ್ನು ಟಂಕಿಸಿದ ಟಂಕಶಾಲೆಗಳ ಊರಿನ ಹೆಸರನ್ನು ಈ ನಾಣ್ಯಗಳ ಜೊತೆಗೂಡಿಸುವುದು ಒಂದು ಹೊಸ ಪದ್ಧತಿಯಾಗಿ ಬೆಳೆಯುತ್ತದೆ. ಲೊಕ್ಕಿ ಗುಂಡಿಯ ನಾಣ್ಯ ಬಾರಕೂರು ಗದ್ಯಾಣ, ಮಂಗಳೂರು ಗದ್ಯಾಣ ಮುಂತಾದ ಉದಾಹರಣೆಗಳು ದೊರಕುತ್ತವೆ. ವಿಜಯನಗರ ಕಾಲದಲ್ಲಿ ಗುತ್ತಿಯಲ್ಲಿ ಒಂದು ಟಂಕಶಾಲೆ ಯಿದ್ದಿತು. ಈ ಟಂಕಶಾಲೆಯಲ್ಲಿ ಮುದ್ರಿತವಾದ ಹೊನ್ನನ್ನು ಗುತ್ತಿಯ ಹೊನ್ನು ಎಂದು ವ್ಯವಹರಿಸು ತ್ತಿದ್ದರು.

ಪಟ್ಟಣದ ಹೊನ್ನು: ಟಿಪ್ಪೂ ಸುಲ್ತಾನನ ಕಾಲ ದಲ್ಲಿ ಶ್ರೀರಂಗಪಟ್ಟಣದಲ್ಲಿ ಒಂದು ಪ್ರಮುಖ ಟಂಕಶಾಲೆ ಯನ್ನು ತೆರೆಯಲಾಯಿತು. ಅಲ್ಲಿ ಟಂಕಿಸಲಾದ ಎಲ್ಲ ನಾಣ್ಯಗಳ ಮೇಲೆಯೂ 'ಪಟ್ಟಣ' ಎನ್ನುವ ಬರಹವನ್ನು ಹಾಕಿಸಲಾಯಿತು. ನಮಗೆ ತಿಳಿದಿರುವಂತೆ ಟಿಪ್ಪೂ ಸುಲ್ತಾನನು ತಾನು ಅಚ್ಚು ಹಾಕಿಸಿದ ಎಲ್ಲ ನಾಣ್ಯಗಳಿಗೂ ಒಂದೊಂದು ಹೊಸ ಹೆಸರನ್ನು ಕೊಟ್ಟನು. ಆದರೆ ಹೊನ್ನುಗಳಿಗೆ ಮಾತ್ರ ಯಾವ ಹೊಸ ಹೆಸರನ್ನೂ ಕೊಡಲಿಲ್ಲ. ಆದುದರಿಂದ ಅವುಗಳು ಪಟ್ಟಣದ ಹೊನ್ನು ಗಳು ಎಂದೇ ಪ್ರಸಿದ್ಧವಾಗಿರಬೇಕು.

ಬೆಣ್ಣೆಮುದ್ದೆಯ ನಾಣ್ಯ: ವಿಜಯನಗರ ಕಾಲದಲ್ಲಿ ಕೃಷ್ಣದೇವರಾಯನು ಒರಿಸ್ಸದ ಉದಯಗಿರಿಯ ವಿಜಯದ ಜ್ಞಾಪಕಾರ್ಥವಾಗಿ ಹಂಪಿಯಲ್ಲಿ ಕೃಷ್ಣನ ದೇವಾಲಯವನ್ನು ಸ್ಥಾಪಿಸಿ, ಬಾಲಕೃಷ್ಣನ ಚಿತ್ರವುಳ್ಳ ನಾಣ್ಯಗಳನ್ನು ಅಚ್ಚು ಹಾಕಿಸಿದನು. ಇದು ಎಷ್ಟೊಂದು ಜನಪ್ರಿಯ ನಾಣ್ಯವಾಗಿದ್ದಿತೆಂದರೆ, ಈ ನಮೂನೆಯ ನಾಣ್ಯಗಳು ವರಾಹ, ಅರ್ಧವರಾಹ ಮತ್ತು ಕಾಲು ವರಾಹಗಳಲ್ಲಿ ದೊರೆಯುತ್ತವೆ. ಈ ನಾಣ್ಯದ ಮುಂಭಾಗದಲ್ಲಿ ಕುಳಿತಿರುವ ಬಾಲಕೃಷ್ಣನ ಚಿತ್ರವಿದೆ. ಬಾಲಕೃಷ್ಣನು ಬಲಗೈಯಲ್ಲಿ ಬೆಣ್ಣೆಯ ಮುದ್ದೆಯನ್ನು ಹಿಡಿದಿದ್ದಾನೆ. ಹಿಂಭಾಗದಲ್ಲಿ 'ಶ್ರೀ ಪ್ರತಾಪ ಕೃಷ್ಣ ರಾಯ' ಎಂಬ ಬರಹವಿದೆ.[7] ಈ ನಾಣ್ಯವನ್ನು ಗಮನಿಸಿ ದಾಗ ಬೆಣ್ಣೆಯ ಮುದ್ದೆಯು ಎಷ್ಟೊಂದು ಪ್ರಾಮುಖ್ಯತೆ ಯಿಂದ ಚಿತ್ರಿತವಾಗಿದೆ ಎಂಬುದು ಅರಿವಾಗುತ್ತದೆ. ಆದುದರಿಂದ ಈ ನಾಣ್ಯ ಬೆಣ್ಣೆಮುದ್ದೆಯ ನಾಣ್ಯ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯಿತು.

ಗಜಬೇಂಟೆಕಾರ ಹೊನ್ನು: ವಿಜಯನಗರದ ದೊರೆ ಇಮ್ಮಡಿ ದೇವರಾಯನಿಗೆ ಆನೆಯ ಬೇಟೆಯೆಂದರೆ ಬಲು ಪ್ರೀತಿ. ಗಜಬೇಂಟೆಕಾರ ಎನ್ನುವ ಬಿರುದೂ ಅವನಿಗಿದ್ದಿತು. ಅವನ ಕಾಲದಲ್ಲಿ ವಿಜಯನಗರವನ್ನು ಸಂದರ್ಶಿಸಿದ ಅಬ್ದುರ್ ರಜಾಕನೂ ಈ ವಿಷಯವನ್ನು ತಿಳಿಸುತ್ತಾನೆ. ಇವನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಆನೆಗಳಿದ್ದವು. ಒಂದೊಂದೂ ಸಣ್ಣ ಪರ್ವತದಂತೆ ಎತ್ತರ

---

5. ಅದೇ, ಪದ್ಯ ೧೯
6. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂ. ೨೦, ಶಾಸನ ೭೬, ೮೨, ೮೫, ೧೦೨, ೧೦೬
7. ಎ. ವಿ. ನರಸಿಂಹಮೂರ್ತಿ: ಕಾಯಿನ್ಸ್ ಆಫ್ ಕರ್ನಾಟಕ, ಪು. ೧೬೨

ವಾಗಿದ್ದು ರಾಕ್ಷಸರಂತೆ ಕ್ರೂರವಾಗಿದ್ದವು ಎನ್ನುವುದು ಅಬ್ದುರ್ ರಜಾಕನ ಮಾತು.[8] ಇಮ್ಮಡಿ ದೇವರಾಯನ ನಾಣ್ಯಗಳನ್ನು ಗಮನಿಸಿದರೆ ಅವನಿಗೆ ಆನೆಗಳ ವಿಷಯದಲ್ಲಿದ್ದ ಪ್ರೀತಿ ಖಚಿತವಾಗುತ್ತದೆ. ಈ ನಾಣ್ಯಗಳ ಮುಂಭಾಗದಲ್ಲಿ ಆನೆಯ ಚಿತ್ರವೂ ಹಿಂಭಾಗದಲ್ಲಿ 'ಶ್ರೀ ದೇವರಾಯ ಗಜಬೇಂಟೆಕಾರ' ಎನ್ನುವ ನಾಗರೀ ಲಿಪಿಯ ಬರವಣಿಗೆಯೂ ಇವೆ. ಈ ರೀತಿಯ ನಾಣ್ಯಗಳನ್ನು ಇನ್ಯಾವ ರಾಜನೂ ಅಚ್ಚು ಹಾಕಿಸಲಿಲ್ಲ. ಆದುದರಿಂದ ಈ ಹೊನ್ನುಗಳಿಗೆ ಗಜಬೇಂಟೆಕಾರ ಹೊನ್ನು ಎನ್ನುವ ಪ್ರಸಿದ್ಧಿ ಬಂದಿತು.

ರೊಟ್ಟಿ ತಿಮ್ಮನಾಯಕನ ಹೊನ್ನು : ಹೆಸರೇ ತಿಳಿಸುವಂತೆ ಇದು ತಿಮ್ಮನಾಯಕನಿಂದ ಟಂಕಿಸಲ್ಪಟ್ಟ ಹೊನ್ನು. ಆದರೆ ಈ ತಿಮ್ಮನಾಯಕ ಯಾರು ಎಂದು ತೀರ್ಮಾನಿಸುವುದು ಸ್ವಲ್ಪ ಕಷ್ಟ. ಮೈಸೂರು ಒಡೆಯರ ಪರವಾಗಿ ತಿಮ್ಮನಾಯಕ ಎಂಬುವನು ಶ್ರೀರಂಗಪಟ್ಟಣದಲ್ಲಿ ಮರಾಠರ ಮೇಲೆ ಯುದ್ಧ ಮಾಡಿದ ಸಂಗತಿ ತಿಳಿದು ಬರುತ್ತದೆ.[9] ಇವನು ಕಾಲೆಕೆರೆ ಎಂಬ ಸ್ಥಳದಲ್ಲಿ ಆಳುತ್ತಿದ್ದನು. ಆದುದರಿಂದ ಈ ಹೊನ್ನುಗಳು ಅವನಿಗೆ ಸೇರಿದ್ದವು ಎಂದು ಊಹಿಸಬಹುದು.

ಕೃಷ್ಣನಾಯಕನ ಹೊನ್ನು : ಹೆಸರೇ ಸೂಚಿಸುವಂತೆ ಇದು ಕೃಷ್ಣನಾಯಕನಿಂದ ಟಂಕಿಸಲ್ಪಟ್ಟ ಹೊನ್ನು. ನಾಯಕ ಎನ್ನುವುದನ್ನು ಗಮನಿಸಿದಾಗ, ಇದು ಆ ಕಾಲದಲ್ಲಿದ್ದ ಯಾವುನಾದರೊಬ್ಬ ಪಾಳೆಯಗಾರನಿಗೆ ಸಂಬಂಧಿಸಿದ್ದಿರಬೇಕೆಂಬ ಊಹೆಯನ್ನು ಮಾಡಬೇಕು. ಮೈಸೂರಿನ ಒಡೆಯರು ಸಾಮಾನ್ಯವಾಗಿ 'ಒಡೆಯರ್' ಎಂಬ ಹೆಸರಿನಿಂದಲೇ ಪ್ರಸಿದ್ಧರಾಗಿದ್ದವರು. ಆದುದರಿಂದ ಈ ಕೃಷ್ಣನಾಯಕನು ಮೈಸೂರಿನ ದೊರೆ ಎಂದು ಹೇಳುವುದು ಸ್ವಲ್ಪ ಕಷ್ಟ.[10]

ನರಸೀಪುರದ ಹೊನ್ನು : ಇದು ತಿರುಮಕೂಡ್ಲು ನರಸೀಪುರದಲ್ಲಿ ಟಂಕಿಸಲ್ಪಟ್ಟ ಚಿನ್ನದ ನಾಣ್ಯ. ಆದರೆ ಇದನ್ನು ಅಚ್ಚು ಹಾಕಿಸಿದವರು ಯಾರು ಎಂದು ತಿಳಿಯುವುದಿಲ್ಲ. ಅಲ್ಲದೆ ಇಲ್ಲಿ ಟಂಕಿಸಲ್ಪಟ್ಟ ಯಾವ ನಾಣ್ಯವೂ ಇದುವರೆವಿಗೆ ದೊರಕಿಲ್ಲ.

ರಾಮಮುದ್ರಿಕೆ : ಇದು ರಾಮಟಂಕಿ ವರಾಹ. ದಕ್ಷಿಣಭಾರತದಲ್ಲಿ ರಾಮಟಂಕಿ ವರಾಹ ಬಹಳ ಪ್ರಚಾರದಲ್ಲಿತ್ತು. ವಿಜಯನಗರದ ಅರಸರಾದ ಆರವೀಡು ಮನೆತನದ ರಾಜರ ಕಾಲದಲ್ಲಿ ಶ್ರೀರಾಮ ಹೆಚ್ಚು ಜನಪ್ರಿಯನಾದ ದೇವತೆಯಾಗಿದ್ದನೆಂದು ತಿಳಿಯಬರುತ್ತದೆ. ಒಂದನೆಯ ತಿರುಮಲರಾಯನು ರಾಮಟಂಕಿ ವರಾಹಗಳನ್ನು ಮುದ್ರಿಸಿದ ಮೊದಲನೆಯ ವಿಜಯನಗರದ ರಾಜ.[11] ಈ ನಾಣ್ಯಗಳ ಮುಂಭಾಗದಲ್ಲಿ ಪೀಠದ ಮೇಲೆ ಕುಳಿತಿರುವ ಶ್ರೀರಾಮ ಮತ್ತು ಸೀತೆ; ಹಿಂದೆ ಲಕ್ಷ್ಮಣನು ನಿಂತಿದ್ದಾನೆ; ರಾಮನು ಅಭಯಮುದ್ರೆಯಲ್ಲಿದ್ದಾನೆ; ಕೆಲವು ನಾಣ್ಯಗಳಲ್ಲಿ ಹನುಮಂತನಿದ್ದಾನೆ. ಈ ನಾಣ್ಯಗಳ ಹಿಂಭಾಗದಲ್ಲಿ 'ಶ್ರೀ ತಿರುಮಲ ರಾಯಲು' ಎಂಬ ನಾಗರೀಲಿಪಿಯ ಬರಹವಿದೆ. ಈ ನಾಣ್ಯಗಳು ರಾಮಟಂಕಿ, ರಾಮಮುದ್ರಿಕೆ, ರಾಮವರಾಹ, ರಾಮನ ಹೊನ್ನು ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿದ್ದವು.

ತಿರುಪತಿ ಹಣ : ತಿರುಪತಿಯಲ್ಲಿ ಟಂಕಿಸಲಾದ ಹಣವೆಂದು ಇದನ್ನು ತಿಳಿಯಬಹುದಾದರೂ ತಿರುಪತಿಯಲ್ಲಿ ಯಾರ ಕಾಲದಲ್ಲಿಯೂ ಟಂಕಶಾಲೆಯು ಇರಲಿಲ್ಲ ಎಂಬುದು ಗಮನಾರ್ಹವಾದ ಸಂಗತಿ. ಆದುದರಿಂದ ಈ ನಾಣ್ಯವು ಯಾವುದು ಎಂಬುದನ್ನು ತಿಳಿಯುವುದು ಅವಶ್ಯಕ. ವಿಜಯನಗರದ ದೊರೆ ಕೃಷ್ಣದೇವರಾಯನಿಗೆ ತಿರುಪತಿಯ ವೆಂಕಟೇಶ್ವರನಲ್ಲಿ ವಿಶೇಷ ಭಕ್ತಿ ಮತ್ತು ಗೌರವವಿದ್ದಿತು. ಒರಿಸ್ಸದ ಮೇಲೆ ವಿಜಯವನ್ನು

---

8. ರಾಬರ್ಟ್ ಸಿವೆಲ್. : ಎ ಫರ್‌ಗಾಟನ್ ಎಂಪೈರ್, ಪು. ೨೮೧
9. ಸಿ. ಹಯವದನರಾವ್ : ಹಿಸ್ಟರಿ ಆಫ್ ಮೈಸೂರ್, ಸಂ. ೩, ಪು. ೧೯೪
10. ಇವರು ಕೃಷ್ಣರಾಜ, ಕೃಷ್ಣಭೂಪಾಲ, ಕೃಷ್ಣಪ್ರಭು ಎಂಬ ಮುಂತಾದ ಹೆಸರುಗಳಿಂದ ಪ್ರಸಿದ್ಧರಾಗಿದ್ದುದು ತಿಳಿದು ಬರುತ್ತದೆ. ಇವರಲ್ಲಿ ಯಾವ ದೊರೆಯೂ ನಾಯಕ ಎನ್ನುವ ಅಭಿಧಾನದಿಂದ ಪ್ರಸಿದ್ಧಿಗೆ ಬಂದಿದ್ದು ಗಮನಕ್ಕೆ ಬಂದಿಲ್ಲ.
11. ಎ. ವಿ. ನರಸಿಂಹಮೂರ್ತಿ : ಕಾಯಿನ್ಸ್ ಆಫ್ ಕರ್ನಾಟಕ, ಪು. ೧೬೯

ಸಂಪಾದಿಸಿದ ಅನಂತರ ಕೃಷ್ಣದೇವರಾಯನು ತಿರುಪತಿಗೆ ಹೋಗಿ ದೇವರಿಗೆ ಕನಕಾಭಿಷೇಕವನ್ನು ಮಾಡಿದನು. ಇದಕ್ಕಾಗಿ ಅವನು ಚಿನ್ನದ ವರಾಹ ನಾಣ್ಯಗಳನ್ನು ಟಂಕಿಸಿದನು. ಇತರ ವರಾಹ ನಾಣ್ಯಗಳಂತೆ ೫೮ ಗ್ರೇನ್ ತೂಕವಿರದೆ, ಈ ನಾಣ್ಯಗಳು ಅದರ ಎರಡರಷ್ಟು ಅಂದರೆ ೧೧೬-೧೧೭ ಗ್ರೇನ್ ತೂಕದವಾಗಿದ್ದವು.[12] ಈ ನಾಣ್ಯಗಳ ಮುಂಭಾಗದಲ್ಲಿ ಎತ್ತರವಾದ ಕಿರೀಟವನ್ನು ಧರಿಸಿರುವ ಹಾಗೂ ನಿಂತಿರುವ ವೆಂಕಟೇಶ್ವರನ ಚಿತ್ರವಿದೆ. ಇದೇ ರೀತಿಯ ನಾಣ್ಯಗಳನ್ನು ನಾಲ್ಕನೆಯ ಶ್ರೀರಂಗರಾಯನೂ ಟಂಕಿಸಿದನು. ಇವುಗಳು ಗಂಡೀಕೋಟೆಯ ಟಂಕಶಾಲೆಯಲ್ಲಿ ಟಂಕಿಸಲ್ಪಟ್ಟವು. ಇವುಗಳ ಮುಂಭಾಗದಲ್ಲಿ ನಿಂತಿರುವ ವೆಂಕಟೇಶ್ವರನ ಚಿತ್ರವೂ ಹಿಂಭಾಗದಲ್ಲಿ 'ಶ್ರೀವೆಂಕಟೇಶ್ವರಾಯ ನಮಃ' ಎಂಬ ಬರಹವೂ ಇವೆ.[13] ಸಾಮಾನ್ಯವಾಗಿ ಈ ನಾಣ್ಯಗಳು ತಿರುಪತಿಯ ನಾಣ್ಯ, ತಿರುಪತಿಯ ವರಾಹ, ತಿರುಪತಿಯ ಹಣ, ತಿಮ್ಮಪ್ಪನ ಹಣ ಮುಂತಾದ ಹೆಸರುಗಳಿಂದ ಜನಜನಿತವಾಗಿವೆ. ಆದುದರಿಂದ ತಿರುಪತಿಯ ಹಣವು ಕೃಷ್ಣದೇವರಾಯನ ಇಲ್ಲವೇ ನಾಲ್ಕನೆಯ ಶ್ರೀರಂಗರಾಯನಿಂದ ಟಂಕಿಸಲ್ಪಟ್ಟ ಶ್ರೀ ವೆಂಕಟೇಶ್ವರನ ಚಿತ್ರವಿರುವ ನಾಣ್ಯಗಳೆಂಬುದು ಖಚಿತವಾಗುತ್ತದೆ.

ಇಕ್ಕೇರಿ ವರಾಹ: ಕೆಳದಿಯ ನಾಯಕರು ಅಚ್ಚುಹಾಕಿಸಿದ ನಾಣ್ಯಗಳಲ್ಲಿ ಇಕ್ಕೇರಿ ವರಾಹ ಬಲು ಮುಖ್ಯವಾದುದು. ಕೆಳದಿಯ ರಾಜ ಸದಾಶಿವನಾಯಕನು, ವಿಜಯನಗರದ ಸದಾಶಿವರಾಯನು ಅಚ್ಚು ಹಾಕಿಸಿದ ಚಿನ್ನದ ವರಾಹಗಳ ಮಾದರಿಯನ್ನೇ ಅನುಸರಿಸಿ ಈ ನಾಣ್ಯಗಳನ್ನು ಟಂಕಿಸಿದನು. ಇವುಗಳ ಮುಂಭಾಗದಲ್ಲಿ ಶಿವ-ಪಾರ್ವತಿಯರ ಚಿತ್ರವೂ ಹಿಂಭಾಗದಲ್ಲಿ 'ಶ್ರೀ ಸದಾಶಿವ' ಎಂಬ ನಾಗರೀ ಬರಹವೂ ಇವೆ.[14] ಕೆಳದಿಯ ನಾಣ್ಯಗಳಲ್ಲಿ 'ಪ್ರತಾಪ' ಎನ್ನುವ ಪದವು ಇಲ್ಲದಿರುವುದನ್ನು ಗಮನಿಸಬೇಕು. ಈ ನಾಣ್ಯಗಳು ಇಕ್ಕೇರಿ ವರಾಹಗಳೆಂದೇ ಪ್ರಸಿದ್ಧಿ ಪಡೆದಿವೆ.

ಬಿಳುಗಿ ಚಕ್ರ: ಇದನ್ನು ಗುರುತಿಸುವುದು ಕಷ್ಟ. ಬಹುಶಃ ಇದು ಉತ್ತರಕನ್ನಡದ ಬಿಳಿಗಿ ಅರಸರ ನಾಣ್ಯವಿರಬೇಕೆಂದು ಊಹಿಸಬಹುದು.

ಟೆಂಕಿ: ಮಧ್ಯಕಾಲೀನ ಭಾರತದಲ್ಲಿ 'ಟಂಕ' ಎಂಬ ನಾಣ್ಯವು ಬಲು ಪ್ರಸಿದ್ಧವಾಗಿದ್ದಿತು. ಈ ನಾಣ್ಯದ ಉಲ್ಲೇಖವೇ ಇದು ಎಂದು ಊಹಿಸಬಹುದು.

ಗದ್ಯಾಣ: ಪ್ರಾಚೀನ ಕರ್ನಾಟಕದಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದ ಗದ್ಯಾಣ ಎಂಬ ನಾಣ್ಯವು ಸುಮಾರು ೧೪ನೆಯ ಶತಮಾನದ ಮಧ್ಯಭಾಗದ ಸಮಯಕ್ಕೆ ಅವನತಿಯನ್ನು ಹೊಂದುತ್ತಾ ಹೋಗುತ್ತದೆ. ಅದರ ಬದಲು ವರಾಹ ಪ್ರಸಿದ್ಧಿ ಪಡೆಯುತ್ತದೆ.

ಅಡ್ಡ, ವೀಸ ಮತ್ತು ಬೇಳೆ: ಇವು ಪ್ರಾಚೀನ ಕರ್ನಾಟಕದಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದ ಸಣ್ಣ ನಾಣ್ಯಗಳು. ಬೇಳೆ ಎಂಬ ನಾಣ್ಯ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಅತಿ ಕನಿಷ್ಠವಾದ ನಾಣ್ಯವಾಗಿದ್ದಿತು. ಎರಡು ಬೇಳೆಗಳಿಗೆ ಒಂದು ಹಾಗವು ಸಮನಾಗಿದ್ದಿತು. ಅದೇ ಕಾಲದಲ್ಲಿ ವೀಸವೂ ಬಳಕೆಯಲ್ಲಿದ್ದಿತು. ಒಂದು ಹಾಗಕ್ಕೆ ನಾಲ್ಕು ವೀಸಗಳು ಸಮನಾಗಿದ್ದವು. ದೇವಗಿರಿಯ ಸೇವುಣರ ಕಾಲದಲ್ಲಿಯೂ ವೀಸ ಮತ್ತು ಬೇಳೆಗಳು ಬಳಕೆಯಲ್ಲಿದ್ದವೆಂಬುದು ತಿಳಿದುಬಂದಿದೆ.[15] ಹೊಯ್ಸಳ ಮತ್ತು ವಿಜಯನಗರ ಕಾಲದಲ್ಲಿಯೂ ವೀಸ ಮತ್ತು ಬೇಳೆಗಳು ಅದೇ ಪ್ರಮಾಣದಲ್ಲಿ ಬಳಕೆಯಲ್ಲಿದ್ದವು.[16] ಕೆಳದಿಯ ನಾಯಕರ ಕಾಲದಲ್ಲಿ ಅಡ್ಡ, ವೀಸ ಮತ್ತು ಬೇಳೆ ಎಂಬ ಮೂರು ನಾಣ್ಯಗಳೂ ಬಳಕೆಯಲ್ಲಿದ್ದವು.[17]

---


12. ಅದೇ, ಪು. ೧೬೦
13. ಅದೇ, ಪು. ೧೭೫
14. ಅದೇ, ಪು. ೨೦೩
15. ಅದೇ, ಪು. ೧೦೭
16. ಅದೇ, ಪು. ೧೪೨
17. ಅದೇ, ಪು. ೨೦೨

ಈ ಕಾಲದಲ್ಲಿ ಒಂದು ಅಡ್ಡವು ನಾಲ್ಕು ಬೇಳೆಗಳಿಗೂ ಒಂದು ಬೇಳೆಗೆ ಎರಡು ವೀಸವೂ ಸಮಾನವಾಗಿದ್ದವು. ಈ ನಾಣ್ಯಗಳು ಮೈಸೂರು ಒಡೆಯರ ಕಾಲದಲ್ಲಿಯೂ ಚಲಾವಣೆಯಲ್ಲಿದ್ದವು.

ಕುಣಿಗಲ್ ಪರಶಿಯ ನಾಗರ: ಈ ನಾಣ್ಯದ ಅರ್ಥ ತಿಳಿಯುವುದು ಸ್ವಲ್ಪ ಕಷ್ಟವೇ ಸರಿ. ಬಹುಶಃ ಇದು ಕುಣಿಗಲ್ಲಿನಲ್ಲಿದ್ದ ಟಂಕಶಾಲೆಯಲ್ಲಿ ಅಚ್ಚಾದ ಕುಣಿಗಲ್ ಹಣವಿರಬಹುದೆಂದು ಊಹಿಸಬಹುದು.

ಫರಂಗಿ ಪುತ್ಥಳಿ: ಬಹುಶಃ ಇದು ಈಸ್ಟ್ ಇಂಡಿಯಾ ಕಂಪೆನಿಯವರು ಅಚ್ಚು ಹಾಕಿಸಿದ ನಾಣ್ಯವಿರಬೇಕು. 'ಮೂರುಸ್ವಾಮಿ ಪಗೋಡ' ಬಲು ಪ್ರಸಿದ್ಧವಾಗಿದ್ದ ನಾಣ್ಯ. ಆದುದರಿಂದ ಇದು ಇದನ್ನು ಉದ್ದೇಶದಲ್ಲಿಟ್ಟುಕೊಂಡಿರಲೂ ಸಾಕು ಎಂದು ಮಾತ್ರ ಹೇಳಬಹುದು. ಒಟ್ಟಿನಲ್ಲಿ ಇದೊಂದು ಈಸ್ಟ್ ಇಂಡಿಯ ಕಂಪೆನಿಯ ನಾಣ್ಯ.

ಇವುಗಳ ಜೊತೆಗೆ, ಈ ಗ್ರಂಥದಲ್ಲಿ ಕಾಣಬರುವ ಮಾಸುಮೊಳೆ, ಗೂಟುಮೊಳೆ, ಕತ್ತೆವಿಟ, ಆನೆವಿಟ, ಬೊಂಬೆಪುತ್ಥಳಿ ಮತ್ತು ಬಟ್ರೆಮಲೆಯ ಮುಂತಾದ ಪದಗಳನ್ನು ಅರ್ಥೈಸಲು ಸಾಧ್ಯವಿಲ್ಲ. ಈ ರೀತಿ 'ಮಾನೌಮಿ ಚೌಪದ'ವು ನಾಣ್ಯಶಾಸ್ತ್ರದ ವಿಷಯದಲ್ಲಿ ಬಲು ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತದೆ.



ಉಡುಪಿ ತಾಲ್ಲೂಕಿನ ಭಂಡಿಮಠವೆಂಬಲ್ಲಿ ದೊರೆತ ನೂತನಶಿಲಾಯುಗದ ಕೊಡಲಿ (ಪು. ೩೪-೩೫)

ಸೀತಾರಾಮ ಜಾಗೀರ್‌ದಾರ್

ಚಾಳುಕ್ಯ ಹಾಗೂ ಹೊಯ್ಸಳ ಮನೆತನಗಳ ಇತಿಹಾಸದ ಮೇಲೆ ಹೊಸ ಬೆಳಕು

ಕರ್ನಾಟಕದ ಹಿರಿಮೆ ಗರಿಮೆಗಳನ್ನು ಹಿಮಾಲಯದ ತಪ್ಪಲಿನ ನೇಪಾಲದಿಂದ ಹಿಂದೂಸಾಗರದ ಲಂಕಾ ದ್ವೀಪದವರೆಗೆ ಬೆಳೆಸಿದ ಕೀರ್ತಿ ಕಲ್ಯಾಣ ಚಾಳುಕ್ಯ ಮನೆತನದ್ದು. ಹೊಯ್ಸಳರು ವಿನಯಾದಿತ್ಯನ ಕಾಲ ದಿಂದ ಆ ಮನೆತನಕ್ಕೆ ಹೆಣ್ಣು ಕೊಟ್ಟು ತಂದವರು. ಅಂತೆಯೆ ಕರ್ನಾಟಕದ ಇನ್ನೊಂದು ಮಾಂಡಲಿಕ ಮನೆತನ ಮಂಗಳವೇಡೆಯ ಕಳಚುರಿಗಳದು ಕೂಡ. ಅರ್ಥಾತ್ ಚಾಳುಕ್ಯರು, ಕಳುಚುರ್ಯರು ಮತ್ತು ಹೊಯ್ಸಳರು ಸಂಬಂಧಿಗಳು ; ಒಬ್ಬರಿಗೊಬ್ಬರು ನೆಂಟರು. ಅಂತೆಯೆ ಇನ್ನೂ ಕೆಲವು ರಾಜಮನೆತನಗಳೂ ಆ ಕಾಲದಲ್ಲಿ ಸಂಬಂಧಿಗಳೇ. ಚಾಳುಕ್ಯ ಚಕ್ರವರ್ತಿ ೬ನೆಯ ವಿಕ್ರಮಾದಿತ್ಯನ ಅನಂತರ ಆ ಮನೆತನದ ಕೀರ್ತಿ ಕಾಂತಿಯ ಬೆಳಕು ಕುಂದುತ್ತ ನಡೆಯಿತು. ಕರ್ನಾಟಕದ ಉತ್ತರದಲ್ಲಿ ನೆಂಟರಾದ ಕಳಚುರಿಗಳು, ಸೇಉಣರು ಮತ್ತು ಕಾಕತಿಯರು ಪ್ರಬಲರಾದರೆ ದಕ್ಷಿಣದಲ್ಲಿ ಹೊಯ್ಸಳರು ಅತ್ಯಂತ ಪ್ರಬಲರಾದರು ; ತಾವೇ ನಿಂತು ಬೆಳೆಸಿದ ಆ ಚಾಳುಕ್ಯ ಸಾಮ್ರಾಜ್ಯವನ್ನು ಮುರಿದು ಮಣ್ಣುಪಾಲು ಮಾಡಿದರು. ಕಲ್ಯಾಣದ ಚಾಳುಕ್ಯರ ಮನೆಯನ್ನು ಯಾರು ಮುರಿದರು ಎಂಬುದು ಈಗ ಚರಿತ್ರೆಯ ಪುಸ್ತಕಗಳಲ್ಲಿ ಒಂದು ಊಹಾ ಪ್ರಪಂಚ– ಕಳಚುರಿಯರು ಮುರಿದರು, ಕಾಕತಿಯರು ಮುರಿದರು, ಇತ್ಯಾದಿ :

But a more formidable foe of the Chalukya was Kakatiya Rudradeva. The Anmakonda inscription of 1163 A.D. of this chief, states that *Taila III died of desease due to the fright of Rudra.* As the latest date of Taila III falls in the middle of 1162 A.D., he appears to have died about the end of that year. This was also the year when Bijjala finally declared himself as the soverign of the entire Chalukya Kingdom. The Harasur and Kalgi records of Bijjala's son Sovideva dated 1172-73 A.D., state in clear terms that this usurper put to death several members of the royal family of the Chalukyas. *It would not be surprising if Taila III was one of them.*[1]

ಚಾಳುಕ್ಯ ಚಕ್ರವರ್ತಿ ೩ನೆಯ ತೈಲಪನು ಹೇಗೆ, ಎಲ್ಲಿ ಸತ್ತನೆಂಬುದು ಸದ್ಯ ಚರಿತ್ರೆಗೆ ತಿಳಿಯದ ಸಂಗತಿ.

---

1. ಡಾ॥ ಪಿ. ಬಿ. ದೇಸಾಯಿ (ಸಂ.) : ಎ ಹಿಸ್ಟರಿ ಆಫ್ ಕರ್ನಾಟಕ (ಎರಡನೆಯ ಆವೃತ್ತಿ), ಧಾರವಾಡ, ೧೯೮೧, ಪು. ೧೯೦

ಆದರೆ ಇತ್ತೀಚೆಗೆ 'ಪ್ರಬುದ್ಧ ಕರ್ಣಾಟಕ' ಪತ್ರಿಕೆಯ ಸಂಪುಟ-೫೭, ಸಂಚಿಕೆ-೩ರಲ್ಲಿ 'ಶಾಸನಕವಿ ಮಾಧವ ವಿಬುಧ' (ಸಂಶೋಧನೆ) ಎಂಬೊಂದು ಲೇಖನ ಅಚ್ಚಾಗಿದೆ. ಈ ಶಾಸನ ಕವಿ ಮಾಧವ ವಿಬುಧನು ಹೊಯ್ಸಳ ದೊರೆ ೧ನೆಯ ನರಸಿಂಹನ ಆಸ್ಥಾನದಲ್ಲಿದ್ದ ವ್ಯಕ್ತಿ. ಈ ಶಾಸನವನ್ನು ಮೊದಲು ಓದಿದವರು ಬಿ. ಎಲ್. ರೈಸ್ ಸಾಹೇಬರು; ಅನಂತರ ಇದನ್ನು ಪರಿಷ್ಕರಿಸಿದವರು ಆರ್. ನರಸಿಂಹಾಚಾರ್ಯರು. ಈ ಇಬ್ಬರು ಮಹನೀಯರೂ ಈ ಶಾಸನವನ್ನು ಅದೇಕೆ ಸರಿಯಾಗಿ ಪ್ರಕಟಿಸಲಿಲ್ಲವೊ ತಿಳಿಯದು. ಅವರ ಕೈಯಲ್ಲೇ ಶಾಸನವು ಶುದ್ಧ ಸ್ವರೂಪದಲ್ಲಿ ಪ್ರಕಟವಾಗಿದ್ದರೆ ನಮ್ಮ ಇತಿಹಾಸ ಗ್ರಂಥಗಳಲ್ಲಿಯ ವಿವರಣೆಯ ದಾರಿಯೆ ಬೇರೆಯಾಗುತ್ತಿತ್ತು. ಆರ್. ನರಸಿಂಹಾಚಾರ್ಯರು ಸಿದ್ಧಪಡಿಸಿದ ಪಾಠ ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೧೫, ಬೇಲೂರು ಶಾಸನ ಸಂಖ್ಯೆ-೯೩ (ಪರಿಷ್ಕೃತ) ಎಂದು ಪ್ರಕಟವಾಗಿದೆ. ಹಳೇಬೀಡಿನ ಪ್ರಸಿದ್ಧ ದೇವಾಲಯವಾದ ಹೊಯ್ಸಳೇಶ್ವರ ದೇವಸ್ಥಾನದಲ್ಲಿಯೆ ಅಲ್ಲಿನ ನವರಂಗದಲ್ಲಿ ಇರುವ 'ಪ್ರೌಢದೇವರಾಯನ ಕಂಬ' ಎಂದು ಪ್ರಸಿದ್ಧವಾದ ಕಂಬದಲ್ಲಿಯೆ ಈ ಶಾಸನವನ್ನು ನಾಲ್ಕು ಮುಖಗಳಲ್ಲಿ ಬರೆಯಲಾಗಿದೆ. ಶಾಸನವು ಇಂದಿಗೂ ಸುಸ್ಪಷ್ಟವಾಗಿಯೆ ಇದೆ. ಈ ಶಾಸನವನ್ನು ಎಂ. ಹನುಮಂತರಾಯರು ಪುನಃ ಪರಿಷ್ಕರಿಸಿ ಪ್ರಕಟಿಸಿದ್ದಾರೆ.[2] ಶ್ರೀಯುತರು ಶಾಸನಕವಿ, ಗರುಡರ ಪ್ರಸಕ್ತಿ, ಶಾಸನ ಶೈಲಿ–ಈ ಬಗ್ಗೆ ವಿಶೇಷವಾಗಿ ಬರೆದಿದ್ದಾರೆ ವಿನಾ ಇದರಲ್ಲಿನ ಚಾರಿತ್ರಕ ಸಂಗತಿಯ ಬಗ್ಗೆ ಚರ್ಚಿಸುವುದಕ್ಕೆ ಹೋಗಿಲ್ಲ. ಈ ದಿಶೆಯಲ್ಲಿ ಶಾಸನದ ಕೆಳಗಿನ ಪಂಕ್ತಿಗಳು ತುಂಬ ಗಮನಾರ್ಹವಾಗಿವೆ :

ಪಂಕ್ತಿಗಳು :

ಪಶ್ಚಿಮ ಮುಖ :

೬೨ ಸುವ ಮಹಾಮಹಿಮನಪ್ಪ ಪ್ರತಾಪನಾರಸಿಂಹ
೬೩ ಹೊಯ್ಸಳ ಮಹೀಭುಜನ ಭುಜಪ್ರತಾಪವೆಂತೆಂದೊ
೬೪ ಡೆ॥ ಅನುಪಮ ಶೌರ್ಯ್ಯಮಂ ಮೆಱೆವನೆಂತಿದಿರಾಂತ ವಿ
೬೫ ರೋಧಿಭೂಪಪಾಂಡ್ಯನ ಬಳಗರ್ವ್ವಮಂ ಕಿಡಿಸಿ ತಂನ್ನೃಪಸೂ
೬೬ ನುವೆನಿಪ್ಪತೈಲನಂ ಘನ ನಿಶಿತಾಸಿಯಿಂ ತಱಿದುದ್ವೃತ್ತ [ರಂ][3]
೬೭ ಮುಱಿದಾ ವಿರೋಧಿಗೆಂತನುನಯದಿಂದಂ.ಳವೊ
೬೮ ಪ್ಪುವುದೀ ನರಸಿಂಹ ಭೂಪನೊಳು ॥ ಯಿಂತೊಪ್ಪುವನೇಕಗು
೬೯ ಣಂಗಳಿನೊಪ್ಪುವ ಕಾವ್ಯ ಕಥಾನುಬಂಧದಿಂ ಸಂನುತಚಿತ್ತಂ ನಳ
೭೦ ನಹುಷಾದಿ ನೃಪಾಳಕರೀತನಂನಱಿಂದಿಂನದುಂಮಾಗಳುಂ ಹೊ
೭೧ ಗಳ್ವರೇಂ ಬುಧಧಾರಿಣಿ ಕೂಡೆಕೂರ್ತ್ತುಂ ಭೂವಿನುತನಂ ನೃಸಿಂ
೭೨ ಹನನಗುವ್ರ್ವಿನ ತೆಂಕಣಚಕ್ರವರ್ತ್ತಿಯುಂ ॥ವ॥ ಅಂತಾ ತೆಂಕಣ

2. ಪ್ರಬುದ್ಧ ಕರ್ಣಾಟಕ, ೫೭-೩, ಪು. ೧-೮ (ಮೇಲಚ್ಚು)

3. ಶಾಸನದ ಪಡಿಯಚ್ಚುಗಳನ್ನು ತಂದು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಈಗ ಇರಿಸಿದೆ. ಇಲ್ಲಿನ ಕೆಲವು ಹೊಸ ಪಾಠಗಳನ್ನು ಹೊಸದಾಗಿ ಗುರುತಿಸಿರುವೆ.

೭೩ ಚಕ್ರವರ್ತ್ತಿ ದಿವ್ಯ ವಸ್ತ್ರಾಭರಣ ಮೂ⁴ಲ್ಯಾನುಲೇಪನಂಗಳಿನಲಂಕೃತ
೭೪ ನಾಗಿ ಲೀಲೆಯಿಂ ಬಂದೋಲಗಸಾಲೆಯೋಳೋಲಗಂಗೊಟ್ಟು ಕುಳಿ
೭೫ ಳ್ಳಿಪ್ಪುದಂ ಮಹಾಪ್ರಧಾನಪ್ರಕರ ಸೇನಾನಾಥಯೂ
೭೬ ಥ ಪ್ರಸಿದ್ಧ ಮಂತ್ರಿ ನಿಕರ ಪ್ರಮುಖ ನಿಖಿಳ ಪರಿಜನಂಗಳಿ
೭೭ [ದಂ]ದ ವಿಚಿತ್ರವಸ್ತ್ರಮಣಿ ಕನಕವಿಭೂಷಣ ಭೂಷಿತ
೭೮ ರಾಗಿ ಬಂದಾ ತೆಂಕಣ ಚಕ್ರವರ್ತ್ತಿಯೊಳ್ದಯೆ....ವ
೭೯ ಗ್ಗ್ರದಿಂ ಪ್ರತಿಹಾರ ನಿರೂಪಿತ ಸ್ಥಳಂಗಳೊಳು ಕುಳ್ಳಿ
೮೦ ಪ್ಪುದುಂ ತದನಂತರಂ ತಾಳಗೀತ ವಾದ್ಯ ವಿದ್ಯಾವಿದರಂ ತರದಿಂ
೮೧ ಮೆಯ್ಯೊಳು ಮೆಚ್ಚಿಸೆ ಯಾದವ ಚಕ್ರವರ್ತ್ತಿ ಮೆಚ್ಚಿ ಮೆಚ್ಚು
೮೨ ಗೊಟ್ಟಾ ಸಮಯದೊಳೆ ಸಮಯಂಬಡೆದು ಸ್ವಾತಿಶ [ಯ]
೮೩ ಪ್ರಕಟಂ ಮಾಡಲಾಗಿ ರುಂಚೆಯ ಬಾವಂನವೀರರ ವೀರಗುಣ
೮೪ ಕಥಾಳಾಪಂಗಳಿಂ ಕವಿಗಮಕಿ ವಾದಿ ವಾಗ್ಮಿಗಳಾ ನರೇಂದ್ರನಂ ಮೆಚ್ಚಿ
೮೫ ಸಿ ಮಚ್ಚುವಡೆವುದಂ ಕಂಡಾ ಚೆಂನಮಲ್ಲನ ರವಳಬೋವಂ
೮೬ ಗಂಡುಬೆಚ್ಚ್ರ್ರಿ ಮಚ್ಚರಿಸಿಯಾ ನೂಱ ನಾಲ್ವರೊಳೊರ್ವ್ವನುಂ
೮೭ ಮೆಱೆಯದ ಪೂರ್ವ್ವವೀರದಿಂದೀ ತೆಂಕಣಚಕ್ರವರ್ತ್ತಿಯಂ ಪ್ರ
೮೮ ತಾಪನಾರಸಿಂಹದೇವಭೂಪನಂ ಮೆಚ್ಚಿಸಿ ಮಚ್ಚುವಡೆದು
೮೯ ಲೆಂಕತನಕ್ಕೆ ಬಿಂಕಮಂ ಪಡೆದು ನಿರ್ಮ್ಮಳಕೀರ್ತ್ತಿಯಂ ಪಡೆವೆನೆಂದು
೯೦ ಪೂಣ್ದು ಬಳಿಕ್ಕಂ ॥....ಇತ್ಯಾದಿ

ಈ ಉಲ್ಲೇಖನದಲ್ಲಿ ೧ನೆಯ ನರಸಿಂಹನನ್ನು 'ತೆಂಕಣ ಚಕ್ರವರ್ತ್ತಿ' 'ಯಾದವ ಚಕ್ರವರ್ತ್ತಿ' ಎಂದು ಹೇಳಿದ ಸಂಗತಿಯಿಂದ ಆತನೇ ಹೊಯ್ಸಳ ವಂಶದಲ್ಲಿ ಮೊದಲ ಚಕ್ರವರ್ತಿಯೆಂಬುದು ಸ್ಪಷ್ಟವಿದೆ. ಆತ ಚಕ್ರವರ್ತಿ ಆದದ್ದು ಹೇಗೆಯೆಂದರೆ ತನ್ನ ಒಡೆಯನ ಮಗನಾದ ತೈಲಪನನ್ನು ತನ್ನ ಹರಿತವಾದ ಕತ್ತಿಯಿಂದ ಕತ್ತರಿಸಿ ಎಂಬುದೂ ಶಾಸನದ ಪಂಕ್ತಿ ೭೫-೭೬ರಲ್ಲಿ ಸ್ಪಷ್ಟವೇ ಇದೆ. ಈ ಘಟನೆ ಯಾವಾಗ ನಡೆದಿರಬಹುದು ಎಂಬುದನ್ನು ಶಾಸನದಲ್ಲಿ ಹೇಳದಿದ್ದರೂ ಪಟ್ಟದಕಲ್ಲಿನ ಶಾಸನವೊಂದರಲ್ಲಿ ಕ್ರಿ.ಶ. ೧೧೬೩ರ ಜೂನ್ ತಿಂಗಳದಲ್ಲಿ ಆ ತೈಲಪ ಚಕ್ರವರ್ತ್ತಿಯು ಬದುಕಿದ್ದುದೂ ಮತ್ತು ಕಳಚುರಿ ಬಿಜ್ಜಳನು ಅದೇ ಸುಮಾರಿಗೆ ತನ್ನನ್ನು ಚಕ್ರವರ್ತ್ತಿ ಎಂದು ಹೇಳಿಕೊಂಡುದುದೂ (ಹೂಲಿಯ ಶಾಸನಗಳು) ಗಮನಕ್ಕೆ ತಂದುಕೊಂಡರೆ ಈ ಘಟನೆಗಳು ಸುಮಾರು ಕ್ರಿ.ಶ. ೧೧೬೩ರಲ್ಲಿ ನಡೆದಿವೆಯೆಂದರೆ ತಪ್ಪಾಗುವುದಿಲ್ಲ. ಕಲ್ಯಾಣದ ಚಾಳುಕ್ಯ ಸಾಮ್ರಾಜ್ಯವನ್ನು ಒಡೆದು ಆಳಿದ ಮನೆತನಗಳಲ್ಲಿ ಕಳಚುರಿ ಬಿಜ್ಜಳ ಹಾಗೂ ಹೊಯ್ಸಳ ನರಸಿಂಹ(I) ಎನ್ನುವುದು ಈಗ ಚೆನ್ನಾಗಿಯಷ್ಟು ಬೆಳಗಿದೆ. ಅಂತೆಯೆ ಇನ್ನು ಮುಂದೆ ೧ನೆಯ ನರಸಿಂಹನಿಗೆ ಚಕ್ರವರ್ತಿ ಎಂದು ಗೌರವಿಸಬೇಕಲ್ಲದೆ, ಇದುವರೆಗೆ ಬರೆದಂತೆ "ಇಮ್ಮಡಿ ವೀರ ಬಲ್ಲಾಳನು ಸಾಮ್ರಾಜ್ಯವನ್ನು ಸ್ಥಾಪಿಸಿದನು" ಎಂದು

4. 'ಮಾಲ್ಯಾನುಲೇಪನ' ಎಂದು ಓದಿಕೊಳ್ಳಬೇಕು.

ಮುಂತಾಗಿ ಬರೆಯುವುದು ಸರಿಯಲ್ಲವೆಂದೂ ಹೇಳ ಬೇಕಾಗಿದೆ. ಜೆ. ಡಿ. ಎಮ್. ಡೆರೆಟ್ಟ್ ಅವರು ಹೊಯ್ಸಳರನ್ನು ಕುರಿತ ತಮ್ಮ ಪುಸ್ತಕದಲ್ಲಿ ಬರೆದಿರುವ "Narasimha missed, indeed, some splendid opportunities" ಮತ್ತು "Narasimha's achivements were almost entirely negative in character"[5] ಎನ್ನುವ ವಾಕ್ಯಗಳು ಈಗ ಸೂಕ್ತ ವಾಗಿ ಮಾರ್ಪಾಟುಗೊಳ್ಳಬೇಕಿದೆ. ಡೆರೆಟ್ಟ್ ಅವರು ಸಹ ಈ ಶಾಸನದ ಸರಿಯಾದ ಪಾಠವನ್ನು ಗಮನಿಸಿದ್ದರೆ ಅವರ ಬರವಣಿಗೆಯ ರೂಪರೇಷೆಗಳೇ ಬದಲಾಗು ತ್ತಿದ್ದುವು.

೧ನೆಯ ನರಸಿಂಹನು ತನ್ನನ್ನು ಎಲ್ಲಿಯೂ 'ಕಳಚುರ್ಯರ ಮಾಂಡಲಿಕ' ಎಂದು ಹೇಳಿಕೊಂಡಿಲ್ಲ ; 'ಚಕ್ರವರ್ತಿ' ಎಂದು ಘೋಷಿಸಿಕೊಂಡವನು ಹಾಗೆ ಹೇಳಿ ಕೊಳ್ಳದೆ ಇದ್ದುದು ಸಹಜವೇ. ಕರ್ನಾಟಕ ದೇಶ ಕ್ರಿ.ಶ. ೧೧೬೨-೬೩ರಲ್ಲಿ ಎರಡು ಸಾಮ್ರಾಜ್ಯಗಳಲ್ಲಿ ಹರಿದು ಹಂಚಿಕೆಯಾಯಿತು ಎಂಬುದು ಇದೀಗ ನಾವು ದಾಖಲಿಸಬೇಕಾದ ಸಂಗತಿಯಾಗಿದೆ.

---

5. ದಿ ಹೊಯ್ಸಳಾಸ್, ಪು. ೭೫, ೭೯

ಡಾ॥ ಕೆ. ಜಿ. ವಸಂತಮಾಧವ

ಕರಾವಳಿ ಕರ್ನಾಟಕದ ಕೆಲವು ಅಪರೂಪ ದಾಖಲೆಪತ್ರಗಳು

ದಾಖಲೆಪತ್ರಗಳು ಆಧುನಿಕ ಇತಿಹಾಸದ ಪ್ರಮುಖ ಆಕರಗಳಾಗಿವೆ. ಇಂತಹ ದಾಖಲೆಪತ್ರಗಳು ಕರ್ನಾಟಕ ಕರಾವಳಿಯ ಪ್ರಾಚೀನ ದೇವಾಲಯಗಳಲ್ಲೂ ಮಠಗಳಲ್ಲೂ ಕುಲೀನ ಜಮೀನ್ದಾರ ಮನೆಗಳಲ್ಲೂ ಅಸಂಖ್ಯವಿವೆ. ಆದರೆ ಇವುಗಳ ಕ್ರೋಢೀಕರಣ ಇನ್ನೂ ನಡೆಯಬೇಕಾಗಿದೆ. ಇಷ್ಟಲ್ಲದೇ ಶೃಂಗೇರಿ ಮಠದಲ್ಲಿ ಕರ್ನಾಟಕ ಕರಾವಳಿಯ ಇತಿಹಾಸಕ್ಕೆ ಸಂಬಂಧಪಟ್ಟ ಹಲವಾರು ದಾಖಲೆಗಳನ್ನು ಡಾ॥ ಎ. ಕೆ. ಶಾಸ್ತ್ರಿಯವರು ಪತ್ತೆಹಚ್ಚಿದ್ದಾರೆ. ಮದ್ರಾಸು ಓರಿಯಂಟಲ್ ಗ್ರಂಥಾಲಯ, ಕೊಚ್ಚಿ ಪತ್ರಾಗಾರ ಮತ್ತು ಗೋವೆ ರಾಜ್ಯದ ಪತ್ರಾಗಾರದಲ್ಲೂ ಕನ್ನಡ ಕರಾವಳಿಯ ಇತಿಹಾಸ ತಿಳಿಸುವ ಅಪೂರ್ವ ದಾಖಲೆಪತ್ರಗಳಿವೆ. ಈ ಅಪೂರ್ವ ದಾಖಲೆಪತ್ರಗಳನ್ನು ಕಡತ ಮತ್ತು ಪತ್ರಗಳೆಂದು ಸಾಮಾನ್ಯವಾಗಿ ವರ್ಗೀಕರಿಸಬಹುದು. ಕಪ್ಪುಬಟ್ಟೆಯ ಮೇಲೆ ಬಳಪಕಲ್ಲಿನಿಂದ ಬರೆದ ಬರಹಗಳೇ ಕಡತ. ಇದನ್ನು ಬಿಸಣಿಗೆಯಂತೆ ಎಡಕೊಮ್ಮೆ ಮತ್ತು ಬಲಕೊಮ್ಮೆ ಮಡಚಿ ಪುಸ್ತಕದಂತೆ ಇಡಬಹುದು. ರಕ್ಷಣೆಗಾಗಿ ಇದರ ಮೇಲೆ ಮರದ ತೆಳ್ಳಗಿನ ಪಟ್ಟಿ ಇಟ್ಟಿರುತ್ತಾರೆ. ಈ ಕಡತಗಳಲ್ಲಿ ಬಿನ್ನವತ್ತಳೆಗಳು, ನಿರೂಪ ಒಂದು ವರ್ಗಕ್ಕೆ ಸೇರಿದರೆ ಲೆಖ್ಖಪತ್ರಗಳಿಗೆ ಸಂಬಂಧಿಸಿದವುಗಳು ಇನ್ನೊಂದು ಮಾದರಿಯವು.[1]

ಇಂತಹ ಕಡತಗಳು ಮಂಜೇಶ್ವರ, ಕೋಟೇಶ್ವರ ಮತ್ತು ಕೊಲ್ಲೂರು ದೇವಾಲಯಗಳಲ್ಲೂ ಮತ್ತು ಹಲಸನಾಡ ವಿಶ್ವೇಶ್ವರಯ್ಯ ಎಂಬ ಜಮೀನ್ದಾರರ ಮನೆಯಲ್ಲೂ ಬಹಳ ಇವೆ. ಕಾಗದದ ಮೇಲೆ ಬರೆದ ಪತ್ರಗಳು ಕೊಚ್ಚಿ ಮತ್ತು ಪಣಜಿ ಪತ್ರಾಗಾರದಲ್ಲೂ ಮತ್ತು ಕೆಲವು ಪಾಳೆಯಗಾರರ ಮತ್ತು ಜಮೀನ್ದಾರರ ಮನೆಯಲ್ಲೂ ಇವೆ.

ಕಡತದಲ್ಲಿ ಹೆಚ್ಚಿನವು ಕನ್ನಡ ಭಾಷೆಯಲ್ಲಿವೆ. ಕಡತಗಳು ವಿದ್ವಾಂಸರ ಕೃತಿಯಾಗಿರದೇ ಮಠದ ಕರಣಿಕ ಮತ್ತು ಸ್ಥಳೀಯ ಶಾನುಭೋಗರಿಂದ ಕಾಲಕಾಲಕ್ಕೆ ಬರೆಯಲ್ಪಟ್ಟ ದಾಖಲೆಗಳ ಪಟ್ಟಿ. ಆದುದರಿಂದ ಸಾಹಿತ್ಯ ದೃಷ್ಟಿಯಿಂದ ಇವುಗಳ ಮೌಲ್ಯ ಸ್ವಲ್ಪ ಕಡಿಮೆ. ಒಟ್ಟಿನಲ್ಲಿ ನಡೆದ ದೈನಿಕ ಘಟನೆಗಳನ್ನು ಇದ್ದುದನ್ನು ಇದ್ದಂತೆ ಬರೆದಿಟ್ಟಿರುವುದರಿಂದಲೇ ಈ ಕಡತಗಳಿಗೆ ಹೆಚ್ಚಿನ ಐತಿಹಾಸಿಕ ಬೆಲೆ ಇದೆ. ಈ ಕಡತಗಳಲ್ಲಿ ಬರೆಯಲ್ಪಟ್ಟ ಬರಹಗಳು ಹದಿನೇಳರಿಂದ ಹತ್ತೊಂಬತ್ತನೆಯ ಶತಮಾನದ ಆರಂಭದವರೆಗಿನ ಕಾಲದವುಗಳು.

ಪತ್ರದಾಖಲೆಗಳನ್ನು ಪತ್ರಾಗಾರಗಳಲ್ಲಿ ಕ್ರೋಢೀಕರಿಸಿದ್ದಾರೆ. ಕೊಚ್ಚಿ ಪತ್ರಾಗಾರದಲ್ಲಿ ಕನ್ನಡ ದಾಖಲೆಯ ಪತ್ರಗಳನ್ನು ೧೪ ಗಂಟುಗಳಲ್ಲಿ ಕ್ರೋಢೀಕರಿಸಿದ್ದಾರೆ. ಈ ಗಂಟುಗಳಲ್ಲಿ ಕೆಲವು ಪತ್ರಗಳು ದೇವನಾಗರಿ ಲಿಪಿಯಲ್ಲಿವೆ. ಈ ಪತ್ರಗಳಲ್ಲಿ ಸಂವತ್ಸರದ ಹೆಸರಿರುವುದರಿಂದ ಇವುಗಳನ್ನು ಬರೆದ ಕಾಲ ತಿಳಿಯಬಹುದು.

---

1. ಎ. ಕೆ. ಶಾಸ್ತ್ರಿ : ಶೃಂಗೇರಿ ಧರ್ಮಸಂಸ್ಥಾನ, ಶೃಂಗೇರಿ, ೧೯೮೩, ಪು. ೧೮-೨೩

ಕೆಳದಿ ಅರಸರು ಪೋರ್ತುಗೀಜ ವೈಸರಾಯಗಳಿಗೆ ಬರೆದ ಕನ್ನಡಭಾಷೆಯ ಪತ್ರಗಳು ಪಣಜಿ ಪತ್ರಾಗಾರ ದಲ್ಲಿವೆ. ಈ ಪತ್ರಗಳನ್ನೆಲ್ಲಾ ಒಂದು ಪೆಟ್ಟಿಗೆಯಲ್ಲಿಟ್ಟಿದ್ದಾರೆ. ಈ ಪತ್ರಗಳು ಕೆಡದಂತೆ ರಾಸಾಯನಿಕ ಪುಡಿಯನ್ನು ಇವುಗಳ ಸುತ್ತ ಪೆಟ್ಟಿಗೆಯೊಳಗೆ ಚೆಲ್ಲಿದ್ದಾರೆ. ಈ ಬರಹದ ಅಂತ್ಯದಲ್ಲಿ 'ಸದಾಶಿವ' ಎಂದಿದೆ. ಈ ಪತ್ರಗಳೆಲ್ಲಾ ಹದಿನೆಂಟನೇ ಶತಮಾನದವುಗಳು.

ಶಿರಾಲಿಯ ಚಿತ್ರಪುರ ಮಠದಲ್ಲಿ ಕೆಲವು ಅಪೂರ್ವ ದಾಖಲೆಯ ಪತ್ರಗಳು ಇವೆ. ಕೆಳದಿ ಅರಸರ ಕಾಲದಲ್ಲಿ ಬರೆದ ಅಮೂಲ್ಯ ಪತ್ರಗಳ ಮೂಲಪತ್ರ ನಾಶವಾಗಿ ಅವುಗಳ ಪ್ರತಿ ಇವೆ. ಕಂಪೆನಿ ಸರಕಾರ ಈ ಮಠಕ್ಕೆ ನೀಡಿದ ಕೆಲವು ಸವಲತ್ತು ವಿವರಿಸುವ ದಾಖಲೆಪತ್ರಗಳನ್ನು ಕನ್ನಡಿ ಪೆಟ್ಟಿಗೆಯಲ್ಲಿರಿಸಿದ್ದಾರೆ. ಈ ಪೆಟ್ಟಿಗೆಗಳನ್ನು ಆ ಮಠದ ವಸ್ತುಸಂಗ್ರಹಾಲಯದಲ್ಲಿ ಇದೆ.

ಕನ್ನಡ ಕರಾವಳಿಯಲ್ಲಿ ದಾಖಲೆಪತ್ರಗಳ ಬಳಕೆಯಿದ್ದಿತ್ತೆಂದು ಕಾಯ್ಕಿಣಿಯಲ್ಲಿ ಸಿಕ್ಕಿದ ಶಾಸನ, ತೇದಿ ಕ್ರಿ. ಶ. ೧೫೪೨, ಮಂಜೇಶ್ವರದ ಶಾಸನ (ಕ್ರಿ. ಶ. ೧೫೮೭) ಮತ್ತು ಇನ್ನಿತರ ಶಾಸನಗಳಲ್ಲೂ ಮತ್ತು ಯೂರೋಪಿನಿಂದ ಬಂದ ಪ್ರವಾಸಿ ದೆಲ್ಲವಲ್ಲೆ ಮತ್ತು ಪೀಟರ ಮುಂಡಿಯ ವರದಿಗಳು ದೃಢೀಕರಿಸುತ್ತವೆ.[2]

ರಾಜಕೀಯ : ಹದಿನೇಳನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದವರೆಗಿನ ಅವಧಿಯಲ್ಲಿ ಕರ್ನಾಟಕ ಕರಾವಳಿಯಲ್ಲಿ ನಡೆದ ಹಲವಾರು ರಾಜಕೀಯ ಘಟನೆಗಳನ್ನು ಈ ಅಪೂರ್ವ ದಾಖಲೆಪತ್ರಗಳು ತಿಳಿಸುತ್ತವೆ. ಇನ್ನಿತರ ದಾಖಲೆಗಳಲ್ಲಿ ತಿಳಿಸಿದ ರಾಜಕೀಯ ಘಟನೆಗಳ ಸಮಗ್ರ ವಿವರ ಈ ಪತ್ರ ಮತ್ತು ಕಡತಗಳಲ್ಲಿದೆ. ಉದಾಹರಣೆಗಾಗಿ ಬಂಗ, ಕುಂಬಳೆ ಮತ್ತು ವಿಠಲ ಅರಸರ ಹೆಸರು ಮತ್ತು ಅವರ ವಂಶಾವಳಿ ಮತ್ತು ಅವರ ರಾಜ್ಯದ ವಿಸ್ತಾರಗಳನ್ನೆಲ್ಲಾ ಮಂಜೇಶ್ವರ ದೇವಾಲಯದಲ್ಲಿ ಸಿಕ್ಕಿದ ಕೆಲವು ಕಡತಗಳು ತಿಳಿಸಿವೆ. ಇಷ್ಟಲ್ಲದೆ ಕೆಳದಿ ನಾಯಕರಿಗೂ ಮತ್ತು ಮಲಬಾರಿನಲ್ಲಿ ಆಳಿಕೊಂಡಿದ್ದ ಅರಸು ಮನೆತನದವರೊಳಗಾದ ಘರ್ಷಣೆ ಮತ್ತು ಇದರಿಂದ ಕೆಳದಿ ಅರಸರಿಗಾದ ಕಷ್ಟ-ನಷ್ಟಗಳ ಉಲ್ಲೇಖವು ಈ ದೇವಾಲಯದ ಒಂದು ಪತ್ರದಲ್ಲಿದೆ. ಈ ಪತ್ರ ಕ್ರಿ. ಶ. ೧೭೦೬ರ ಇಸವಿಯದು.[3] ಕನ್ನಡ ಕರಾವಳಿಯಲ್ಲಿ ಮರಾಠರು ನಡೆಸಿದ ಆಕ್ರಮಣ ಮತ್ತು ಅದರಿಂದಾದ ಪರಿಣಾಮ ಮತ್ತು ಕೆಳದಿ ನಾಯಕರು ತೋರಿಸಿದ ಪ್ರತಿಕ್ರಿಯೆಗಳ ವಿವರ ನಮಗೆ ತಿಳಿದುಬರುವುದು ಗೋವಾ ಪತ್ರಾಗಾರದಲ್ಲಿರುವ ಕನ್ನಡ ಪತ್ರಗಳಿಂದ. ಮರಾಠರು ಮಿಡಜಿ(ಮಿರ್ಜಾನ)ಯಿಂದ ದಕ್ಷಿಣಕ್ಕಿರುವ ಎಲ್ಲಾ ಬಂದರುಗಳನ್ನು ಲೂಟಿ ಮಾಡಿದ್ದರೆಂದೂ ಗೋವೆಯಲ್ಲಿ ಸಿಕ್ಕಿದ ಕ್ರಿ. ಶ. ೧೭೫೬ನೇ ಇಸವಿ ಪತ್ರಗಳಿಂದ ತಿಳಿದು ಬರುತ್ತದೆ. ಇಷ್ಟಲ್ಲದೇ ಹೊನ್ನಾವರ ಮತ್ತು ಕುಂದಾಪುರದ ವರ್ತಕರು ಮರಾಠರಿಗೆ ಅಕ್ಕಿ ವ್ಯಾಪಾರ ಮಾಡಬಾರದಾಗಿ ನಿರ್ಬಂಧಿಸಿದ್ದನ್ನು ಇದೇ ಪತ್ರಗಳು ತಿಳಿಸಿವೆ. ಹೈದರನು ಮಲಬಾರಿನಲ್ಲಿರುವ ನಿಲೇಶ್ವರ, ಚರಕಲ್, ಕೊಲಸ್ಸೇರಿ, ಕಣ್ಣಾನೂರು, ಬಡಗರ ಮತ್ತು ಕಲ್ಲಿಕೋಟೆ ರಾಜರುಗಳ ಮೇಲೆ ನಡೆಸಿದ ಯುದ್ಧ ಮತ್ತು ಒಪ್ಪಂದಗಳ ವಿವರ ಕೊಚ್ಚಿಯಲ್ಲಿರುವ ಪತ್ರಾಗಾರದಿಂದ ತಿಳಿದುಬರುತ್ತದೆ. ನಾಲ್ಕನೆಯ ಗಂಟಿನ ೧೯ನೆಯ ಪತ್ರ ಮಲಬಾರಿನ ರೇವುಗಳಿಗೆ ಮರಾಠರ ಆಕ್ರಮಣ ಭೀತಿಯನ್ನು ತಿಳಿಸಿವೆ.

ಆಡಳಿತ : ರಾಜ್ಯ ಆಡಳಿತ ವಿಭಾಗಗಳಾದ ಹೋಬಳಿ, ಸೀಮೆ, ಮಾಗಣೆ, ಗ್ರಾಮ ಮತ್ತು ಗುತ್ತುಗಳ ಇರುವಿಕೆ ಮತ್ತು ಅವುಗಳೊಳಗಿರುವ ವ್ಯತ್ಯಾಸ ಕೆಲವು ದಾಖಲೆಪತ್ರ ಮತ್ತು ಕಡತ ಅಧ್ಯಯನದಿಂದ ಬೆಳಕಿಗೆ ಬರುತ್ತವೆ. ಚಿತ್ರಾಪುರ ಮಠ ಮತ್ತು ಮಂಜೇಶ್ವರದ ಪತ್ರ ದಾಖಲೆಗಳ ಅಧ್ಯಯನವು ಈ

2. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ೩-೧, ಸಂಖ್ಯೆ ೧೧, ಪು. ೩೧, ಸಾಲು ೧೮ : ಈ ಶಾಸನವು 'ವಹಿಪ್ರಮಾಣಿ' ಎಂದು ತಿಳಿಸಿದ್ದು ದಾಖಲೆಪತ್ರಗಳೆಂದು ತಿಳಿಯಲು ಆಸ್ಪದವಿದೆ; ಆನ್ಯುಯಲ್ ರಿಪೋರ್ಟ್ ಆಫ್ ಇಂಡಿಯನ್ ಎಪಿಗ್ರಫಿ, ೧೯೬೯, ಕ್ರಮಾಂಕ A-1; ಎಪಿಗ್ರಾಫಿಯ ಕರ್ನಾಟಿಕಾ, ಸಂ. ೭, ಕೆಪಿ ೪೬; ಡೆಲ್ಲಾವಲ್ಲೆ: ದಿ ಟ್ರಾವೆಲ್ಸ್ ಇನ್ ಇಂಡಿಯಾ, II, ಪು. ೨೫೨-೫೩; ಪೀಟರ್ ಮಂಡಿ : ದಿ ಟ್ರಾವೆಲ್ಸ್ ಇನ್ ಯೂರೋಪ್ ಅಂಡ್ ಏಷ್ಯಾ, III, ಭಾಗ I, ಪು. ೯೭-೯೯.

3. ಗಣಪತಿರಾವು ಐಗಳ: ಮಂಜೇಶ್ವರ, ಮಂಗಳೂರು, ೧೯೨೪: ಪರಿಶಿಷ್ಟ-೩೦

ಆಡಳಿತ ವಿಭಾಗಗಳು ಉತ್ತರ ಮತ್ತು ದಕ್ಷಿಣಕನ್ನಡ ಪ್ರದೇಶಗಳಲ್ಲಿ ವಿಭಿನ್ನವಾಗಿ ಉಪಯೋಗಿಸಲ್ಪಟ್ಟಿವೆ ಯೆಂಬ ಅರಿವುಂಟು ಮಾಡುತ್ತವೆ. ಕರಾವಳಿ ಕರ್ನಾಟಕದ ಭೂಕಂದಾಯದ ಸ್ಪಷ್ಟಚಿತ್ರ ತಿಳಿಯಲು ಈ ದಾಖಲೆ ಪತ್ರಗಳು ಬಹಳ ಸಹಾಯ ಮಾಡುತ್ತವೆ. ಭೂಕಂದಾಯ ದೊಂದಿಗೆ ಮರಗೇಣಿ, ಪಗುದಿ, ವರ್ತನೆ, ಬಿಡಾರ, ಕೋಟೆ ಬಿರಾಡ, ದಾಸೋಹ, ಕಿಸ್ತು, ಇತ್ಯಾದಿ ತೆರಿಗೆ ಗಳನ್ನು ಸರಕಾರ ಆಗಿಂದಾಗ್ಗೆ ಹೇರಿಸುತ್ತಿತ್ತೆಂದು ಮಂಜೇಶ್ವರ ದೇವಾಲಯದ ಕೆಲವು ಕಡತಗಳು ಹೇಳಿವೆ. ಹಲಸನಾಡು ವಿಶ್ವೇಶ್ವರಯ್ಯನವರ ಮನೆಯಲ್ಲಿ ಸಿಕ್ಕಿದ ಕಡತಗಳು ಆಗಿನ ಕರಾವಳಿಯಲ್ಲಿ ಬಳಕೆ ಇರುವ ಸಿದ್ಧಾಯ, ದಾಸೋಹ, ಪಟ್ಟಿಹೊಳೆಸುಂಕಗಳ ಉಲ್ಲೇಖವಿದೆ. ಇಷ್ಟಲ್ಲದೇ ಆಕಸ್ಮಿಕ ದುರಂತಗಳಾದ ಗುಡ್ಡೆ ಜರಿತ, ಉಪ್ಪುನೀರು ಹಾದದ್ದು, ಬರೆಗುಂದಿದ್ದು, ಹೊಯ್ಗೆ ಹಾದದ್ದನ್ನು ಈ ಕಡತಗಳು ಹೇಳಿವೆ. ಈ ಆಕಸ್ಮಿಕ ದುರಂತಗಳಲ್ಲಿ ಸರಕಾರ ತೆರಿಗೆ ಮನ್ನಾ ಮಾಡಿದ್ದನ್ನು ಈ ಕಡತದಲ್ಲೂ ನೋಡಬಹುದು. ಆಡಳಿತ ಅಧಿಕಾರಿ ಗಳಾದ ಸುಭೆದಾರ, ಪಾರುಪತ್ಯಗಾರ, ಕಿಲ್ಲೆದಾರ, ಮಣೆಗಾರ, ಬೊಕ್ಕಸ(ಖಜಾಂಜಿ)ಗಳ ಕರ್ತವ್ಯಗಳ ವಿವರಗಳು ಶೃಂಗೇರಿಯಲ್ಲಿರುವ ಕಡತಗಳಲ್ಲಿವೆ.[4]

ಧಾರ್ಮಿಕ : ಕನ್ನಡ ಕರಾವಳಿಯಲ್ಲಿರುವ ದೇವಾಲಯಗಳಲ್ಲಿ ನಡೆಯುವ ಹಬ್ಬ ಉತ್ಸವ ವಿಶಿಷ್ಟ ಪೂಜೆಗಳ ವಿವರಗಳನ್ನು ಕೆಲವು ದಾಖಲೆ ಪತ್ರಗಳು ತಿಳಿಸಿವೆ. ಉದಾ : ಮಂಜೇಶ್ವರ ದೇವಾಲಯದಲ್ಲಿ ಸಿಕ್ಕಿದ ಶಾ. ಶ. ೧೬೭೯ (ಕ್ರಿ. ಶ. ೧೭೫೮) ಕಡತವು ವಿಠಲ ಪಂಚಲಿಂಗೇಶ್ವರ ದೇವಾಲಯದಲ್ಲಿ ನಡೆಯುವ ಅಯನೋತ್ಸವ. ಚವುತಿ ಹಬ್ಬಗಳಲ್ಲಿ ನಡೆಯುವ ಖರ್ಚಿನ ವಿವರ ತಿಳಿಸಿವೆ.[5] ನಂದಾದೀಪ, ವಸಂತೋತ್ಸವ ರಂಗಪೂಜೆ, ಸೋಣೆ ಆರತಿ, ಸಂಕ್ರಾಂತಿ ಪೂಜೆ, ಅಯ ನೋತ್ಸವ, ನಾಗಪಂಚಮಿ, ನವರಾತ್ರಿಪೂಜೆ ಇತ್ಯಾದಿ ಗಳ ವಿವರ ಕೊಲ್ಲೂರು ಮತ್ತು ಕೋಟೇಶ್ವರ ದೇವಾಲಯ ಗಳಲ್ಲಿ ಸಿಕ್ಕಿದ ಕಡತಗಳಿಂದ ತಿಳಿದುಬರುತ್ತವೆ. ಹಲಸ ನಾಡು ಮತ್ತು ಆ ಊರಿನ ಆಸುಪಾಸಿನಲ್ಲಿರುವ ದೇವಾಲಯಗಳನ್ನು ತಿಳಿಸಿ ಅಲ್ಲಿ ನಡೆಯುವ ಧಾರ್ಮಿಕ ಕಟ್ಟಳೆಗಳು ವಿಶ್ವೇಶ್ವರಯ್ಯನವರ ಮನೆಯಲ್ಲಿರುವ ಕಡತಗಳಿಂದ ತಿಳಿದುಬರುತ್ತವೆ.

ಚಿತ್ರಾಪುರ ಮಠದಲ್ಲಿರುವ ಕ್ರಿ. ಶ. ೧೭೨೦, ೧೭೨೨, ೧೭೩೯ರ ಪತ್ರಗಳು ಸಾರಸ್ವತ ಸಮಾಜದವರು ತಮ್ಮ ಗುರುಗಳನ್ನು ಸ್ವೀಕರಿಸಿದ ರೀತಿ, ಆ ಗುರುಗಳಾದ ಶ್ರೀ ಶಂಕರಾಶ್ರಮ ಸ್ವಾಮಿಗಳು ತಮ್ಮ ಸಮಾಜದವರಿಗೆ ವಿಧಿಸಿದ ಧಾರ್ಮಿಕ ನಿಯಮಾವಳಿ ಮತ್ತು ಕಟ್ಟಳೆಗಳು ಮತ್ತು ಮಠದಲ್ಲಿ ನಡೆಯುವ ಧಾರ್ಮಿಕ ಉತ್ಸವಗಳನ್ನು ಸಾಂಗವಾಗಿ ನಡೆದುಬರಲು ಕೆಳದಿ ಇಮ್ಮಡಿ ಬಸವಪ್ಪ ನಾಯಕನು ಉಳುವರೆ ಗ್ರಾಮದ ಕಂದಾಯ ಉತ್ಪತ್ತಿ ಬಿಟ್ಟ ವಿವರಗಳಿವೆ. ಶೃಂಗೇರಿ ಮಠ ಮತ್ತು ದೇವಾಲಯ ಗಳಲ್ಲಿ ನಡೆಯುವ ಧಾರ್ಮಿಕ ಹೊಂದಾಣಿಕೆಯನ್ನು ಶೃಂಗೇರಿ ಮಠದ ಕೆಲವು ಕಡತಗಳು ತಿಳಿಸಿವೆ. ಉದಾ : ಪೇಜಾವರ ಮಠದ ಶ್ರೀಮದ್ ತೀರ್ಥ ಶ್ರೀಪಾದಂಗಳು ಶಾ. ಶ. ೧೭೬೩ರ ಪ್ಲವ ಸಂವತ್ಸರದಲ್ಲಿ (ಕ್ರಿ. ಶ. ೧೮೪೧) ಗಂಧ, ಪ್ರಸಾದ ಮತ್ತು ಮಂತ್ರಾಕ್ಷತೆ ಸ್ವೀಕರಿಸುವಂತೆ ಶೃಂಗೇರಿಯ ಸುಭೇದಾರ ಪುಟ್ಟರಾಯರಿಗೆ ಪತ್ರಬರೆದರು. ಇಷ್ಟಲ್ಲದೇ ಮರುವರ್ಷ ಉಡುಪಿ ಶ್ರೀ ಕೃಷ್ಣನ ಪೂಜಾ ಪರ್ಯಾ ಯಕ್ಕೆ ಶೃಂಗೇರಿ ಜಗದ್ಗುರುಗಳು (ನರಸಿಂಹ ಭಾರತಿ VIII) ಬರುವ ಏರ್ಪಾಡು ಮಾಡಬೇಕಾಗಿ ಪೇಜಾವರ ಸ್ವಾಮಿಗಳು ಪುಟ್ಟರಾಯನಿಗೆ ವಿನಂತಿಸಿಕೊಂಡರು. ಇದರಂತೆ ಶೃಂಗೇರಿ ಸ್ವಾಮಿಗಳು ಪರ್ಯಾಯ ಉತ್ಸವಕ್ಕೆ ಬಂದಿದ್ದರು.[6]

ಕೊಚ್ಚಿ ಪತ್ರಾಗಾರದಲ್ಲಿರುವ ಕನ್ನಡ ದಾಖಲೆಪತ್ರ ಗಳು ಕೊಚ್ಚಿ ರಾಜ ಮತ್ತು ಕನ್ನಡ ಕರಾವಳಿಯ ದೇವ ಸ್ಥಾನಗಳ ಧಾರ್ಮಿಕ ಸಂಬಂಧವನ್ನೊಳಗೊಂಡಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೊಲ್ಲೂರು ಮೂಕಾಂಬಿಕಾ ದೇವಾಲಯಕ್ಕೆ ಕೊಚ್ಚಿ, ಚರಕಲ, ಕೊಲಸ್ನೇರಿ ರಾಜರು

4. ಶೃಂಗೇರಿ ಧರ್ಮಸಂಸ್ಥಾನ, ಪು. ೯೯-೧೧೦
5. ಮಂಜೇಶ್ವರ : ಪರಿಶಿಷ್ಟ-೩೦
6. ಶೃಂಗೇರಿ ಧರ್ಮಸಂಸ್ಥಾನ, ಪು.೧೩೯-೪೦

ಗಳು ಭಕ್ತಿಪೂರ್ವಕವಾಗಿ ಬಿಟ್ಟ ಉಂಬಳಿ ಮತ್ತು ಇನ್ನಿತರ ಸೇವೆಗಳನ್ನು ಹದಿನಾಲ್ಕು ಗಂಟುಗಳ ಕೆಲವು ಪತ್ರಗಳು ವಿವರಿಸಿವೆ. ಚಿತ್ತಾರಿಯಲ್ಲಿ ಕಟ್ಟಿದ ಅಗ್ರಹಾರ, ಅದಕ್ಕೆ ಕೊಚ್ಚಿಯ ರಾಜ ಉಂಬಳಿ ಬಿಟ್ಟ ವಿವರ ಆರನೇ ಗಂಟಿನ ಮೂರನೇ ನಂಬ್ರದ ಪತ್ರ ತಿಳಿಸುತ್ತದೆ. ಇಷ್ಟಲ್ಲದೆ ಕೊಚ್ಚಿಯ ಅರಸರು ಉಡುಪಿ ಶ್ರೀಕೃಷ್ಣ ಮಠದೊಂದಿಗೆ ನಿಕಟ ಧಾರ್ಮಿಕ ಸಂಬಂಧ ಇಟ್ಟುಕೊಂಡಿದ್ದರೆಂಬ ಸತ್ಯವು ತಿಳಿದು ಬರುವುದು ಆರನೇ ಗಂಟಿನ ಕೆಲವು ಪತ್ರಗಳ ಅಧ್ಯಯನದಿಂದ ಗೋಚರವಾಗುತ್ತದೆ. ಉದಾ : ಕೊಚ್ಚಿ ರಾಜ್ಯದ ದಿವಾನ ನಂಜಪ್ಪಯ್ಯ ಪಲಿಮಾರು ಮಠದ ಸ್ವಾಮಿಗಳ ಶಿಷ್ಯರು. ದಿವಾನರು ತಿರುಪತಿ ಮತ್ತು ಶ್ರೀರಂಗಗಳಂಥ ಪವಿತ್ರ ಸ್ಥಳಕ್ಕೆ ರಾಜನೊಂದಿಗೆ ಯಾತ್ರೆಗೈದ ನಂತರ ಉಡುಪಿಗೆ ಬಂದು ಶ್ರೀಕೃಷ್ಣನಿಗೆ ವಿಶೇಷ ಪೂಜೆ ಸಲ್ಲಿಸಿ ಕಾಣಿಕೆ ನೀಡಿದರೆಂಬ ವಿಷಯ ೬ನೇ ಗಂಟಿನ ವಿಶು ಸಂವತ್ಸರ ೬ನೇ ನಂಬ್ರದ ದಾಖಲೆಯು ಉಲ್ಲೇಖಿಸಿದೆ.[7]

ಸಾಮಾಜಿಕ : ಕಡತಗಳಲ್ಲಿ ಬರೆದ ಬಿನ್ನವತ್ತಳೆ ಮತ್ತು ನಿರೂಪಗಳು ಕರಾವಳಿ ಕರ್ನಾಟಕದ ಸಾಮಾಜಿಕ ಸ್ಥಿತಿಯನ್ನು ತಿಳಿಯಲು ಸಹಾಯಕವಾಗಿವೆ. ಮೇಲು ಕೀಳು ಆಧಾರದ ಮೇಲೆ ವರ್ಗೀಕರಿಸಿದ ಜಾತಿಪದ್ಧತಿ ಸಮಾಜದ ದೈನಂದಿನ ವ್ಯವಹಾರ, ಮಹಿಳೆಯರ ಸ್ಥಾನ, ಗುಲಾಮಪದ್ಧತಿ, ಜಾತಿಕಲಹ ಮತ್ತು ಅವುಗಳ ನಿವಾರಣೆ, ಜಾತಿಪದ್ಧತಿಗಳನ್ನು ಉಲ್ಲಂಘಿಸುವವರಿಗಾಗುವ ಶಿಕ್ಷೆಗಳ ವಿವರ ಇತ್ಯಾದಿಗಳನ್ನು ದಾಖಲೆಪತ್ರ ಮತ್ತು ಕಡತಗಳು ಒಳಗೊಂಡಿವೆ. ಹಲವಾರು ಜಾತಿಯ ಜನರು ಕೂಡಿಬಾಳಿದ್ದರೂ ಒಮ್ಮೊಮ್ಮೆ ಕೋಮುವಾರು ಗಲಭೆಗಳು ಉಂಟಾಗುತ್ತಿದ್ದವು. ಅಂತಹ ಕಲಹಗಳನ್ನು ಧರ್ಮಾಧಿಕಾರಿಗಳು ಬಗೆಹರಿಸುತ್ತಿದ್ದರೆಂದು ಶೃಂಗೇರಿಯ ಕೆಲವು ಕಡತಗಳ ಅಧ್ಯಯನದಿಂದ ತಿಳಿದುಬರುತ್ತದೆ. ಉದಾ : ಜನಿವಾರ ತೊಡಲು ಕ್ಷತ್ರಿಯವರ್ಗದ ಸೇರೆಗಾರರು ಅರ್ಹರೋ ಅಥವಾ ಅನರ್ಹರೋ ಎಂಬ ವಿವಾದ ಕೊಂಕಣಸ್ಥರಿಗೂ ಸೇರೆಗಾರರಿಗೂ ನಡುವೆ ಬಂದದ್ದಕ್ಕಾಗಿ ಕ್ರಿ. ಶ. ೧೬೩೩ರಲ್ಲಿ ಮಂಗಳೂರು, ಬಾರಕೂರು, ಗೇರಸೊಪ್ಪೆ, ಚಂದಾವರ ಮಿಡ್ಜಿಯ ಈ ಜಾತಿಯವರು ಶಂಕರಭಾರತಿ ಸ್ವಾಮಿಗಳಲ್ಲಿ (ಸಚ್ಚಿದಾನಂದಭಾರತೀ ಗುರುಗಳು) ನಿವಾರಿಸಿಕೊಂಡರು. ಈ ಎಲ್ಲಾ ಪ್ರಜೆಗಳಿಗೆ ಕೆಳದಿ ಭದ್ರಪ್ಪನಾಯಕ (ಆ ಕಾಲದಲ್ಲಿ ಕೆಳದಿ ಅರಸ ವೀರಭದ್ರ) ಅರಸನಾಗಿದ್ದರಿಂದ ಈ ಸಂಗತಿ ಅವನ ಗಮನಕ್ಕೆ ತರಲಾಯಿತು. ಈ ವಿಷಯ ಸಾಮಾಜಿಕ ಮತ್ತು ಧಾರ್ಮಿಕ ಸಮಸ್ಯೆಯಾದ್ದರಿಂದ ಇದನ್ನು ಬಗೆಹರಿಸಲು ಶೃಂಗೇರಿ ಗುರುಗಳು ಸಮರ್ಥರು ಎಂದು ನಾಯಕನು ಸೇರೆಗಾರರಿಗೆ ಆಣತಿಯಿತ್ತ. ಈ ನಾಯಕನ ಇಚ್ಛೆಯಂತೆ ಸೇರೆಗಾರರು ಶೃಂಗೇರಿ ಗುರುಗಳನ್ನು ಕಂಡು ತಮಗೆ ಜನಿವಾರ ತೊಡಲು ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಶೃಂಗೇರಿ ಗುರುಗಳು ಅವರಿಗೆ ಜನಿವಾರ ತೊಡಲು ಅನುಮತಿ ನೀಡಿದ್ದರೆಂಬ ವಿಚಾರ ಈ ಕಡತದ ಅಧ್ಯಯನದಿಂದ ತಿಳಿದುಬರುತ್ತದೆ.[8]

ಕೆಳವರ್ಗದ ಜನರನ್ನು ಸಂಬಳಕೊಟ್ಟು ಕೃಷಿ ಮತ್ತು ಮನೆಕೆಲಸಗಳಿಗೆ ಮೇಲುವರ್ಗದ ಜಮೀನುದಾರರು ನೇಮಿಸಿಕೊಳ್ಳುತ್ತಿದ್ದರೆಂದು ಕನ್ನಡ ಕರಾವಳಿಯಲ್ಲಿ ಸಿಕ್ಕಿದ ಕೆಲವು ಕಡತಗಳು ತಿಳಿಸಿವೆ. ಹಲಸನಾಡಿನಲ್ಲಿ ಸಿಕ್ಕಿದ ಕಡತ ಆಳುಗಳ ವೆಚ್ಚವನ್ನು ತಿಳಿಸಿದರೆ, ಶೃಂಗೇರಿಯ ಕಡತದಲ್ಲಿ ಚೆನ್ನಬಸವನ ಮಗ ನಂಜ ಮತ್ತು ರುದ್ರಮನ ಮಗ ವೀರ ಇವರಿಗೆ ಶೃಂಗೇರಿ ಮಠದಲ್ಲಿ ದಾಸ್ಯವೃತ್ತಿಯ ಸೇವೆ ಸಲ್ಲಿಸಿದ್ದಕ್ಕೆ ಸಂಬಳ ಕೊಟ್ಟದ್ದನ್ನು ತಿಳಿಸಿದೆ.[9]

---

7. ಕೆ. ಜಿ. ವಸಂತಮಾಧವ : 'ಕನ್ನಡ ಪೇಪರ್ಸ್ ಇನ್ ಕೋಚಿನ್ ಆರ್ಕೈವ್ಸ್', ಇಂಡಿಯನ್ ಆರ್ಕೈವ್ಸ್, XXVII, ಸಂ. ೨, ಜುಲೈ-ಡಿಸೆಂಬರ್ ೧೯೭೮, ನ್ಯೂ ದೆಹಲಿ, ಪು. ೩೫-೩೬

8. ಶೃಂಗೇರಿ ಧರ್ಮಸಂಸ್ಥಾನ, ಪು. ೧೭೮ : ಈ ಕಡತದಲ್ಲಿ ತಿಳಿಸಿದ ಶೃಂಗೇರಿ ಗುರುಗಳು ಮತ್ತು ಕೆಳದಿ ಅರಸರ ಉಲ್ಲೇಖಗಳು ತಪ್ಪಾಗಿವೆ. ಆದರೆ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಯನ್ನರಿಯಲು ಇದೊಂದು ಮಹತ್ವದ ದಾಖಲೆಯೆಂದು ಇಲ್ಲಿ ತಿಳಿಯಬೇಕು.

9. ಅದೇ, ಪು. ೧೮೦

ಕನ್ನಡ ಕರಾವಳಿಯ ಕೆಳಜಾತಿಯ ಮಹಿಳೆಯರು ದಾಸ್ಯವೃತ್ತಿಯಲ್ಲಿದ್ದರೆಂದೂ ಅವರ ವಿಕ್ರಯವಾಗುತ್ತಿದ್ದವೆಂದೂ ಹಲವಾರು ದಾಖಲೆ ಪತ್ರ ಮತ್ತು ಕಡತಗಳು ತಿಳಿಸಿವೆ. ಇಷ್ಟಲ್ಲದೇ ನಿರ್ಗತಿಕ ಬಡ ಹೆಂಗಸರು ಮತ್ತು ಹೊಲೆಯರ ವಿಕ್ರಯವು ಆಗುತ್ತಿತ್ತೆಂದೂ ಈ ಕಡತಗಳು ತಿಳಿಸಿವೆ.10 ಈ ಹೊಲೆಯಾಳುಗಳನ್ನು ಹುಟ್ಟಾಳು, ಮೂಲದಾಳು ಮತ್ತು ಮಣ್ಣಾಳುಗಳೆಂದು ವರ್ಗೀಕರಿಸಿ ಅವರಿಗೆ ನೀಡುತ್ತಿದ್ದ ಸವಲತ್ತುಗಳ ವಿವರ ಹಲಸನಾಡಿನಲ್ಲಿ ಸಿಕ್ಕಿದ ಕಡತಗಳು ತಿಳಿಸಿವೆ. ಒಟ್ಟಿನಲ್ಲಿ ಸಹಬಾಳ್ವೆಯ ನಂಬಿಕೊಂಡು ಬಂದ ಸಾಂಪ್ರದಾಯಿಕ ಪಾಳೆಯಗಾರ ಪದ್ಧತಿಯ ಸಮಾಜ ಕನ್ನಡ ಕರಾವಳಿಯಲ್ಲಿದ್ದಿತೆಂದು ಕಡತಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಆರ್ಥಿಕ ಸ್ಥಿತಿ : ಕನ್ನಡ ಕರಾವಳಿಯಲ್ಲಿ ಬಳಕೆ ಇರುವ ಬೇಸಾಯಕ್ರಮ ಇಲ್ಲಿನ ಬೇಸಾಯ ಭೂಮಿಗಳ ವರ್ಗೀಕರಣ ಅರಣ್ಯಸಂಪತ್ತು, ಭೂವ್ಯವಹಾರ, ಗುತ್ತಿಗೆ ಪದ್ಧತಿ, ನಾಣ್ಯ ಚಲಾವಣೆ ಮತ್ತು ಅಳತೆ ತೂಕಗಳ ವಿವರಗಳನ್ನೆಲ್ಲಾ ದಾಖಲೆಪತ್ರ ಮತ್ತು ಕಡತಗಳು ಬಣ್ಣಿಸುತ್ತಾ ಬಂದಿವೆ. ಮಂಜೇಶ್ವರ ಮತ್ತು ಕೊಲ್ಲೂರು ದೇವಾಲಯಗಳಲ್ಲಿ ಸಿಕ್ಕಿದ ಕಡತಗಳಲ್ಲಿ ಅಕ್ಕಿ, ಮೆಣಸು, ಕೊಬರಿ, ಕಬ್ಬಿನಬೆಲ್ಲ, ಗಂಧ, ಗಡಸಿನ ಸರಕುಗಳೆಂದು ತಿಳಿಸಿ ಅವುಗಳ ಮೇಲೆ ಸುಂಕ ವಿಧಿಸಿದನ್ನು ತಿಳಿಸಿವೆ.

ಬೇಸಾಯ ಭೂಮಿಗಳು, ಅವುಗಳ ಬೆಳೆಯನ್ನು ಹೊಂದಿಕೊಂಡು ವರ್ಗೀಕರಿಸಿದ ವಿವರಗಳು ಹಲಸನಾಡು, ಮಂಜೇಶ್ವರದ ಶ್ರೀಮದನಂತೇಶ್ವರ ದೇವಾಲಯಗಳ ಕಡತಗಳಲ್ಲಿ ನಮೂದಿಸಲಾಗಿದೆ. ಇಷ್ಟಲ್ಲದೆ ಈ ಭೂಮಿಗಳಲ್ಲಿ ನಡೆಯುವ ಭೂಹಿಡುವಳಿ ಕ್ರಮಗಳಾದ ಗೇಣಿ ಪದ್ಧತಿಗಳ ವಿವರ ಈ ಕಡತಗಳಲ್ಲಿ ತಿಳಿಸಿದೆ. ಅತಿವೃಷ್ಟಿ ಮತ್ತು ಅನಾವೃಷ್ಟಿಯಲ್ಲಿ ಧಾರ್ಮಿಕ ಸಂಸ್ಥೆಗಳು ಮತ್ತು ಕೆಲವು ಭೂಮಾಲಿಕರು ತಮ್ಮ ಗೇಣಿ ನೀಡುತ್ತಿದ್ದ ಒಕ್ಕಲುಗಳಿಗೆ ರಿಯಾಯತಿ ತೋರಿಸಿದ್ದನ್ನು ಕೆಲವು ಕಡತಗಳು ತಿಳಿಸಿವೆ. ಇದಕ್ಕೆ ನಿದರ್ಶನವಾಗಿ ಶಾ.ಶ. ೧೫೭೭ (ಕ್ರಿ.ಶ. ೧೬೫೫) ರಲ್ಲಿ ಕಾಸರಗೋಡು ಮತ್ತು ಪುತ್ತೂರಿನ ಕೆಲವು ಪ್ರದೇಶಗಳು ಅನಾವೃಷ್ಟಿಗೆ ತುತ್ತಾದವು. ಇದರಿಂದ ಪೆರ್ಣಮೊಗರಿನ ಕೆಲವು ಗದ್ದೆಗಳು ನೀರಿನಲ್ಲಿ ಮುಳುಗಿ ನಾಲ್ಕು ವರಹಗದ್ಯಾಣ ಬೆಲೆ ಬರುವ ಪ್ರದೇಶಗಳ ಬೆಳೆ ನಷ್ಟವಾಯಿತು. ಇದನ್ನು ತಿಳಿದ ವಿಠಲ ನರಸಿಂಹದೊಂಬ ಹೆಗ್ಗಡೆ ತಿಮ್ಮಾಜಿಗೆ ವಿನಾಯತಿ ಬಿಟ್ಟದ್ದನ್ನು ಐಗಳು ಸಂಶೋಧಿಸಿದ ಮಂಜೇಶ್ವರದ ದಾಖಲೆಯಿಂದ ತಿಳಿದು ಬರುತ್ತದೆ.

ಕೃಷಿಕ್ರಮದೊಂದಿಗೆ ದಾಖಲೆಪತ್ರಗಳು ಕರ್ನಾಟಕ ಕರಾವಳಿಯ ರೇವುಗಳಾದ ಕಾಸರಗೋಡು, ಕುಂಬಳೆ, ಮಂಜೇಶ್ವರ, ಮಂಗಳೂರು, ಮೂಲ್ಕಿ, ಬಸ್ರೂರು, ಭಟ್ಕಳ, ಹೊನ್ನಾವರ, ಮಿರ್ಜಾ ಮತ್ತು ಕಾರವಾರಗಳಲ್ಲಿ ಕಾರ್ಯನಿರತರಾದ ಜನರ ಜಾತಿ ವರ್ಗೀಕರಣ ಮತ್ತು ಅವರ ವಾಪಾರದ ವಸ್ತುಗಳು ಮತ್ತು ಅವರ ವ್ಯಾಪಾರ ವಿವರಗಳನ್ನು ಮಂಜೇಶ್ವರದ ದೇವಾಲಯದ ಕ್ರಿ. ಶ. ೧೭೧೫ರ ದಾಖಲೆಗಳಲ್ಲಿ ತಿಳಿಸಲಾಗಿದೆ. ಮಾಪಿಳ್ಳೆ ಮತ್ತು ಗೌಡ ಸಾರಸ್ವತರು ಕರಾವಳಿ ಕರ್ನಾಟಕದ ವ್ಯಾಪಾರದಲ್ಲಿ ತೀವ್ರ ಆಸಕ್ತಿಯನ್ನು ಹೊಂದಿದ್ದರು. ಇವರಲ್ಲಿ ದೊಡ್ಡ ಮಂದೆಗಳಿದ್ದವೆಂದೂ ಪಣಜಿ ಮತ್ತು ಕೊಚ್ಚಿಯಲ್ಲಿರುವ ದಾಖಲೆಪತ್ರಗಳಿಂದ ತಿಳಿದು ಬರುತ್ತದೆ.

ಕರಾವಳಿ ಕರ್ನಾಟಕದಲ್ಲಿ ಚಲಾವಣೆಯಲ್ಲಿದ್ದ ನಾಣ್ಯ ಪದ್ಧತಿಗಳಾದ ವರಹಗದ್ಯಾಣ, ಹೊನ್ನು, ಧರಣ, ಹಣ, ಮುಪ್ಪಾಗ, ಅಡ್ಡ, ಹಾಗ, ಬೇಳೆ, ವೀಸ, ಅರೆವಿಸ, ಕಾಸುಗಳೆಂಬ ನಾಣ್ಯಗಳು ಅವರೋಹಣ ರೀತಿಯಲ್ಲಿ ಬಳಕೆಯಲ್ಲಿದ್ದಿವೆಯೆಂದು ವೇದ್ಯವಾಗುತ್ತದೆ. ಒಟ್ಟಿನಲ್ಲಿ ಇಲ್ಲಿನ ಆರ್ಥಿಕ ಸ್ಥಿತಿ ಸಮಾಧಾನಕರವಾಗಿತ್ತು ಜನರ ಬೇಡಿಕೆಗಳು ಕಡಿಮೆಯಿದ್ದುದರಿಂದ ಅವರು ಮಾಡುತ್ತಿದ್ದ ಉದ್ಯೋಗಗಳಿಂದ ಜೀವನ ನಿರ್ವಹಿಸಲು ಸಾಕಾಗುವಷ್ಟು ಆದಾಯ ಬರುತ್ತಿತ್ತು ಎಂಬ ವಿಚಾರಗಳು ಈ ಈ ದಾಖಲೆ ಮತ್ತು ಕಡತಗಳ ಅಧ್ಯಯನದಿಂದ ಬೆಳಕಿಗೆ ಬಂದಿವೆ.

ಉಪಸಂಹಾರ : ಈ ಅಪೂರ್ವ ದಾಖಲೆಯಾದ, ಪತ್ರ ಮತ್ತು ಕಡತಗಳು ಕರಾವಳಿ ಕರ್ನಾಟಕದ ಸಮಗ್ರ ಇತಿಹಾಸ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿವೆ. ಇವುಗಳು ಹಲವಾರು ಕುತೂಹಲ ಐತಿಹಾಸಿಕ ವಿಷಯಗಳನ್ನು ತಿಳಿಸುತ್ತವೆ. ಇವುಗಳ ಕ್ರೋಢೀಕರಣ ಮತ್ತು ವಿಮರ್ಶಾತ್ಮಕ ಆಳ ಅಧ್ಯಯನ ನಡೆಸುವ ಆವಶ್ಯಕತೆ ಇದೆ.

10. ಅದೇ, ಪು. ೧೮೨-೮೮

ಡಾ|| ಕೆ. ಎನ್. ಚಿಟ್ನಿಸ್

ಸವಣೂರ ನವಾಬರು

ಸವಣೂರ ನವಾಬರ ಮೂಲಸ್ಥಾನವು ಅಫಗಾಣಿಸ್ತಾನವು. ಈ ಮನೆತನದ ಮೂಲಪುರುಷನು ಅಬ್ದುಲ ಕರೀಮ ಖಾನನು. ಇವನಿಂದ ಹಿಂದಿನ ೧೫ನೆಯ ತಲೆಯುವನಾದ ಮಲಿಕ ಅವತಾರಖಾನನು ತೈಮೂರ ಲಂಗನ ಸೈನ್ಯದ ಸಂಗಡ ಹಿಂದುಸ್ತಾನಕ್ಕೆ ಬಂದನು. ೧೮ ನೆಯ ತಲೆಯುವನಾದ ದೊದಾಖಾನನು. 'ನವಾಬ' ಎಂಬ ಪದವಿಯನ್ನು ಧಾರಣ ಮಾಡಿದನು. ಮತ್ತು ಮುಘಲ ಆಸ್ಥಾನದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡನು. ೨೦ ನೆಯ ತಲೆಯುವನಾದ ನವಾಬ ಬಹಲೋಲಖಾನನು ದಕ್ಷಿಣಕ್ಕೆ ಬಂದು ವಿಜಾಪುರದ ೨ನೆಯ ಅಲಿ ಆದಿಲಶಹನ ಆಸ್ಥಾನವನ್ನು ಸೇರಿಕೊಂಡನು. ಬಹಲೋಲಖಾನನ ನಂತರ ಇವನ ಮಗ ಅಬ್ದುಲ ರಹೀಮನು ಈ ಮನೆತನಕ್ಕೆ ಪ್ರಮುಖನಾದನು. ಕೊಪ್ಪಳವು ಇವನ ಜಹಗೀರಿತ್ತು.


ಇವನ ನಂತರ ಬಂದ ಅಬ್ದುಲ ಕರೀಮ ಬಹಲೋಲಖಾನನು ವಿಜಾಪುರದ ಆಸ್ಥಾನದಲ್ಲಿಯ ಅತಿ ಬಲಶಾಲಿಗಳಾದ ಮನ್ನೆಯರಲ್ಲಿ ಒಬ್ಬನಿದ್ದನು, ಇವನು ೧೬೭೫ ರಿಂದ ೧೬೭೭ ರ ವರೆಗೆ ವಿಜಾಪುರದ ವಜೀರನಾಗಿದ್ದನು. ಮಿರಜ ಮತ್ತು ಬಂಕಾಪುರ ಇವು ಇವನ ಮುಖ್ಯ ಜಹಗೀರುಗಳಿದ್ದವು. ಆದವಾನಿಯ ಜಹಗೀರದಾರನಾದ ಮಸವೂದಖಾನನ ಮಗಳೊಡನೆ ಅಬ್ದುಲ ಕರೀಮನ ಲಗ್ನವಾದದ್ದರಿಂದ ರಾಜಧಾನಿಯಲ್ಲಿ ಅಬಿಸೀನಿಯನ್ ಪಕ್ಷವು ಇವನನ್ನು ಎತ್ತಿ ಹಿಡಿಯಿತು.

ಸಿಕಂದರ ಆದಿಲಶಹನು ಅಬ್ದುಲ ಕರೀಮ ಬಹಲೋಲಖಾನನಿಗೆ ಸನದು ಹಾಕಿಕೊಟ್ಟು ಬಂಕಾಪುರ ಜಹಗೀರಿನ ೨೨ ಮಹಲುಗಳನ್ನು ಬಿಟ್ಟುಕೊಟ್ಟನು. ಇಲ್ಲಿಂದಲೇ ಸವಣೂರ ಸಂಸ್ಥಾನದ ಉದಯವಾಯಿತೆಂದು ಹೇಳಬಹುದು.

೧೬೮೬ ರಲ್ಲಿ ವಿಜಾಪುರದ ಪತನಾನಂತರ ಅಬ್ದುಲ ಕರೀಮಖಾನನ ಮಗ ಅಬ್ದುಲ ರಾವೂಫಖಾನನು ಔರಂಗಜೇಬನ ನೌಕರಿಯನ್ನು ಸ್ವೀಕರಿಸಿದನು. ಔರಂಗಜೇಬನು ರಾವೂಫಖಾನನಿಗೆ ೭೦೦೦ ಜಾತ ಹಾಗೂ ೬೦೦೦ ಸವಾರಿನ ಮನಸಬದಾರನನ್ನಾಗಿ ಮಾಡಿ 'ದಿಲೇರಖಾನ ಬಹಾದೂರ ದಿಲೇರಜಂಗ' ಎಂಬ ಪದವಿಯನ್ನು ಪ್ರಧಾನ ಮಾಡಿದನು. ೨ ಕೋಟಿ ೪೦ ಸಾವಿರ ರೂಪಾಯಿಗಳ ಉತ್ಪನ್ನವಿದ್ದ ೨೨ ಮಹಲುಗಳನ್ನು ಹಾಗೂ ಕಿಲ್ಲೆ ಸರಕಾರ ಬಂಕಾಪುರ, ಸರಕಾರ ಆಜಮನಗರ (ಬೆಳಗಾವಿ) ಮತ್ತು ಸರಕಾರ ತೊರಗಲ್ಲುಗಳನ್ನು ಒಳಗೊಂಡ ಜಹಗೀರನ್ನು ಮುಂದುವರಿಸಿದನು.

ಕೆಲವೇ ದಿನಗಳಲ್ಲಿ ಕಿತ್ತೂರ, ನವಲಗುಂದ, ಶಿರಹಟ್ಟಿ, ಹಾವನೂರ, ಡಂಬಳ ಮತ್ತು ಇತರ ಬಂಡುಗಾರ ಜಮೀನುದಾರರನ್ನು ಹತ್ತಿಕ್ಕಲು ರಾವೂಫಖಾನನನ್ನು ಕಳಿಸಲಾಯಿತು. ೧೭೨೯ ರಲ್ಲಿ ಅಬ್ದುಲ ರಾವೂಫಖಾನನ ಮರಣಾನಂತರ ಅವನ ಮಕ್ಕಳಲ್ಲಿ ಅಧಿಕಾರಕ್ಕಾಗಿ ಒಳಜಗಳಗಳಾಗಿ ಕೊನೆಗೆ ಅಬ್ದುಲ ಗಫಾರಖಾನನು ನವಾಬನಾದನು. ಇವನು ನವಾಬನಾದಾಗ ಮರಾಠೆಯರು

ಬಾಳಾಜಿ ವಿಶ್ವನಾಥ ಪೇಶವೆಯ ನೇತೃತ್ವದಲ್ಲಿ ತಮ್ಮ ರಾಜ್ಯ ವಿಸ್ತಾರದಲ್ಲಿ ತೊಡಗಿದ್ದರು. ಗಫಾರಖಾನನಿಗೆ ಮರಾಠೆಯರ ಸರದಾರ ರಾಸ್ತೆಯ ದಾಳಿಯನ್ನು ಎದುರಿಸ ಬೇಕಾಯಿತು. ರಾಸ್ತೆಗೆ ಮಿಶ್ರೀಕೋಟೆಯನ್ನು ಕೊಟ್ಟು ತಿರುಗಿ ಕಳಿಸಿದನು. ಒಟ್ಟಿನ ಮೇಲೆ ಅಬ್ದುಲ ಗಫಾರನು ಸಂಸ್ಥಾನದ ಬಹುಭಾಗವನ್ನು ಸಂರಕ್ಷಿಸಿ ನೆಟ್ಟಗೆ ಆಳಿದನು. ಅವನು ಮರಣಹೊಂದಿದಾಗ ಅವನ ಮಗ ಅಬ್ದುಲ ಮಜೀದಖಾನನಿಗೆ ವಾಯವ್ಯ ಕಡೆಯ ಒಂದು ಸಣ್ಣ ತುಂಡನ್ನು ಬಿಟ್ಟರೆ ಕೃಷ್ಣಾ-ತುಂಗಭದ್ರೆಯ ನಡುವಿನ ಉಳಿದ ಸಾಧಾರಣ ಎಲ್ಲ ಪ್ರದೇಶವು ಸಿಕ್ಕಿತು. ಉತ್ತರದಲ್ಲಿ ಪಾಚ್ಛಾಪುರದಿಂದ ಹಿಡಿದು ಬೀಳಗಿಯವರೆಗೆ, ದಕ್ಷಿಣದಲ್ಲಿ ಮಾಸೂರಿನಿಂದ ಹರಿಹರದವರೆಗೆ, ಪೂರ್ವದಲ್ಲಿ ಕೊಪ್ಪಳ ದಿಂದ ಕನಕಗಿರಿಯವರೆಗೆ ಹಾಗೂ ಪಶ್ಚಿಮಕ್ಕೆ ಬೆಳಗಾವಿ ಯಿಂದ ಹಿಡಿದು ತೇಗೂರ, ಮಿಶ್ರೀಕೋಟೆ ಮತ್ತು ನಿಡಸಂಗಿಯ ಮೇಲಿಂದ ಹಾನಗಲ್ಲಿನವರೆಗೆ ಇವನ ಸಂಸ್ಥಾನವು ವಿಸ್ತಾರವಾಗಿತ್ತು.



ನವಾಬನ ಕಾಲದಲ್ಲಿಯ ಸವಣೂರ ನಗರದ ನಕ್ಷೆ

ಸೂಚಿ : 1. ಹೆಬ್ಬಾಗಿಲು, 2. ಅಗಡಿ ದರವಾಜ, 3. ದಿಲ್ಲಿ ದಗವಾಜ, 4. ಲಕ್ಷ್ಮೇಶ್ವರ ಬಾಗಿಲು
5. ಫತೇ ದರವಾಜ, 6. ಕೆರೆಬಾಗಿಲು, 7. ಮೋತಿ ತಲಾವ, 8. ಹಿರಾಮಣ ದಂಡಿ
9. ಹೊರಗಿನ ಗೋಡೆ, 10. ಬಂಕಾಪುರ ಬಾಗಿಲು

(ರೇಖಾಚಿತ್ರ : ಮೂಲ/ಲೇಖಕರದು ; ನಕಲು ರಚನೆ : ಶ್ರೀ ಅ. ಲ. ನರಸಿಂಹನ್)

ಅಬ್ದುಲ ಮಜೀದಖಾನನು ಬಹು ಬುದ್ಧಿವಂತನಿದ್ದು ಗುಣಸಂಪನ್ನನಾಗಿದ್ದನು. ಪ್ರಜಾಜನರ ಮನದಲ್ಲಿ ಇವನಿಗೆ ಆದರದ ಸ್ಥಾನವಿದ್ದಿತು. ಇವನ ಕಾಲದಲ್ಲಿ ಆಲೀಖಾನ ದಿವಾಣನು ಬಹಳ ಪ್ರಸಿದ್ಧನಿದ್ದನು. ಇವನು ಮುಘಲರ ಆಳ್ವಿಕೆಯಲ್ಲಿಯ ತೋಡರಮಲ್ಲನಂತೆ ಕೆಳದಿ ಶಿವಪ್ಪನಾಯಕನಂತೆ,ಅಹಮದನಗರದ ಮಲಿಕಅಂಬರನಂತೆ ಭೂಕಂದಾಯದ ವ್ಯವಸ್ಥೆಯನ್ನು ಸರಿಪಡಿಸಿದನು. ವಿಜಯನಗರ ಕಾಲದಲ್ಲಿ ಈ ಪ್ರದೇಶದಲ್ಲಿ ಗೊತ್ತುಪಡಿಸಿದ ಭೂಕಂದಾಯದ ಪ್ರಮಾಣಿತ ದರಕ್ಕೆ (standrad land assessment) ರಾಯರೇಖೆ ಇಲ್ಲವೆ ಹೊಲಮಾರ ಎನ್ನುತ್ತಿದ್ದರು. (ವಿಜಯನಗರದ ಇತರ ಕೆಲವು ಭಾಗಗಳಲ್ಲಿಯೂ ರಾಯರೇಖೆಯು ಪ್ರಚಲಿತವಿತ್ತು). ವಿಜಾಪುರದ ೨ನೆಯ ಅಲೀ ಆದಿಲಶಹನ ಕಾಲದಲ್ಲಿ ರಾಯರೇಖೆಯಲ್ಲಿ ಸುಧಾರಣೆಮಾಡಿ ಪ್ರಮಾಣಿತ ಭೂಕಂದಾಯ ದರಕ್ಕೆ 'ರಕಮ್' ಎಂದು ಕರೆದರು. ಕಾಲಾಂತರದಲ್ಲಿ ಈ ರಕಮಿನ ಜೊತೆಗೆ ಎಷ್ಟೋ ಕರಗಳನ್ನೂ ಪಟ್ಟಿಗಳನ್ನೂ ಹೇರಲಾಯಿತು. ಇವೆಲ್ಲವುಗಳನ್ನೂ ಸರಿಪಡಿಸಿ ಅಲೀಖಾನ ದಿವಾಣನು ಒಂದು ಹೊಸ ಪ್ರಮಾಣಿತ ಭೂಕಂದಾಯದರವನ್ನು ಗೊತ್ತುಪಡಿಸಿದನು. ಇದಕ್ಕೆ 'ಐನಾತಿ' ಎನ್ನುತ್ತಿದ್ದರು. ಪಡಬಿದ್ದ ಜಮೀನುಗಳನ್ನು ಹದಮಾಡಿ ಬಿತ್ತಿ ಸಾಗುವಳಿ ಮಾಡಲು ಪ್ರೋತ್ಸಾಹ ಕೊಟ್ಟನು. ಇಂಥ ಜಮೀನುಗಳನ್ನು ರೈತರಿಗೆ ಲಾವಣಿಗೆ ಕೊಟ್ಟು ಅವರ ಕಡೆಯಿಂದ ಕಡಿಮೆ ಕಂದಾಯವನ್ನು ಅಂದರೆ ಒಂದು ಮಾರು ಭೂಮಿಗೆ ಒಂದು ಸೇರು ಧಾನ್ಯ ಈ ದರದಂತೆ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದನು. ಒಂದು ಮಾರು ಜಮೀನಿನಲ್ಲಿ ಎಂಟು ಕೂರಗಿಗಳೂ ಒಂದು ಕೂರಗಿಯಲ್ಲಿ ನಾಲ್ಕೂವರೆ ಬೀಘಾಗಳೂ ಅಂದರೆ ಒಟ್ಟು ಒಂದು ಮಾರಿನಲ್ಲಿ ಮೂವತ್ತಾರು ಬೀಘಾಗಳೂ ಇದ್ದವು. ಈ ಆಕರ್ಷಣೆಯಿಂದ ರೈತರು ಹೆಚ್ಚು ಹೆಚ್ಚು ಜಮೀನುಗಳನ್ನು ಹದಮಾಡಿ ಸಾಗುವಳಿ ಮಾಡಿ ಸಂಸ್ಥಾನದ ಕಂದಾಯದ ಉತ್ಪನ್ನವನ್ನು ಬೆಳೆಸಿದರು.

ಅಬ್ದುಲ ಮಜೀದಖಾನನು ಸವಣೂರ ನವಾಬರಲ್ಲೆಲ್ಲ ಅಗ್ರಗಣ್ಯನು. ಇವನೇ ಹೊಸ ಹುಬ್ಬಳ್ಳಿಯ ಅಂದರೆ ಮಜೀದಪುರದ ಸ್ಥಾಪನೆಯನ್ನು ಮಾಡಿದನು. ದೊಡ್ಡ ದೊಡ್ಡ ಮನೆಗಳನ್ನೂ ರಸ್ತೆಯ ಎರಡೂ ಕಡೆ ಅಂಗಡಿಗಳನ್ನೂ ಕಟ್ಟಿಸಿ ಪೇಟೆಯನ್ನು ನಿರ್ಮಿಸಿದನು. ಇದೆಲ್ಲವನ್ನೂ ಒಂದು ನಕ್ಷೆಯನ್ನು (Plan) ತಯಾರಿಸಿ ಅದರಂತೆ ಕಟ್ಟಿಸಿದನು. ಆ ಮೇಲೆ ಎಷ್ಟೋ ವ್ಯವಸಾಯಗಾರರೂ ಅಂಗಡಿಗಾರರೂ ಸಾವಕಾರರೂ ಬಂದು ತಮ್ಮ ತಮ್ಮ ಮನೆ ಅಂಗಡಿಗಳನ್ನು ಕಟ್ಟಿ ಇಲ್ಲಿಯೇ ಇರಹತ್ತಿದರು. ಇಲ್ಲಿಯ ಸಾವಕಾರರು ದೊಡ್ಡ ಪ್ರಮಾಣದಲ್ಲಿ ಹುಂಡಿಯ ವ್ಯವಹಾರವನ್ನೂ ಮಾಡುತ್ತಿದ್ದರು. ಮಜೀದಪುರ ಇಲ್ಲವೆ ಹೊಸ ಹುಬ್ಬಳ್ಳಿಯ ಜನಸಂಖ್ಯೆಯು ಉತ್ತರೋತ್ತರ ಬೆಳೆಯುತ್ತ ಹೋಯಿತು. (ದಿಲೇರ ಜಂಗೀ, ಪುಟ ೨೩–೨೪).

ಅಬ್ದುಲ ಮಜೀದಖಾನನು ಸವಣೂರ ಪಟ್ಟಣದ ಪೂರ್ವಕ್ಕೆ ಒಂದು ದೊಡ್ಡ ತಟಾಕವನ್ನು ನಿರ್ಮಿಸಿದನು. ಈ ಕೆರೆಯ ಸಲುವಾಗಿ ೬೪,೦೦೦ ರೂಪಾಯಿಗಳನ್ನು ವೆಚ್ಚಮಾಡಿದನು. ಅದರಲ್ಲಿಯ ನೀರು ಅತ್ಯಂತ ಸಿಹಿ ಮತ್ತು ಸ್ವಚ್ಛ ಇದ್ದದ್ದರಿಂದ ಅದಕ್ಕೆ 'ಮೋತೀ ತಲಾವ' (ಮುತ್ತಿನ ಕೆರೆ) ಎಂದು ಹೆಸರಿಟ್ಟರು. ಕೆರೆಯ ದಕ್ಷಿಣಕ್ಕೆ ನೂತನ ತೋಟವನ್ನು (ನವಾಬಾಗ) ನಿರ್ಮಿಸಿದನು. (ದಿಲೇರ ಜಂಗೀ, ಪುಟ ೨೩–೨೪).

೧೭೪೫ ರ ಸುಮಾರಕ್ಕೆ ಸವಣೂರ ಪ್ರದೇಶದಲ್ಲಿ ಬಾಳಾಜೀ ಬಾಜೀರಾವ ಪೇಶವೆ, ಕೊಲ್ಹಾಪುರದ ಛತ್ರಪತಿ ಸಂಭಾಜಿ ಹಾಗೂ ಹೈದರಾಬಾದಿನ ನಿಜಾಮ ಈ ಮೂವರಲ್ಲಿ ಕರ್ನಾಟಕದ ಮೇಲೆ ಪ್ರಭುತ್ವ ಪಡೆದುಕೊಳ್ಳುವದಕೋಸ್ಕರ ಸಂಘರ್ಷವು ನಡೆದಿತ್ತು. ಸವಣೂರಿನ ನವಾಬ ಮಜೀದಖಾನನು ಕೊಲ್ಹಾಪುರದ ೨ನೆಯ ಸಂಭಾಜಿಯ ಸಹಾಯದಿಂದ ಈ ಪ್ರದೇಶದ ಮೇಲೆ ಆಕ್ರಮಣ ಮಾಡುವ ಬಾಳಾಜೀ ಬಾಜೀರಾಯನ ಸಾಹಸವನ್ನು ತಡೆಹಿಡಿದನು. ಪೇಶವೆ ಮತ್ತು ಸವಣೂರ ನವಾಬನ ನಡುವಿನ ಕಲಹವು ಬೆಳೆಯುತ್ತ ಹೋಯಿತು. ಕೊನೆಗೆ ೧೭೪೭ ರಲ್ಲಿ ಮಜೀದಖಾನನಿಗೆ ಪೇಶವೆಯ ಸಂಗಡ ಒಪ್ಪಂದವನ್ನು ಮಾಡಬೇಕಾಯಿತು. ಈ ಒಪ್ಪಂದದ ಪ್ರಕಾರ ಅಬ್ದುಲ ಮಜೀದಖಾನನು ಬಾಳಾಜೀ ಬಾಜೀರಾವ ಪೇಶವೆಗೆ ೩೬ ಮಹಲುಗಳನ್ನು ಬಿಟ್ಟುಕೊಟ್ಟನು. ಈ ಮಹಲುಗಳು ಯಾವವೆಂದರೆ ಪರಗಣೆ ಬಾಗಲಕೋಟ ಬೀಳಗಿ, ಪರಗಣೆ ಆಜಮನಗರ ಬೆಳಗಾವ ಶಹಾಪೂರ, ಕರ್ಯಾತ ತೇಗೂರ ತಡಕೋಡ, ಹಿಸಾರ ಧಾರವಾಡ, ಪರಗಣೆ ಲಕ್ಷ್ಮೇಶ್ವರ, ಪರಗಣೆ ಜಾಲೀಹಾಳ ಬದಾಮಿ,

ಪರಗಣೆ ಮುಳಗುಂದ, ಪರಗಣೆ ರಾಯರ ಹುಬ್ಬಳ್ಳಿ, ಹಿಸಾರ ಹರಿಹರ, ಪರಗಣೆ ಅನವಾಲ, ಪರಗಣೆ ಯಾದವಾಡ, ಪರಗಣೆ ಮುರಗೋಡ, ಪರಗಣೆ ಪಾಚ್ಛಾಪುರ, ಪರಗಣೆ ಸಂಪಗಾವ ಕಿತ್ತೂರ, ಕಸಬೆ ನರೇಂದ್ರ, ಹಿಸಾರ ಹಲ್ಯಾಳ, ಪರಗಣೆ ನವಲಗುಂದ, ಪರಗಣೆ ಗುತ್ತಲ ಮುಂತಾದವುಗಳು, ಕರ್ಯಾತ ಅಣ್ಣೀಗೇರಿ, ಕರ್ಯಾತ ದೇವರ ಹುಬ್ಬಳ್ಳಿ, ಸೂಳಬ್ಯಾಹಟ್ಟಿ, ಪರಗಣೆ ಘನದುರ್ಗ, ಪರಗಣೆ ಬನ್ನೂರ, ಪರಗಣೆ ಸತ್ತೀಗೇರಿ, ಪರಗಣೆ ಗೋಕಾಕ, ತಾಲುಕ ಬೆಟಗೇರಿ, ಕರ್ಯಾತ ಅಮ್ಮಿನಭಾವಿ, ಕರ್ಯಾತ ಯಕ್ಕುಂಡಿ, ಪರಗಣೆ ಗದಗ, ಪರಗಣೆ ರಟ್ಟೀಹಳ್ಳಿ, ಕರ್ಯಾತ ಜ್ಯಾಡರಹೆಬಳಿ, ರಾವಮುಗುದ, ಪರಗಣೆ ಕೆರೂರ ಸಲಾಬತಖಾನ, ಪರಗಣೆ ಲೋಕಾಪೂರ, ಪರಗಣೆ ಕಡಕೋಳ, ತರ್ಫ ಕೊಣ್ಣೂರ ಮುಂತಾದವುಗಳು.

ಮಜೀದಖಾನನ ಹತ್ತಿರ ಈ ಕೆಳಗಿನ ೨೨ ಮಹಲಗಳೂ ಮೂರು ಸರಕಾರಗಳೂ ಉಳಿದವು: ಪರಗಣೆ ಕುಂದಗೋಳ, ಪರಗಣೆ ಕಾರಡಗಿ ಕಮುತರಾಣ, ಪರಗಣೆ ಮಿಶ್ರೀಕೋಟಿ, ಸಮುತ ಕಲಘಟಗಿ, ಸಮುತ ಬೊಮ್ಮೀಗಟ್ಟಿ, ಸಮುತ ತಡಸ, ಸಮುತ ಹಿರೇಕೆರೂರ, ಸಮುತ ಚಿಕ್ಕೆರೂರ, ಸಮುತ ಕೋಡ, ಸಮುತ ಕಾಗಿನೆಲ್ಲಿ, ರಾಣೆಬೆನ್ನೂರ, ಸಮುತ ನಿಡಸಂಗಿ, ಸಮುತ ಶಿಗ್ಗಾವಿ, ಪರಗಣೆ ಹಾನಗಲ, ಪರಗಣೆ ಬಂಕಾಪುರ ಮುಂ., ಪರಗಣೆ ತಿಳವಳ್ಳಿ, ಪರಗಣೆ ಆಡೂರ, ಕುಪ್ಪೇಲೂರ ಮುಂ., ಸಮುತ ಮಾಸೂರ, ಪೇರ ಕಸಬೆ ಹಾವೇರಿ, ಪೇಠ ಹಾಂವಸಭಾವಿ, ದೇಹಾತ ಕಿಲ್ಲೆ ಐರಣಿ, ಸರಕಾರ ಬಂಕಾಪುರ, ಸರಕಾರ ತೊರಗಲ ಮತ್ತು ಸರಕಾರ ಆಜಮನಗರ; [ದಿಲೇರಜಂಗೀ, ಪುಟ ೧೮-೨೧] ತಹವ ಕರಾರ ಮದಾರ (ಮುಂಬೈ, ೧೯೧೪) ಪುಟ ೮೬-೮೭, ಪೇಶವೆಯ ಸೈನ್ಯವು ಸ್ವಾದಿಗೆ ಹೋಗುವಾಗ ಇಲ್ಲವೆ ಬಿದನೂರ ಹಾಗೂ ದಕ್ಷಿಣ ಹಿಂದುಸ್ತಾನಕ್ಕೆ ಹೋಗುವಾಗ ಸವಣೂರ ಪ್ರದೇಶದಲ್ಲಿ ತೊಂದರೆ ಕೊಡಬಾರದೆಂದೂ ಕರಾರ ಮಾಡಲಾಯಿತು.

ಪೇಶವೆಯು ತಿರುಗಿ ಹೋದಮೇಲೆ ಸವಣೂರ ನವಾಬನು ಕಳೆದುಕೊಂಡ ಪ್ರದೇಶವನ್ನೂ ರಾಜಸತ್ತೆಯನ್ನೂ ಮರಳಿ ಪಡೆಯುವ ಪ್ರಯತ್ನ ಮಾಡಿದನು. ಇದರಿಂದ ಪೇಶವೆ ಮತ್ತು ನವಾಬನ ನಡುವಿನ ಕಲಹ ತೀವ್ರವಾಗಹತ್ತಿತು. ಅಬ್ದುಲ ಮಜೀದಖಾನನು ಮರಣ ಹೊಂದಿದ ಮೇಲೆ ಅವನ ಮಗ ಅಬ್ದುಲ ಹಕೀಮಖಾನನು ನವಾಬನಾದನು. ಇವನೂ ತನ್ನ ತಂದೆಯ ಧೋರಣೆಯನ್ನು ಮುಂದುವರೆಸಿದ್ದರಿಂದ ಪೇಶವೆ ಮತ್ತು ಇವನ ನಡುವೆ ಕಾಳಗವಾಗಿ ಪೇಶವೆಯ ವಿಜಯವಾಯಿತು. ೧೭೫೬ರಲ್ಲಿ ಮತ್ತೊಂದು ಒಪ್ಪಂದವಾಗಿ ಹಕೀಮಖಾನನು ಪೇಶವೆಗೆ ಎಷ್ಟೋ ಮಹಲುಗಳನ್ನು ಬಿಟ್ಟುಕೊಟ್ಟನು. ಇವುಗಳಲ್ಲಿ ೧೭೪೭ನೆಯ ಒಪ್ಪಂದದಲ್ಲಿ ಬಿಟ್ಟುಕೊಟ್ಟ ಹಾಗೂ ನಂತರ ಮರಳಿ ಪಡೆದ ಮಹಲುಗಳೂ ಇದ್ದವು. ಬಾಳಾಜೀ ಬಾಜೀರಾವ ಪೇಶವೆಗೆ ಬಿಟ್ಟುಕೊಟ್ಟ ಮಹಲುಗಳು ಈ ಕೆಳಗಿನಂತೆ ಇದ್ದವು : ಸರಕಾರ ಬಂಕಾಪುರದಲ್ಲಿಯ ಪರಗಣೆ ಕುಂದಗೋಳ, ಪರಗಣೆ ರಾಯರ ಹುಬ್ಬಳ್ಳಿ, ಪೇಠ ಮಜೀದಪೂರ, ಪರಗಣೆ ಮಿಶ್ರೀಕೋಟಿ, ಸಮುತ ತಡಸ, ಅಡವಿಸೋಮಾಪೂರ, ಸಮುತ ಕಲಘಟಗಿ, ಬೊಮ್ಮಿಗಟ್ಟಿಯ ಜೊತೆಗೆ ನೆಲಿಹರವಿ, ಪರಗಣೆ ಗದಗ, ಸರದೇಶಗತ ಧಾರವಾಡ, ಪರಗಣೆ ಲಕ್ಷ್ಮೇಶ್ವರ ಮತ್ತು ಸರವಾಡ ಸರದೇಶಗತ. ಸರಕಾರ ತೋರಗಲ್ಲಿನಲ್ಲಿಯ ಪರಗಣೆ ಮುಳಗುಂದ, ಕಸಬೆ ಬ್ಯಾಹಟ್ಟಿ, ಉಪ್ಪಿನ ಬೆಟಗೇರಿ, ಕಸಬೆ ಅಮ್ಮಿನಭಾವಿ, ತರ್ಫ ತಡಕೋಡ, ತರ್ಫ ಶಿರೋಳ, ಕಸಬೆ ಕೋಳೀವಾಡ, ಸತ್ತೀಗೇರಿ ಹಾಗೂ ಮುರಗೋಡ, ತರ್ಫ ಕೊಣ್ಣೂರ, ತರ್ಫ ಯಕ್ಕುಂಡಿ, ತರ್ಫ ಅಸುಂಡಿಯ ಜೊತೆಗೆ ಕರೀಕಟ್ಟಿ, ಕೋಟಿ ಹೂಲಿ, ಕಸಬೆ ದೇವರ ಹುಬ್ಬಳ್ಳಿ, ಪರಗಣೆ ಬಾಗಲಕೋಟೆಯ ಜೊತೆಗೆ ಬೀಳಗಿ, ಮುತ್ತೀಗಟ್ಟಿಯ ಜೊತೆಗೆ ಕಟಕೇರಿ, ತಲವಾಯಿ ಮುಂ., ಜ್ಯಾಡರಹೆಬ್ಬಳ್ಳಿ, ತರ್ಫ ನರೇಂದ್ರ, ತರ್ಫ ತೇಗೂರ ಮತ್ತು ಪರಗಣೆ ನವಲಗುಂದ. ಸರಕಾರ ಆಜಮನಗರದಲ್ಲಿಯ ಪರಗಣೆ ಗೋಕಾಕ, ಪರಗಣೆ ಸಂಪಗಾವ, ಪರಗಣೆ ಪಾದಶಾಪೂರ ಮತ್ತು ಪರಗಣೆ ಆಜಮನಗರ. ಇವೆಲ್ಲ ಮಹಲುಗಳ ಉತ್ಪನ್ನವು ಎಂಟು ಲಕ್ಷ ಇಪ್ಪತ್ತು ಮೂರು ಸಾವಿರದ ಒಂಬೈನೂರ ಇಪ್ಪತ್ತಾರೂವರೆ (೮,೨೩,೯೨೬ ॥) ರೂಪಾಯಿಗಳಷ್ಟಿತ್ತು.

ಇದಲ್ಲದೆ ನವಾಬನು ಪೇಶವೆಗೆ ೧೧ ಲಕ್ಷ ರೂಪಾಯಿಗಳ ಕಾಣಿಕೆಯನ್ನು ಸಲ್ಲಿಸಬೇಕೆಂದು ಕರಾರಾಯಿತು. ಈ ಹಣದಲ್ಲಿಯ ೩,೧೧,೦೦೦

ರೂಪಾಯಿಗಳನ್ನು ನಗದಿನಲ್ಲಿಯಾಗಲೀ ಇಲ್ಲವೇ ವಜ್ರ, ಆನೆ ಅಥವಾ ಬೆಲೆಯುಳ್ಳ ವಸ್ತ್ರಗಳ ಕಾಣಿಕೆಯ ರೂಪ ದಲ್ಲಾಗಲೀ ತಕ್ಷಣ ಕೊಡಬೇಕು. ಉಳಿದ ಹಣದಲ್ಲಿ ೪,೯೦,೦೦೦ ರೂ.ಗಳನ್ನು ಹದಿನೈದು ದಿನಗಳಲ್ಲಿ ಕೊಡಬೇಕು. ಉಳಿದ ೩,೦೦,೦೦೦ ರೂ.ಗಳ ಸಲುವಾಗಿ ಬಂಕಾಪುರ ಕೋಟೆಯನ್ನು ಮಲ್ಹಾರರಾವ ಹೋಳಕರನ ಮುಖಾಂತರ ಪೇಶವೆ ಸರಕಾರದ ಹತ್ತರ ಒತ್ತೆ ಇಡಬೇಕು. ಕೋಟೆಯನ್ನು ತಿರುಗಿ ಪಡೆಯಬೇಕಾದರೆ ಒತ್ತೆಯ ಹಣವನ್ನು ಆರು ತಿಂಗಳ ಅವಧಿಯಲ್ಲಿ ತುಂಬಬೇಕು, ಇಲ್ಲದಿದ್ದರೆ ಪೇಶವೆ ಸರಕಾರದ ಕಡೆಗೆಯೇ ಆ ಕೋಟೆಯು ಹೋಗಬೇಕು.

ರಾಯರ ಹುಬ್ಬಳ್ಳಿಯ ಕೋಟೆ, ಕೆರೂರ ಕೋಟೆ ಮತ್ತು ಪರಗಣೆ, ಕಸಬೆ ಬೆಳಗಾವ ಮತ್ತು ಕೋಟೆ ಇವುಗಳನ್ನು ಪೇಶವೆಯು ತೆಗೆದುಕೊಳ್ಳಬೇಕು.

ಅಬ್ದುಲ ಹಕೀಮಖಾನನ ಹತ್ತಿರ ಸರಕಾರ ಬಂಕಾಪುರ ಪರಗಣೆಯಲ್ಲಿಯ ಕೆಳಗಿನ ಮಹಲುಗಳು ಉಳಿದವು : ಸಮತ ಕಾರಡಗಿ, ಸಮತ ನಿಡಸಂಗಿ, ಪರಗಣೆ ಹಾನಗಲ, ಹಿಸಾರ ಮಾಸೂರ, ಸಮತ ಚಿಕ್ಕೆರೂರ, ಪರಗಣೆ ಗುತ್ತಲ, ಪೇಠ ಹಾವೇರಿ, ಕುಪ್ಪೆಲೂರ, ಪೇಠ ಹಾಂವಸಭಾವಿ, ಹಲಗೇರಿ, ಗಂಗ್ಯಾಲೂರ, ಕಸಬೆ ಇಂಗಲಹಳ್ಳಿ, ಮೌಜೆ ಹಂಚಿನ ಹಾಳ, ನಾಗನೂರ, ದೊಡವಾಡ, ಸಮತ ಹಿರೇಕೆರೂರ, ಸಮತ ತಿಳವಳ್ಳಿ, ಪರಗಣೆ ರಾಣೆಬೆನ್ನೂರ, ಸಮತ ಕಾಗಿನೆಲ್ಲಿ, ನರೇಗಲ ಹಾಗೂ ಠಾಣೆ ಆಡೂರ, ಪರಗಣೆ ಶಿಗ್ಗಾವ, ಕಸಬೆ ಬಂಕಾಪುರ, ಸಮತ ಕೋಡ, ಐರಣಿ, ನಸವಿ, ಹಿರೇಗುಡೂರು, ಪರಗಣೆ, ಅಣ್ಣಿಗೇರಿ, ಕಿಲ್ಲೆ ಪರಸಗಡ ಮತ್ತು ಊರು, ಮೊರಬದಲ್ಲಿನ ಶಿರಕೋಳ, ಸೂಲ ಹಾಗೂ ಸ್ವಾದಿ. ಇವುಗಳಲ್ಲಿ ಗೋವಿನಕೊಪ್ಪವು ರಾಯರ ಹುಬ್ಬಳ್ಳಿ ಪರಗಣೆಯಲ್ಲಿಯೂ ತೊರಗಲ ಸರಕಾರದಲ್ಲಿಯೂ ಇತ್ತು. ಅದರಂತೆ ದೊಡವಾಡವು ಸಂಪಗಾವ ಪರಗಣೆಯಲ್ಲಿಯೂ ಆಜಮನಗರ ಸರಕಾರ ದಲ್ಲಿಯೂ ಇತ್ತು. ಒಟ್ಟು ಮೇಲೆ ಹೇಳಿದ ಮಹಾಲ, ಠಾಣೆ, ಕಸಬೆ ಹಾಗೂ ಊರು ಇವುಗಳಿಂದ ಎಂಟು ಲಕ್ಷ ಮೂವತ್ತು ಸಾವಿರದ ಅರವತ್ತೆಂಟು ರೂ. ಮತ್ತು ಹನ್ನೆರಡು ಆಣೆಯಷ್ಟು ವಾರ್ಷಿಕ ಉತ್ಪನ್ನವು ಬರುತ್ತಿತ್ತು.

ಹಳೆಯ ಜಹಗೀರರಾದ ಅಜೀಜ ಮಿಯಾ ಇವನಿಗೆ ರೂ. ೨೦,೮೦೦ ಹಾಗೂ ಅಹಮದಖಾನ ಪಲದ ಆಲೀಖಾನ ಇವನಿಗೆ ರೂ. ೫೦೦೦ ಮುಟ್ಟಬೇಕು. ರಟ್ಟೀಹಳ್ಳಿ ಜಹಗೀರಿನಿಂದ ರೂ. ೧೯,೦೦೦ ನವಾಬನಿಗೆ ಹೋಗಬೇಕು. ಮಾತ್ರ ಕಿಲ್ಲೆ ಬಂಕಾಪುರ ಜಹಗೀರಿನ ರೂ. ೧೧,೦೦೦ ಅಲ್ಲಿಯ ಬಾದಶಾಹೀ ಕಿಲ್ಲೇದಾರನಿಗೆ ಮುಟ್ಟಬೇಕು. ಹೀಗೆ ಕರಾರ ಆಯಿತು. (ದಿಲೇರ ಜಂಗೀ, ಪುಟ ೨೬-೩೧ ; ತಹವ ಕರಾರ ಮದಾರ, ಪುಟ ೮೮-೯೦).

೧೭೬೧ರಲ್ಲಿ ಪಾನಿಪತ್ ಯುದ್ಧವಾಗಿ ಅದರಲ್ಲಿ ಮರಾಠೆಯರು ಸೋತರು. ಇದರ ಲಾಭವನ್ನು ತೆಗೆದು ಕೊಂಡು ಹೈದರಅಲಿಯು ಸವಣೂರ ಸಂಸ್ಥಾನದಲ್ಲಿಯ ಹಾಗೂ ಸುತ್ತುಮುತ್ತಲಿನ ಪ್ರದೇಶವನ್ನು ಕೈವಶ ಮಾಡ ಲಾರಂಭಿಸಿದನು. ೧೭೬೪ರಲ್ಲಿ ಹೈದರಅಲಿಯು ನವಾಬನನ್ನು ಸೋಲಿಸಿ ಸ್ವಾದಿಯನ್ನು ಕಸಿದುಕೊಂಡನು. ಆದರೆ ಬೇಗನೇ ಮಾಧವರಾವ ಪೇಶವೆಯು ಹೈದರನನ್ನು ಹತ್ತಿಕ್ಕಿದನು. ೧೭೭೬ರಲ್ಲಿ ಹೈದರನು ಮತ್ತೆ ಸವ ಣೂರಿನ ಮೇಲೆ ದಂಡೆತ್ತಿಹೋಗಿ ಅದನ್ನು ಕೈವಶ ಮಾಡಿಕೊಂಡನು.

೧೭೭೯ರಲ್ಲಿ ಹಕೀಮಖಾನನ ಮಗ ಅಬ್ದುಲ ಖೈರಖಾನನಿಗೆ ಹೈದರನು ತನ್ನ ಮಗಳನ್ನು ಕೊಟ್ಟು ಲಗ್ನ ಮಾಡಿದ್ದರಿಂದ ಹಕೀಮಖಾನನು ಹೈದರನ ಬಳಗ ದವನಾದನು. ಹಕೀಮಖಾನನಿಗೆ ಬಾಗಲಕೋಟೆ ಮುಂತಾದ ಮಹಲುಗಳನ್ನು ತಿರುಗಿ ಕೊಡಲಾಯಿತು. ಇದೆಲ್ಲದರ ಬದಲಾಗಿ ನವಾಬನು ಹೈದರನ ಸಹಾಯ ಕ್ಕೆಂದು ೨೦೦೦ ಕುದುರೆಗಳನ್ನು ಇಡುವ ಕರಾರ ವಾಯಿತು.

೧೭೮೨ರಲ್ಲಿ ಹೈದರನು ಮರಣ ಹೊಂದಿದನು. ಸವಣೂರ ನವಾಬನ ಬಗ್ಗೆ ಹೈದರನ ಮಗ ಟೀಪೂವಿನ ಮತವು ನೆಟ್ಟಗಿದ್ದಿದ್ದಿಲ್ಲ. ಟೀಪೂ ಮತ್ತು ಹಕೀಮ ಖಾನನ ಸಂಬಂಧವು ಕೆಡುತ್ತ ಹೋದಂತೆ ಹಕೀಮಖಾನನು ಪೇಶವೆಯ ಸಹಾಯದ ಕಡೆ ಹೊರಳಿದನು. ಹಕೀಮ ಖಾನನು ಮರಾಠೆಯರ ಜೊತೆ ಕೂಡಿದ್ದನ್ನು ನೋಡಿ ಟೀಪೂ ಸವಣೂರಿಗೆ ದಾಳಿಯಿಟ್ಟನು. ಸವಣೂರನ್ನು ಕೈವಶ ಮಾಡಿಕೊಂಡು ನವಾಬನ ಎಲ್ಲ ಆಸ್ತಿಪಾಸ್ತಿಗಳಿಗೆ

ಕೊಳ್ಳೆ ಹೊಡೆದನು. ಆದರೆ ೧೭೮೭ರಲ್ಲಿ ಆದ ಗಜೇಂದ್ರಗಡದ ಒಪ್ಪಂದದ ನಂತರ ಟೀಪೂ ನವಾಬನಿಗೆ ಸವಣೂರನ್ನು ತಿರುಗಿಕೊಟ್ಟನು. ಆಮೇಲೆ ಅಬ್ದುಲ ಹಕೀಮಖಾನನು ಪುಣೆಗೆ ಹೋಗಿ ಪೇಶವೆ ಕಡೆಯಿಂದ ಪ್ರತಿ ತಿಂಗಳು ೧೦,೦೦೦ ರೂ.ಗಳ ನಿವೃತ್ತಿವೇತನ ಪಡೆಯುತ್ತ ಅಲ್ಲಿಯೇ ಇರಹತ್ತಿದನು.

ಹಕೀಮಖಾನನ ಹಿರಿಯ ಮಗ ತನ್ನ ಹೆಂಡತಿ ಯೊಡನೆ ಶ್ರೀರಂಗಪಟ್ಟಣದಲ್ಲಿಯೇ ಇದ್ದನು. ಆದ್ದರಿಂದ ಎರಡನೆಯ ಮಗನಾದ ಹುಸೇನ ಮಿಯಾನಿಗೆ ತಂದೆಯ ನಂತರ ನಿವೃತ್ತಿವೇತನವು ಸಿಗಲಾರಂಭಿಸಿತು. ಮೂರು ವರ್ಷಗಳ ನಂತರ ಅಬ್ದುಲ ಖೈರಖಾನನು ಸವಣೂರಿಗೆ ಬಂದು ಧೊಂಡೋಪಂತ ಗೋಖಲೆಯ ಸಹಾಯದಿಂದ ತನ್ನ ಹಕ್ಕುಗಳನ್ನು ಪಡೆದನು.

ಪೇಶವೆಯ ಕಡೆಯಿಂದ ನವಾಬನಿಗೆ ವೇತನವು ಪ್ರತಿ ತಿಂಗಳು ಸಿಗದೆ ಯಾವಾಗಾದರೊಮ್ಮೆ ಬರುತ್ತಿತ್ತು. ಆದ್ದರಿಂದ ನವಾಬನ ಆರ್ಥಿಕ ಸ್ಥಿತಿಯು ನೆಟ್ಟಗೆದ್ದಿದ್ದಿಲ್ಲ. ಶ್ರೀರಂಗಪಟ್ಟಣದ ಯುದ್ಧದ ನಂತರ ತಿರುಗಿ ಹೋಗುವ ಮುಂದೆ ಜನರಲ್ ವೆಲ್ಲಸ್ಲಿಯು ಇದನ್ನು ನೋಡಿ ಪ್ರತಿ ತಿಂಗಳು ಬರಬೇಕಾದ ವೇತನದ ಬದಲಾಗಿ ಅಷ್ಟೇ ಉತ್ಪನ್ನದ ಭೂಕಂದಾಯುವನ್ನು ಪೇಶವೆ ಸರಕಾರವು ಕೊಡಬೇಕೆಂದು ನಿರ್ಧರಿಸಿ ಆ ಪ್ರಕಾರ ಪೇಶವೆಗೆ ತಿಳಿಸಲು ನವಾಬನಿಗೆ ೪೮,೦೦೦ ರೂ.ಗಳ ವಾರ್ಷಿಕ 'ಕಮಾಲ' ಉತ್ಪನ್ನವಿರುವ ೨೫ ಹಳ್ಳಿಗಳನ್ನು ಬಿಟ್ಟು ಕೊಡ ಲಾಯಿತು. ಅವು ಯಾವುವೆಂದರೆ, ಕಸಬೆ ಸವಣೂರ, ತರ್ಫ ಕಬನೂರ, ಮಣಕಟ್ಟೆ, ಸುರಾಪಕಟ್ಟೆ (ಸುರಣಕಟ್ಟೆ), ಮೌಜೆ ಸಿದ್ದಾಪುರ, ಮೌಜೆ ಕಲೀವಾಳ, ಮೌಜೆ ಮಾದಾಪುರ, ಮೌಜೆ ಹೋತನಹಳ್ಳಿ, ಮೌಜೆ ಮಣ್ಣೂರ, ಮೌಜೆ ನಂದೀಹಳ್ಳಿ, ಮೌಜೆ ಬೇಕಿನಕಟ್ಟೆ, ತರ್ಫ ಬಸವನಕೊಪ್ಪ, ನಾಯಿಕೇರೂರ, ವಡ್ಡಿನಕೊಪ್ಪ, ಹೊನ್ನಿ ಕೊಪ್ಪ, ಡೊಂಬರ ಮತ್ತೂರ, ಮೌಜೆ ತೊರೂರ, ಮೌಜೆ ನೀರಲಕಟ್ಟೆ, ಮೌಜೆ ಹೂಲೀಕಟ್ಟೆ, ಮೌಜೆ ತೊಂಡೂರ, ಮೌಜೆ ಬೆಳೂರ, ಮೌಜೆ ಗಬ್ಬೂರ, ಮೌಜೆ ಚಂದಾಪುರ, ಮೌಜೆ ಮುಳಕೇರಿ ಹಾಗೂ ಮೌಜೆ ಎಕ್ಕೀಕೊಪ್ಪ. (ದಿಲೇರ ಜಂಗೀ, ಪುಟ ೬೭-೬೮). ಈ ೨೫ ಹಳ್ಳಿಗಳ ಉತ್ಪನ್ನವು ನಿಜವಾಗಿಯೂ ೪೮,೦೦೦ರೂ. ೧೫ ಆಣೆ ಇದ್ದು, ಅದರೊಳಗಿಂದ ಸವಣೂರ ಮತ್ತು ಉಳಿದ ಹಳ್ಳಿಗಳ ಜಕಾತ ಹಾಗೂ ಮೋಹತರ್ಫಾ ಇವುಗಳನ್ನು ಕಳೆದು ಉಳಿದ ಉತ್ಪನ್ನವು ನವಾಬನಿಗೆ ಮುಟ್ಟಬೇಕೆಂದು ಎರಡನೇ ಬಾಜೀರಾವ ಪೇಶವೆಯ ಆಜ್ಞಾಪತ್ರವು ೧೮೦೭ರಲ್ಲಿ ಹೊರಟಿತು. ಇವುಗಳ ಪೈಕಿ ಬಸವನಕೊಪ್ಪವನ್ನು ಹುಸೇನ ಮಿಯಾನಿಗೆ ಕೊಡ ಲಾಯಿತು.

ಅಬ್ದುಲ ಖೈರಖಾನರು ೧೮೨೭ರಲ್ಲಿ ಮಡಿದನಂತರ ಅವರ ಹಿರಿಯಮಗ ಅಬ್ದುಲ ಫಯಾಜಖಾನರು ನವಾಬ ರಾದರು. ಇವರು ಕೇವಲ ಎರಡೂವರೆ ತಿಂಗಳಲ್ಲಿಯೇ ಕಾಲವಾದದ್ದರಿಂದ ಇವರ ತಮ್ಮ ಮನವರಖಾನರು ನವಾಬ ಪದವನ್ನು ಸ್ವೀಕರಿಸಿದರು. ಬ್ರಿಟಿಹರ ಕಾಲದಲ್ಲಿ ಮನವರಖಾನ ನವಾಬರನ್ನು ಮೊದಲನೆಯ ತರಗತಿಯ ಸರದಾರರ ಯಾದಿಯಲ್ಲಿ ಇಡಲಾಯಿತು. ೧೮೩೪ರಲ್ಲಿ ಮನವರಖಾನರು ಮಡಿದಮೇಲೆ, ಅವರಿಗೆ ಗಂಡು ಮಕ್ಕಳಿಲ್ಲದ್ದರಿಂದ ಅವರ ತಮ್ಮ ಅಬ್ದುಲ ದಿಲೇರಖಾನ ದಿಲೇರ ಜಂಗ ಆವರು ಮಸನದವನ್ನೇರಿದರು. ಇವರು ಬಹಳ ಕಲಿತವರಿದ್ದು ಇವರ ಜೊತೆಗೆ ಸಂಬಂಧ ಬಂದವರ ಮೇಲ್ಲೆ ಇವರು ತಮ್ಮ ಪ್ರಭಾವವನ್ನು ಬೀರುತ್ತಿದ್ದರು. ೧೮೫೭ರಲ್ಲಿ ಇವರಿಗೆ ಬ್ರಿಟಿಶ್ ಸರಕಾರದಿಂದ ಮುಲಕಿ ಮತ್ತು ಫೌಜದಾರೀ ಅಧಿಕಾರಗಳನ್ನು ಕೊಡಲಾಯಿತು. ಮರಣ ದಂಡನೆಯನ್ನು ವಿಧಿಸುವ ಅಧಿಕಾರವೂ ಇವರಿಗಿತ್ತು. ೧೮೬೨ರಲ್ಲಿ ಮುಂಬೈಯಿಯ ವಿಧಾನ ಪರಿಷತ್ತಿನ (Bombay Legislative Council) ಸಭಾಸದರೆಂದು ಇವರನ್ನು ನೇಮಿಸಲಾಯಿತು. ಇವರು ತಮ್ಮ ಹಳ್ಳಿಗಳಲ್ಲಿಯ ಹೊಲದಳತೆಯನ್ನು ಮಾಡಿಸಿ ಭೂಕಂದಾಯ ಪದ್ಧತಿಯಲ್ಲಿ ಸುಧಾರಣೆ ಮಾಡಿದರು.

೧೮೬೨ರಲ್ಲಿ ಇವರು ಮರಣ ಹೊಂದಲು ಇವರ ಮಗ ಅಬ್ದುಲ ಖೈರಖಾನರು ನವಾಬರಾದರು. ಇವರ ನಂತರ ೧೮೬೮ರಲ್ಲಿ ಇವರ ಮಗ ೨ನೆಯ ಅಬ್ದುಲ ದಿಲೇರಖಾನರು ನವಾಬರಾದರು. ದಿಲೇರಖಾನರು ಬಹಳ ಚಿಕ್ಕವರಿದ್ದದ್ದರಿಂದ ಅವರ ಅಜ್ಜ ಮಹಮದ ಗೌಸಖಾನರ ಪಾಲಕತ್ವ (Guardianship) ದ ಕೆಳಗೆ ಅವರನ್ನು ಇಡಲಾಯಿತು. ಆಗ ಧಾರವಾಡದ ಕಲೆಕ್ಟರ ಮತ್ತು ಪೊಲಿಟಿಕಲ ಏಜೆಂಟರೇ ನವಾಬರ ಆಸ್ತಿಯ ವ್ಯವಸ್ಥೆಯನ್ನು ನೋಡುತ್ತಿದ್ದರು.

೨ನೆಯ ಅಬ್ದುಲ ದಿಲೇರಖಾನರ ನಿಧನಾನಂತರ ೧೮೮೫ರಲ್ಲಿ ಅಬ್ದುಲ ತಬ್ರೇಜಖಾನರು ನವಾಬರಾದರು. ಇವರ ಮಗ ೨ನೆಯ ಅಬ್ದುಲ ಮಜೀದಖಾನರು ಬಹು ಪ್ರಖ್ಯಾತವಾದ ನವಾಬರಾಗಿ ಹೋದರು. ೧೯೧೨ರಲ್ಲಿ ಇವರು ಅಧಿಕಾರಗ್ರಹಣ ಮಾಡಿದರು. ಇವರು ವಿದ್ಯಾವಂತರೂ ಕ್ರೀಡಾಪಟುಗಳೂ ಆಗಿದ್ದರು. ೧ನೆಯ ಮಹಾಯುದ್ಧದಲ್ಲಿ ಬ್ರಿಟಿಶರ ಕಡೆಯಿಂದ ಕಾದಿದರು. ತಮ್ಮ ಸಂಸ್ಥಾನವನ್ನು ಸುಧಾರಿಸಲು ಶ್ರಮಪಟ್ಟರು. ರೈತರಿಗೆ ವಿವಿಧ ಸೌಕರ್ಯಗಳನ್ನು ಒದಗಿಸಿಕೊಟ್ಟರು. ಶಿಕ್ಷಣಕ್ಕೆ ಉತ್ತೇಜನ ಕೊಟ್ಟರು. ೧ನೆಯ ಮಜೀದ ಖಾನರು ಕಟ್ಟಿಸಿದ ಮೋತೀ ತಲಾವ ಎಂಬ ಕೆರೆಯನ್ನು ನೂತನೀಕರಿಸಿದರು. ಇವರ ಕಾಲದಲ್ಲಿ ವ್ಯಾಪಾರೋದ್ಯೋಗಗಳು ಅಭಿವೃದ್ಧಿಗೊಂಡವು. ಸಂಸ್ಥಾನದ ಆದಾಯವು ಬೆಳೆಯಿತು. ನ್ಯಾಯದಾನದ ಯಂತ್ರಣೆಯು ಸುವ್ಯವಸ್ಥಿತವಾಗಿತ್ತು. ಒಟ್ಟಿನ ಮೇಲೆ ಹಳೆಯ ಸವಣೂರನ್ನು ಸುಧಾರಿಸಿ ಹೊಸ ಸವಣೂರನ್ನು ನಿರ್ಮಿಸಿದ ಶ್ರೇಯ ಇವರಿಗೆ ಸಲ್ಲುತ್ತದೆ. ಇವರ ಆಳಿಕೆಯಲ್ಲಿಯೇ ೧೯೪೮ರಲ್ಲಿ ಭಾರತದೊಳಗೆ ಸವಣೂರ ಸಂಸ್ಥಾನವು ವಿಲೀನವಾಯಿತು.

ಸವಣೂರ ನಗರ : ಸವಣೂರ ನಗರದ ಸ್ಥಾಪನೆಯನ್ನು ಅಬ್ದುಲ ರಾವೂಫಖಾನರು ಮಾಡಿದರು. ಇದರಲ್ಲಿ ಎಂಟು ಪೇಟೆಗಳನ್ನು ನಿರ್ಮಿಸಿದರು. ಅವು ಯಾವವೆಂದರೆ ದಲೇಲಪೂರ ಅಥವಾ ಲಷ್ಕರ ಬಾಜಾರ, ಗುರುವಾರ ಪೇಟೆ, ಮಂಗಳವಾರ ಪೇಟೆ, ರಹವಂತಪೂರ ಅಥವಾ ಶುಕ್ರವಾರ ಪೇಟೆ, ಕಸಬೆಯಲ್ಲಿಯ ಭಾಜೀಕಟ್ಟಾ ಅಥವಾ ಪಲ್ಯದ ಪೇಟೆ, ಶಹಾಬಾಜಾರ ಅಥವಾ ಹಳೇ ಪೇಟೆ, ಕೋರಿಪೇಟೆ ಮತ್ತು ಬುಧವಾರಪೇಟೆ. ಉನ್ನತವಾದ ಸೌಧಗಳನ್ನು ಕಟ್ಟಲಿಕ್ಕೆ ಜನರಿಗೆ ಅನುಮತಿಯನ್ನು ಕೊಟ್ಟರು. ಮನೆಗಳೂ ಕಟ್ಟಡಗಳೂ ನಿರ್ಮಾಣವಾಗ ಹತ್ತಿದವು. ನಗರದ ಜನಸಂಖ್ಯೆಯಲ್ಲಿ ವೃದ್ಧಿಯಾಗ ತೊಡಗಿತು. ಸವಣೂರ ನಗರಕ್ಕೆ ಕೋಟೆಯನ್ನು ಕಟ್ಟಿಸಲಾಯಿತು. ಅದಕ್ಕೆ ೯ ಬಾಗಿಲುಗಳು (ದರವಾಜೆಗಳು) ಇದ್ದವು. (ಇದರ ಜೊತೆಗೆ ಇದ್ದ ನಕ್ಷೆಯನ್ನು ನೋಡಿರಿ). ಉತ್ತರ ದಿಕ್ಕಿಗೆ ದಿಲ್ಲೀ ದರವಾಜಾ ಹಾಗೂ ಅಗಡಿ ದರವಾಜಾ ಇದ್ದು, ಪಶ್ಚಿಮಕ್ಕೆ ಫಾಟಕ ಅಂದರೆ ಹೆಬ್ಬಾಗಿಲು, ನೈಋುತ್ಯಕ್ಕೆ (ಅಥವಾ ಪಶ್ಚಿಮ ಕಡೆಗೆಯೇ) ಬಂಕಾಪುರ ಬಾಗಿಲು, ದಕ್ಷಿಣಕ್ಕೆ ಹಾವೇರಿ ದರವಾಜಾ ಇಲ್ಲವೆ ಹುರಳಿಕೊಪ್ಪಿ ಬಾಗಿಲು, ಆಗ್ನೇಯಕ್ಕೆ ಹಿರಾಮಣಿ ದಿಂಡೀ, ಪೂರ್ವಕ್ಕೆ ತಲಾವ ದರವಾಜಾ ಇಲ್ಲವೆ ಕೆರೆ ಬಾಗಿಲು ಹಾಗೂ ಫತೇ ದರವಾಜಾ, ಕೊನೆಯದಾಗಿ ಈಶಾನ್ಯಕ್ಕೆ ಲಕ್ಷ್ಮೇಶ್ವರ ದರವಾಜಾ ಇದ್ದವು. (ದಿಲೇರ ಜಂಗೀ, ಪುಟ ೧೮೩ ಹಾಗೂ ತಾರೀಖೇ ದಿಲೇರಜಂಗೀಯಲ್ಲಿಯ ನಕ್ಷೆ).

ಸವಣೂರ ನವಾಬರ ವಂಶಾವಳಿ

(ಅವಶ್ಯವಿದ್ದ ಹೆಸರುಗಳನ್ನಷ್ಟೇ ಕೊಟ್ಟಿದೆ)

- ೧. ರಗಟೇ ಬಹಲೋಲಖಾನ
  - ೨. ಅಬ್ದುಲ ರಹೀಮಖಾನ
    - ೩. ಅಬ್ದುಲ ಕರೀಮಖಾನ
      - ೪. ಅಬ್ದುಲ ರಾವೂಫಖಾನ
        - ೫. ಅಬ್ದುಲ ಫತ್ತೇಖಾನ
        - ೬. ಅಬ್ದುಲ ಮಹಮದಖಾನ
        - ೭. ಅಬ್ದುಲ ಗಫಾರಖಾನ
          - ೮. ಅಬ್ದುಲ ಮಜೀದಖಾನ
            - ೯. ಅಬ್ದುಲ ಹಕೀಮಖಾನ
              - ೧೧. ಅಬ್ದುಲ ಖೈರಖಾನ
                - ೧೨. ಅಬ್ದುಲ ಫಯಾಜಖಾನ
                - ೧೩. ಅಬ್ದುಲ ಮುನವರಖಾನ
                - ೧೪. ಅಬ್ದುಲ ದಿಲೇರಖಾನ
                  - ೧೫. ಅಬ್ದುಲ ಖೈರಖಾನ
                    - ೧೬. ಅಬ್ದುಲ ದಿಲೇರಖಾನ
              - ೧೦. ಅಬ್ದುಲ ಹುಸೇನಖಾನ
              - ಅಬ್ದುಲ ಅಹಮದ್‌ಖಾನ
              - ಅಬ್ದುಲ ಮಹಮದ್‌ಖಾನ
            - ಅಬ್ದುಲ ಕರೀಮಖಾನ
        - ಅಬ್ದುಲ ಸತ್ತಾರಖಾನ

ಎಚ್. ಎಸ್. ಗೋಪಾಲರಾಯ

ಬೈಲಕೋನೇನಹಳ್ಳಿ ಶಿಲಾಶಾಸನ

ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಮಾಚೋಹಳ್ಳಿಗೆ ಈಶಾನ್ಯ ಬೈಲಕೋನೇನಹಳ್ಳಿ ಗ್ರಾಮಕ್ಕೆ ಸೇರಿದ ಶ್ರೀ ಕೂನಪ್ಪನವರ ಜಮೀನಿನಲ್ಲಿರುವ ಶಿಲಾಶಾಸನದತ್ತ ನನ್ನ ಗಮನ ಸೆಳೆದವರು, ಕ. ವಿ. ಮಂಡಳಿಯ ಕನ್ನಡ ಘಟಕದಲ್ಲಿ ಕೆಲಸ ಮಾಡುತ್ತಿರುವ ಗೆಳೆಯ ಶ್ರೀ ಕೆ. ಎಂ. ಮುನಿಕೃಷ್ಣಪ್ಪ ಮತ್ತು ಶ್ರೀ ಕೃಷ್ಣ ಅವರು.

ಬಹುತೇಕ ಶಿಲಾಶಾಸನಗಳಿಗೆ ಅಂಟಿಕೊಂಡಿರುವಂತೆಯೇ, ಈ ಶಾಸನದ ಬಗೆಗೂ ಇರುವ ನಿಧಿ, ತಲೆಕೆಳಗಾಗಿ ನಿಂತು ಓದುವ, ತಲೆಯೊಡೆದು ಸಾಯುವ ಕತೆಗೆ ಹೆದರದೆ, ಶಾಸನದ ಪ್ರತಿಮಾಡಲು, ಅಭ್ಯಸಿಸಲು ಮಾಚೋಹಳ್ಳಿಯ ಯುವಗೆಳೆಯರ ತಂಡವೇ ಅಲ್ಲದೆ, ಶಾಸನವಿರುವ ಜಮೀನಿನ ಶ್ರೀ ಕೂನಪ್ಪನವರ ಕುಟುಂಬದವರ ನೆರವನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಎಲ್ಲ ಹಳ್ಳಿಗಳಲ್ಲೂ ಇಂತಹ ನೆರವು ದೊರೆತಾಗ ಶಾಸನಗಳ, ಐತಿಹಾಸಿಕ ಸ್ಮಾರಕಗಳ ರಕ್ಷಣೆಯ ಕಾರ್ಯ ಸುಲಭವಾಗುತ್ತದೆ.

ಶ್ರೀ ಕೂನಪ್ಪನವರ ಜಮೀನಿನಲ್ಲಿ ಪೂರ್ವಾಭಿಮುಖವಾಗಿ ನಿಲ್ಲಿಸಲ್ಪಟ್ಟಿರುವ, ಶಾಸನವಿರುವ ಕಣಶಿಲೆಯ ಚಪ್ಪಡಿಕಲ್ಲಿನ ಅಳತೆ : ಉದ್ದ ೧೦ ಅಡಿ, ಅಗಲ ೩ ಅಡಿ. ಇದರಲ್ಲಿ ಮೇಲ್ಭಾಗದಲ್ಲಿ ನಡುವೆ ಪೀಠದ ಮೇಲಿರುವ ಲಿಂಗ, ಎಡ ಅಂಚಿನಲ್ಲಿ ಚಂದ್ರ, ಎಡ ಮಧ್ಯೆ ಸರ್ಪ, ಬಲ ಮಧ್ಯೆ ಬಸವ, ಬಲ ಅಂಚಿನಲ್ಲಿ ಸೂರ್ಯರ ಕೊರೆದ ರೇಖಾಚಿತ್ರವಿದೆ. ರೇಖಾಚಿತ್ರಣದ ಕೆಳಗೆ ಕಲ್ಲಿನ ೬ ಅಡಿ ಉದ್ದ, ೭ ಅಡಿ ಅಗಲದ ಭಾಗದಲ್ಲಿ ೨೦ ಸಾಲಿನ ಶಾಸನವನ್ನು ಖಂಡರಿಸಲಾಗಿದೆ.

ಶಾಸನದ ಪಾಠ

೧. ವಿಭವ ಸಂವಚರದ ಚಯಿತ್ರ ಸು ೧೦ (ಸೋ)ಸ್ವಸ್ತಿ ಸಮಸ್ತ

೨. ಭುವನಾಸ್ರಯಂ ಶ್ರೀಮತು ಪ್ರತಾಪ ಚಕ್ರವರ್ತ್ತಿ ಹೊಯಿ

೩. ಸಣ ಶ್ರೀ ವೀರಬಲ್ಲಾಳ ದೇವರಸರು ಪಿತುವೀ ರಾಜ್ಯಮಾಳುವಲ್ಲಿ [x]

೪. ಶ್ರೀಮುಸು ಮುಹಾನಾಯಕ ಚ(ಯಿ) ಮೇದಿನಿ ಮನ್ನೆಯರ ಗಂಡ

೫. ಉಪ್ಪೂರ ಬಂಮೆಯ ನಾಯಕರು ಕುಕಲನಾಡನಾಳುತ ಇಙ[?] [x]

೬. ಬೊಂಮಯ ನಾಯಕರು ಕುಕಲನಾಡ ಪ್ರಭುಗಂ ಆ ನಾಡ ಹನುಗೂರ

೭. ಮಲಯಪ್ಪ ಗೋಪಗವಿಡ ಬೋಕಣ ಬಂಮುಪಾದಿ ಸಿರಿಯಕ ಪಿಡಾರಿಯ [x]

೮. ಸೆಟಿ ಮಲಪ್ಪ ಸೊಂಣೆಸೆಟಿ ತಾಮತದ ಬರಪದೆ ಬಿನ್ನಹಿಸಲಾಗಿ ದಯ [x]

೯. ವಿರಯನಾದಾನ ಹೂವ ಅಸಿ ಇಜಕಣ ಸೆಟಿಗಳೆ ಸಮಸ್ತ ಪ್ರಜೆ ಗಲುಡುಗಳು

೧೦. ಶ್ರೀಮತು ಕುಕಲನಾಡ ಪ್ರಭು ಕಿತ್ತನೆಲೆಯ ದೊಡನ ಗಲುಡರ ಮಕಳು ಗ

೧೧. ಉಡಪ್ಪ ಮಾರಪ್ಪ ಗಂಗಣ ಅಂಣನ ಹೊಂನಜನವರಿಗೆ ಕುಕಲನಾಡೊಳ ಗಣ ಮು

೧೨. ದುಗೆರೆಯನು ಸರ್ಬ್ಬಕೊಡುಗೆಯಾಗಿ ಚತುಸೀಮೆ ಸಹಿತವಾಗಿ ಅಲೂರ

೧೩. ಲು ತಪ್ಪಾಗಿಸೆ ವೀಳೆಯ ಉಂಡಿಗೆ ಆಉದೊಂದು ಅಪರಾಧಊ ಎ(ಲ)ದಂ

೧೪. ತ್ಯಾಗಿ ಕೊಟ್ಟ ಕೊಡಗೆ ತಾಬ್ರ ಸಸನದ ಪಡಿಯ ಸಿಲೆಯ ಸಾಸನ ಯಿ ಊರಿಗೆ ಆ[x]

೧೫. ಕರು ಆ ನಾಡ ಆಳುವ ಅರಸುನಾಯಕರು ಆ ಊರಿಂಗೆ ತಪ್ಪಿ ನಡೆದವರು ಯಿ

೧೬. ಪ್ಪತೊಂದು ಪಿತುಗಳ ನರಕಕ್ಕೆ ಯಿರೆ ದೇವರು ತಾಯಿಗೆ ಒಡವು (ಜ)ದೇವರಿಗೆ

೧೭. ಸತ್ರಾ ಅಳಿದವರು ಗಂಗೆ ತಡಿಯ ಕವಿಲೆಯ ಕೊಂದ ದೋಸದಲು ಹೋಹರು

೧೮. ಯಿ ಮರಿಯಾದೆಗೆ ಭೂಮಿಉ ಚಂದ್ರನುಳುಂನವರ ಸಲುಉದು ಮಂ

೧೯. ಗಳ ಮಹಾ ಶ್ರೀ ಶ್ರೀ ನಾಯಕರ ಒಪ್ಪ (ಚ್ರಂ) ನಡಸುವ ನಾಡ ಒಪ್ಪ ಶ್ರೀ ಮು

೨೦. ಕ್ತನಾತ ಯಿ ಸಸನವ ಬರದ ಸೇನಬೋವ ಕೇಸವದೇವ ಆಚಾರಿ ಚಿನೋಜ

ಸಾರಾಂಶ : ಶ್ರೀಮತು ಪ್ರತಾಪ ಚಕ್ರವರ್ತಿ ಹೊಯಿಸಣ ಶ್ರೀ ವೀರಬಲ್ಲಾಳ ದೇವರಸರು ಪೃಥ್ವೀ ರಾಜವನ್ನಾಳುವಾಗ ಉಪ್ಪೂರ ಬಂಮೆಯ ನಾಯಕರು ಕುಕಲನಾಡನ್ನು ಆಳುತ್ತ ಇರಲು, ಅವರು ಮತ್ತು ಆ ನಾಡಿನ ಹನುಗೂರ ಮಲಯಪ್ಪ, ಗೋಪಗವಿಡ, ಬೋಕಣ, ಬಂಮುಪ, ಸಿರಿಯಕ, ಪಿಡಾರಿಯ(x) ಸೆಟಿ, ಮಲಪ್ಪ, ಸೊಂಣೆಸೆಟಿ ಇವರುಗಳು ತಾಮ್ರ ಪತ್ರದ ಮೂಲಕ ಬಿನ್ನವಿಸಲಾಗಿ ವೀರಯನು ದಾನ ಮಾಡಿದ. ಜಕಣಸೆಟಿ, ಸಮಸ್ತ ಪ್ರಜೆ, ಗಉಡುಗಳು, ಕುಕಲನಾಡಿನ ಕಿತ್ತನೆಲೆಯ ದೊಡನ ಗಉಡರ ಮಕ್ಕಳು ಗಉಡಪ್ಪ, ಮಾರಪ್ಪ, ಗಂಗಣ, ಅಂಣನ ಹೊಂನಜನವರಿಗೆ ಕುಕಲನಾಡಿನ ಮುದುಗೆರೆಯನ್ನು ಸರ್ಬ್ಬಕೊಡುಗೆಯಾಗಿ ಚತುಸೀಮೆ ಸಹಿತವಾಗಿ ಕೊಟ್ಟ ಕೊಡುಗೆಗೆ ತಾಮ್ರ ಶಾಸನದ ಪಡಿಯ ಶಿಲಾಶಾಸನ. ಆ ಊರಿನಲ್ಲಿ ತಪ್ಪಾಗ ದಂತೆ ವೀಳೆಯದ ಒಪ್ಪಿಗೆಯಿಂದ ಯಾವ ಅಪರಾಧವೂ ಇಲ್ಲದಂತಾಗಿ ದಾನ ನೀಡಲಾಗಿದೆ. ಆ ಊರಿಗೆ ತಪ್ಪಿ ನಡೆದವರು ಇಪ್ಪತ್ತೊಂದು ಪಿತೃಗಳ ನರಕಕ್ಕೆ ಹೋಗು ವರು. ಅಳಿದವರು ಗಂಗೆ ತಡಿಯ ಕವಿಲೆಯ ಕೊಂದ ದೋಷದಲ್ಲಿ ಹೋಗುವರು, ಮರ್ಯ್ಯಾದೆಗೆ ಭೂಮಿಯ ಚಂದ್ರನಿರುವವರೆಗೆ ಸಲುವುದು. ಇವಕ್ಕೆ ನಾಯಕರ ಒಪ್ಪ ಮತ್ತು ನಡಸುವ ನಾಡ ಒಪ್ಪ ಶ್ರೀ ಮುಕ್ತನಾಥನದು. ಈ ಶಾಸನವನ್ನು ಬರೆದವನು ಸೇನ ಬೋವ ಕೇಶವದೇವ. ಆಚಾರಿ ಚಿನೋಜ ಶಾಸನವನ್ನು ಖಂಡರಿಸಿದ್ದಾನೆ(!).

ವಿವರಣೆ : ಶಾಸನದ ಬರಹಕ್ಕೆ ಉಪಯೋಗಿ ಸಿರುವ ಕಣಶಿಲೆಯ ಚಪ್ಪಡಿಕಲ್ಲಿನ ಬಲ ಅಂಚಿನಲ್ಲಿ ಚಿಕ್ಕ

ಎದ್ದಿರುವುದರಿಂದ ಕೆಲವು ಸಾಲುಗಳ ಕೊನೆಯ ಅಕ್ಷರಗಳು ಹಾಳಾಗಿವೆ. ಹಲವೆಡೆ ಶಾಸನದ ಭಾಷೆ ಅಸ್ಪಷ್ಟ ಹಾಗೂ ದೋಷಪೂರಿತ. ೪ನೆಯ ಸಾಲಿನಲ್ಲಿ 'ಚ(ಯಿ)ಮೇದಿನಿಮನ್ನೆಯರ ಗಂಡ'–ಎಂಬ ಭಾಗದಲ್ಲಿ 'ಯಿ' ಅಸ್ಪಷ್ಟ ಹಾಗೂ 'ಚಯಿ' ಗೆ ಅರ್ಥಸ್ಪಷ್ಟತೆಯಿಲ್ಲ. ೭ನೆಯ ಸಾಲಿನ ಕೊನೆಯಲ್ಲಿ 'ಬಂಮುಪಾದಿ ಸಿರಿಯಕ ಪಿಡಾರಿಯ(–)' ಭಾಗದ ಅರ್ಥವೂ ಸ್ಪಷ್ಟವಿಲ್ಲ. ೮ನೆಯ ಸಾಲಿನಲ್ಲಿ 'ತಾಮ್ರಪತ್ರದ ಬರಪದೆ' ಎಂದಿರಬೇಕಾಗಿದ್ದಿರಬಹುದು. 'ಬದಲಿಗೆ ತಾಮತದ ಬರಪದೆ' ಎಂದು ಕೆತ್ತಲಾಗಿದೆ. ೯ನೆಯ ಸಾಲಿನಲ್ಲಿ 'ಹೂವ ಅಸಿ' ಎಂಬಲ್ಲೂ ಅರ್ಥಸ್ಪಷ್ಟತೆಯಿಲ್ಲ. ೧೬ನೆಯ ಸಾಲಿನ 'ದೇವರು ತಾಯಿಗೆ ಒಡವು(ಜ)ದೇವರಿಗೆ ಸತ್ರಾ'– ಎಂಬ ಭಾಗಕ್ಕೂ ಖಚಿತವಾದ ಅರ್ಥ ಒದಗಿಸಲು ಸಾಧ್ಯವಾಗಿಲ್ಲ.

ಇದೊಂದು ದಾನಶಾಸನ. ದಾನಶಾಸನದ ಮೇಲ್ಭಾಗದಲ್ಲಿ ಸೂರ್ಯ, ಲಿಂಗ, ಚಂದ್ರರ ರೇಖಾಚಿತ್ರ ಅಥವಾ ಉಬ್ಬುಶಿಲ್ಪಗಳ ಕೆತ್ತನೆ ಇರುವುದು ಸಹಜ. ಲಿಂಗದ ಮುಂದೆ ಬಸವನ ಚಿತ್ರವಿರುವುದೂ ಅಪರೂಪವಲ್ಲ. ಆದರೆ ಈ ಶಾಸನದಲ್ಲಿ ಸರ್ಪದ ಕೆತ್ತನೆ, ಅದರಲ್ಲೂ ಹೆಡೆ ಇಲ್ಲದೆ ಚಲನಸ್ಥಿತಿಯಲ್ಲಿನ ಕೆತ್ತನೆ ಗಮನ ಸೆಳೆಯುತ್ತದೆ.

ಶಾಸನದ ಪ್ರಕಾರ ದಾನ ಮಾಡಲು ಬಿನ್ನವಿಸಿದವರು ಬೊಂಮಯ ನಾಯಕ, ಹನುಗೂರ ಮಲಯಪ್ಪ, ಗೋಪಗವಿಡ, ಬೋಕಣ ಮತ್ತಿತರರು. ದಾನ ನೀಡಿದವನು ವಿರಯ. ದಾನ ಪಡೆದವರು ಕಿತ್ತನೆಲೆಯ ದೊಡನಗಲುಡರ ಮಕ್ಕಳು ಗಲುಡಪ್ಪ, ಮಾರಪ್ಪ, ಗಂಗಣ ಮುತ್ತಿತರರು. ವಿರಯನು ನೀಡಿದ ದಾನ ಮುದುಗೆರೆ. ಅದನ್ನು ಚತುಸ್ಸೀಮೆ ಸಹಿತ ಸರ್ಬ್ಬಕೊಡುಗೆಯಾಗಿ ನೀಡಲಾಗಿದೆ. ಆದರೆ ದಾನ ನೀಡಲು ಕಾರಣವೇನು ಎಂಬುದನ್ನು ಶಾಸನ ತಿಳಿಸುವುದಿಲ್ಲ.

ಶಾಸನದಲ್ಲಿ ಉಲ್ಲೇಖಿಸಲಾಗಿರುವ ಹೊಯಿಸಣ ಚಕ್ರವರ್ತಿ ವೀರಬಲ್ಲಾಳದೇವರಸನು ಮೂರನೆಯ ವೀರಬಲ್ಲಾಳನೆಂದು ಸ್ವೀಕರಿಸಬಹುದಾಗಿದೆ. ಇವನ ಆಳ್ವಿಕೆಯ ಕಾಲ ಕ್ರಿ. ಶ. ೧೨೯೨ ರಿಂದ ೧೩೪೨. ಇವನ ಆಳ್ವಿಕೆಯನ್ನು ಪ್ರಸ್ತಾಪಿಸುವ, ಬೈಲಕೋನೇನಹಳ್ಳಿಯ ನೆರೆ-ಹೊರೆಯಲ್ಲೇ ಆರು ಶಾಸನಗಳು ದೊರೆತಿವೆ. (ಬ್ಯಾಡರಹಳ್ಳಿ,[1] ರಾಮಸಮುದ್ರ,[2] ಹಲಿಗೆವಡೆಯರ ಹಳ್ಳಿ,[3] ಮಂಠಾಳು,[4] ಬೈಚಗುಪ್ಪೆ,[5] ಕಿತ್ತನಹಳ್ಳಿ[6]); ಇವುಗಳ ಕಾಲ ಕ್ರಿ. ಶ. ೧೩೩೩ ರಿಂದ ೧೩೪೦ ರ ವರೆಗೆ ಸೇರುತ್ತದೆ. ಪ್ರಸ್ತುತ ಶಾಸನದಲ್ಲಿ ಶಕವರ್ಷದ ಉಲ್ಲೇಖವಿಲ್ಲದಿದ್ದರೂ ವಿಭವ ಸಂವತ್ಸರದ ಉಲ್ಲೇಖವಿರುವುದರಿಂದ ಈ ಶಾಸನದ ಕಾಲವನ್ನು ಕ್ರಿ. ಶ. ೧೩೨೯ ಎಂದು ನಿರ್ಧರಿಸಬಹುದಾಗಿದೆ. ಶಾಸನದ ಲಿಪಿಸ್ವರೂಪವೂ ಕ್ರಿ. ಶ. ೧೪ನೆಯ ಶತಮಾನದ್ದಾಗಿದೆ.

ಈ ಶಾಸನವಲ್ಲದೆ ಕಿತ್ತನಲ್ಲಿ ಗ್ರಾಮದ ಒಂದು ಶಾಸನವೂ[7] ಕುಕ್ಕಲನಾಡನ್ನಾಳುತ್ತಿದ್ದ ಉಪ್ಪಾರ ಬಂಮಯ ನಾಯಕನನ್ನು ಪ್ರಸ್ತಾಪಿಸಿದೆ. ಆ ಶಾಸನವು ಅಸ್ಪಷ್ಟವಾಗಿರುವುದರಿಂದ, ಕಾಲದ ಉಲ್ಲೇಖವಿರಬಹುದಾದ ಭಾಗ ಹಾಳಾಗಿರುವುದರಿಂದ ವಿದ್ವಾಂಸರು ಅದರ ಕಾಲವನ್ನು ಕ್ರಿ. ಶ. ಸು. ೧೪ನೆಯ ಶತಮಾನ ಎಂದು ತೀರ್ಮಾನಿಸಿದಂತಿದೆ. ಕುಕ್ಕಲನಾಡನ್ನು ಆಳುತ್ತಿದ್ದ ಮಯಿಲೆಯನಾಯಕ ಮತ್ತು ಅವನ ತಮ್ಮ ಚೆಂನಯ ಅಥವಾ ಜಂನಯನಾಯಕನನ್ನು ನಾಲ್ಕು ಶಾಸನಗಳು

---

1. ಎಪಿಗ್ರಾಫಿಯ ಕರ್ನಾಟಿಕಾ, ಸಂಪುಟ ೯, ಬೆಂಗಳೂರು ೧೧೦
2. ಅದೇ, ೧೧೧
3. ಅದೇ, ೧೧೭
4. ಅದೇ, ನೆಲಮಂಗಲ ೯
5. ಅದೇ, ಮಾಗಡಿ ೮೧
6. ಅದೇ, ನೆಲಮಂಗಲ ೧೨
7. ಅದೇ, ೧೧

ಕ್ರಿ. ಶ. ೧೩೩೩ ರಿಂದ ೧೩೪೦ ರ ವರೆಗಿನ ಅಂತರದಲ್ಲಿ ಪ್ರಸ್ತಾಪಿಸಿವೆ (ಮಂತಾಳು,[8] ಬ್ಯಾಡರಹಳ್ಳಿ,[9] ರಾಮ ಸಮುದ್ರ,[10] ಬೈಚಗುಪೆ[11])— ಕ್ರಿ. ಶ. ೧೩೪೦ ರಲ್ಲೇ ಕುಕ್ಕಲನಾಡನ್ನು ಕೊಟ್ಟೈಯ ನಾಯಕ, ಬಂನೆಯ ನಾಯಕ, ಕುಮಾರ ಕೊಟ್ಟೈಯ ನಾಯಕ ಆಳುತ್ತಿದ್ದಂತೆ ಹಲಿಗೆವಡೆಯರಹಳ್ಳಿಯ[12] ಶಾಸನ ತಿಳಿಸುತ್ತದೆ. ಒಂದೇ ಕಾಲದಲ್ಲಿ ಒಂದೇ ಭೂಭಾಗವನ್ನು ಬೇರೆ ಬೇರೆ ಇಬ್ಬರು ಹೇಗೆ ಆಳಿದರು ಎಂಬ ಅನುಮಾನವನ್ನು ಎರಡು ಕಾರಣಗಳಿಂದ ನಿವಾರಿಸಿಕೊಳ್ಳಬಹುದು. ಒಂದು, ಕಾಲದ ಉಲ್ಲೇಖ ತಪ್ಪಿರಬಹುದು ; ಎರಡು, ತಾತ್ಕಾಲಿಕವಾಗಿ ಅಧಿಕಾರ ಹಸ್ತಾಂತರವಾಗಿರಬಹುದು. ಮಯಿಲೆಯ ನಾಯಕ, ಚೆಂನಯ ನಾಯಕರಿಗೆ ಮೊದಲು ಕುಕ್ಕಲ ನಾಡನ್ನು ಉಪ್ಪಾರ ಬೊಂಯಮ ನಾಯಕ ಆಳುತ್ತಿದ್ದು ದನ್ನು ಪ್ರಸ್ತುತ ಶಾಸನವಲ್ಲದೆ, ಕಿತ್ತನಲ್ಲಿಯ ಮತ್ತೊಂದು ಶಾಸನವೂ[13] ತಿಳಿಸುತ್ತವೆ. ಹಲವಾರು ಶಾಸನಗಳಲ್ಲಿ ಪ್ರಸ್ತಾಪಿತವಾಗಿರುವ ಕುಕ್ಕಲನಾಡು 'ಬೆಂಗಳೂರು ತಾಲ್ಲೂಕಿನ ಪಶ್ಚಿಮ ಪ್ರದೇಶವೂ ಸೇರಿದಂತೆ ರಾಮನಗರ ತಾಲ್ಲೂಕಿನ ಪೂರ್ವಭಾಗ, ಮಾಗಡಿ ತಾಲ್ಲೂಕಿನ ಪಶ್ಚಿಮ ಭಾಗದ ಹಲವಾರು ಗ್ರಾಮಗಳು, ನೆಲಮಂಗಲ ತಾಲ್ಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡ' ಪ್ರಾದೇಶಿಕ ವಿಭಾಗ[14] ಎಂದು ಶ್ರೀ ಪಿ. ವಿ. ಕೃಷ್ಣಮೂರ್ತಿಯವರು ಗುರುತಿಸಿದ್ದಾರೆ. ಆದರೆ ಮಾಗಡಿ ತಾಲ್ಲೂಕಿನ ಪಶ್ಚಿಮ ಭಾಗಗಳು ಎಂದು ಗುರುತಿಸಿರುವುದು ಸಂದೇಹಾಸ್ಪದ ವಾಗಿದೆ. ಮಾಗಡಿ ತಾಲ್ಲೂಕಿನ ಪೂರ್ವಭಾಗ ಅಥವಾ ಪೂರ್ಣಭಾಗವೂ (?) ನೆಲಮಂಗಲ ತಾಲ್ಲೂಕಿನ ದಕ್ಷಿಣ ಭಾಗವೂ ಕುಕ್ಕಲನಾಡಿಗೆ ಸೇರುತ್ತದೆಂದು ತಿಳಿಯಬಹು ದಾಗಿದೆ.

ಈ ಶಾಸನದಲ್ಲಿ ಉಕ್ತವಾಗಿರುವ ದೊಡನ ಗಲುಡರ ಮತ್ತು ಇನ್ನೆರಡು ಶಾಸನಗಳಲ್ಲಿ[15] ಉಕ್ತವಾಗಿರುವ ಹೊಂನ ಗಲುಡರ ಕುಟುಂಬಗಳು ಕಿತ್ತನೆಲೆಯಲ್ಲಿ ಪ್ರಸಿದ್ಧ ವಾಗಿದ್ದುವು ಎಂದು ವೇದ್ಯವಾಗುತ್ತದೆ. ಶಾಸನಗಳಲ್ಲಿನ ಕಿತ್ತನೆಲ್ಲಿ ಅಥವಾ ಕಿತ್ತನೆಲೆಯು ನೆಲಮಂಗಲ ತಾಲ್ಲೂಕಿನ ಕಿತ್ತನಹಳ್ಳಿ ಎಂದು ಗುರುತಿಸಬಹುದಾಗಿದೆ.

ಈ ಶಿಲಾಶಾಸನವು ತಾಮ್ರಶಾಸನದ ಪಡಿಯೆಂದು ಶಾಸನದಲ್ಲೇ ತಿಳಿಯಪಡಿಶಲಾಗಿದೆ. ದಾನಶಾಸನಗಳಿಗೆ ಸಂಬಂಧಿಸಿದಂತೆ ಇಂತಹ ತಾಮ್ರಶಾಸನಗಳಿಗೆ ಪಡಿಯ ಶಿಲಾಶಾಸನಗಳು ಇರುತ್ತಿದ್ದ ಉಲ್ಲೇಖವನ್ನು ಇದೇ ಕಾಲದ ಮತ್ತೊಂದು ಶಾಸನವೂ[16] ತಿಳಿಸುತ್ತದೆ.

ಈ ಶಾಸನದ ಮರಿಯಾದೆಗೆ ನಾಯಕರ ಒಪ್ಪ ವಲ್ಲದೆ ನಾಡ ಒಪ್ಪ 'ಮುಕ್ತನಾತ'ನದು. ಈ 'ಮುಕ್ತ ನಾತ' ಯಾರು ? ಕ್ರಿ. ಶ. ೧೩೩೬ ರ ಬ್ಯಾಡರಹಳ್ಳಿಯ ಶಾಸನದಲ್ಲೂ[17] ನಾಡವೊಪ್ಪ ಶ್ರೀ ಮುಕ್ತನಾಥ ಎಂದೇ ಇದೆ. ಈ ಮುಕ್ತನಾಥ ನೆಲಮಂಗಲ ತಾಲ್ಲೂಕಿನ ಬಿನ್ನ ಮಂಗಲದಲ್ಲಿರುವ ಮುಕ್ತನಾಥೇಶ್ವರ ದೇವಾಲಯದ ಮುಕ್ತನಾಥ ಎಂದು ಊಹಿಸಿದರೆ ತಪ್ಪಾಗಲಾರದು.

ಈ ಶಾಸನವನ್ನು ಬರೆದವನು ಸೇನಬೋವ ಕೇಶವ ದೇವ. ಕ್ರಿ.ಶ. ೧೩೪೦ ರ ರಾಮುಸಮುದ್ರದ ಶಾಸನ

---

8. ಅದೇ, ೪
9. ಅದೇ, ಬೆಂಗಳೂರು ೧೧೦
10. ಅದೇ, ೧೧೧
11. ಅದೇ, ಮಾಗಡಿ ೮೧
12. ಅದೇ, ಬೆಂಗಳೂರು ೧೧೭
13. ಅದೇ, ನೆಲಮಂಗಲ ೧೧
14. ಪಿ.ವಿ. ಕೃಷ್ಣಮೂರ್ತಿ : 'ಬೆಂಗಳೂರು ಜಿಲ್ಲೆಯ ಪ್ರಾಚೀನ ಪ್ರಾದೇಶಿಕ ವಿಭಾಗಗಳು,' ಇತಿಹಾಸ ದರ್ಶನ, ೧–೧, ಡಿಸೆಂಬರ್ ೧೯೮೬, ಪು. ೨೮
15. ಎ. ಕ., ಸಂ. ೯, ಬೆಂಗಳೂರು ೧೧೦, ಮಾಗಡಿ ೮೧
16. ಅದೇ, ನೆಲಮಂಗಲ ೧೧
17. ಅದೇ, ಬೆಂಗಳೂರು ೧೧೦

ವನ್ನು[18] ಇವನ ಮಗ ಅನಂತಣ್ಣನು ಬರೆದಂತೆ ತೋರುತ್ತದೆ.

ಶಾಸನವನ್ನು ಕಲ್ಲಮೇಲೆ ಖಂಡರಣೆ ಮಾಡಿದವನು ಆಚಾರಿ ಚಿನೋಜ.

ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಊರುಗಳಲ್ಲಿ ಕಿತ್ತನೆಲ್ಲಿಯ ವಿನಹ ಮತ್ತಾವ ಊರುಗಳನ್ನೂ ಈಗ ಗುರುತಿಸಲಾಗಿಲ್ಲ.

---

18. ಅದೇ, ೧೨೨

ಎಚ್. ಶ್ರೀಶೈಲ ಆರಾಧ್ಯ

ಚಿತ್ರದುರ್ಗ ಚರಿತ್ರೆಯ ಎರಡು ಭೀಕರ ಪ್ರಸಂಗಗಳು

೧. ಮನುಷ್ಯ ನೆತ್ತರನ್ನೇ ಕುಡಿದು ಬೆಳೆದ ಅಣಜಿ ಕೋಟೆ : ಕರ್ನಾಟಕದ ನಕ್ಷೆಯಲ್ಲಿ ಅಣಜಿಯೆನ್ನುವುದು ಒಂದು ಅಪ್ರಸಿದ್ಧ ಪುಟ್ಟ ಗ್ರಾಮ. ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ತಾಲ್ಲೂಕಿನಲ್ಲಿರುವ ಈ ಊರಿನಲ್ಲಿ ನಡೆದ ಯುದ್ಧಗಳು ಮಾತ್ರ ಎದೆ ನಡುಗಿಸುವಂತಹವು. ಚಿತ್ರದುರ್ಗ ಸಂಸ್ಥಾನದ ಒಂದು ಮಹತ್ವದ ಸ್ಥಳವೆಂದು ಪ್ರತಿಷ್ಠೆ ಪಡೆದಿದ್ದ ಇದರ ಮೇಲೆ ಶತ್ರು ಪಾಳಯಗಾರರ ಕಣ್ಣು. ದುರ್ಗದ ಸಂಸ್ಥಾನದ ಗಡಿಪ್ರದೇಶವಿದಾಗಿದ್ದುದರಿಂದ ಆಕ್ರಮಣ, ಸಣ್ಣಪುಟ್ಟ ಕಾದಾಟಗಳು ಅಸಹಜವೇನಲ್ಲ. ಕ್ರಿ. ಶ. ೧೬೭೬ರಲ್ಲಿ ದುರ್ಗದ ಸಿಂಹಾಸನಕ್ಕೆ ಚಿಕ್ಕಣ್ಣನಾಯಕ ಪ್ರಭುವಾಗಿ ಬರುತ್ತಾನೆ. ಆ ಮರುವರ್ಷವೇ ಹರಪನಹಳ್ಳಿಯ ಪಾಳಯಗಾರರು ಅಣಜಿಗೆ ಮುತ್ತಿಗೆ ಹಾಕಿದರು. ದಳವಾಯಿ ಭೂನಪ್ಪ, ಕೆಂಚನಗೌಡರ ಮುಂದಾಳುತನದಲ್ಲಿ ಕೋಟೆಯ ಉಸ್ತುವಾರಿಗಿದ್ದ ಫೌಜು ಜೀವದ ಹಂಗು ತೊರೆದು ಶತ್ರುಗಳೊಡನೆ ಕಾದುತ್ತದೆ. ಈ ಯುದ್ಧದಲ್ಲಿ ದುರ್ಗದವರಿಗೆ ಜಯವಾಯಿತು, ನಿಜ. ಆದರೆ ಹರಪನಹಳ್ಳಿಯ ದಂಡು ಅಣಜಿಯಿಂದ ಇಳಿಬಿದ್ದು ಓಡುತ್ತಿದ್ದಾಗ ಅದರ ಬೆನ್ನುಹತ್ತಿದ ಶೂರ ದಳವಾಯಿ ಭೂನಪ್ಪನ ತಲೆಯನ್ನು ಆ ಊರಿನ ಈಶ್ವರಗುಡಿಯ ಹತ್ತಿರ ಹೊಡೆದು ಸೈನ್ಯ ಮುಂದೆ ಓಡುತ್ತದೆ. ಈ ವರ್ತಮಾನವೆಲ್ಲಾ ಸಾಣಿಕೆರೆಯಲ್ಲಿದ್ದ ನಾಯಕನಿಗೆ ಮುಟ್ಟಿ, ಅಲ್ಲಿಂದಲೇ ನಾಯಕ ಫೌಜಿನೊಡನೆ ಅಣಜಿಗೆ ಬರುತ್ತಾನೆ. ತಮ್ಮವರು ಗೆದ್ದ ವಿಷಯ ತಿಳಿದು ಸಂತೋಷಪಟ್ಟು, ಲಡಾಯಿಯಲ್ಲಿ ಕಾದಿದ ಅಣಜಿಯ ಸೈನ್ಯ, ಮಂದಿಗೆ ಹೊಲಗಳ ಮಾನ್ಯವನ್ನು, ವಸ್ತ್ರಾಭರಣ ಮೊದಲಾದ ಇನಾಮುಗಳನ್ನು ಕೊಟ್ಟು ಗೌರವಿಸಿ ತನ್ನ ರಾಜಧಾನಿಗೆ ತೆರಳುವನು.

ಚಿತ್ರದುರ್ಗದ ರಾಜ್ಯಾಡಳಿತದಲ್ಲಿ ದಳವಾಯಿಗಳು ಪ್ರಬಲಿಸಿ ಪಟ್ಟದ ದೊರೆಗಳ ತಲೆ ಹೊಡಿಸಿ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದ ದಳವಾಯಿ ಮುದ್ದಣ್ಣನಾದರೋ ಚಿಕ್ಕಣ್ಣನಾಯಕನ ನಿಧನದ ತರುವಾಯ ಮತ್ತಷ್ಟು ಅತಿರೇಕಕ್ಕೆ ಹೋಗುತ್ತಾನೆ. ರಾಜ್ಯದಲ್ಲಿ ಅವನ ವಿರುದ್ಧ ಸೊಲ್ಲೆತ್ತಿದ ನಾಲಿಗೆಗೆ ಅಲಗಿನ ಸೇವೆ! ಶಿರಚ್ಛೇದನಗಳು ದೈನಂದಿನ ಸುದ್ದಿಯಾದುವು. ಈ ದೌರ್ಜನ್ಯ, ಕ್ರೌರ್ಯಗಳು ರಾಕ್ಷಸಾಕಾರವಾಗಿ ಬೆಳೆದು ನಿಂತಾಗ ರಾಜನಿಷ್ಠ ದಳವಾಯಿಗಳು, ಅಧಿಕಾರಿಗಳು, ಪ್ರಜೆಗಳೆಲ್ಲಾ ಒಂದಾಗಿ ಮುದ್ದಣ್ಣ ಮತ್ತು ಅವನ ವಂಶವನ್ನೇ ಕೊನೆಗೊಳಿಸಿದರು.

ಮತ್ತಿ ತಿಮ್ಮಣ್ಣನಾಯಕನ ವಂಶದ ಲಿಂಗಣ್ಣನಾಯಕನ ಕೊಲೆಯ ತರುವಾಯ ಆ ಮನೆತನದವರು ಯಾರೂ ಇಲ್ಲದಂತಾಗಲು ಅದೇ ಅಣ್ಣತಮ್ಮತನಕ್ಕೆ ಸೇರಿದ ಬಿಳಿಚೋಡು ಭರಮಣ್ಣನಾಯಕನನ್ನು ಕರೆತಂದು ಕ್ರಿ. ಶ. ೧೬೮೯ರಲ್ಲಿ ಚಿತ್ರದುರ್ಗ ಸಂಸ್ಥಾನದ ಪ್ರಭುವಾಗಿ ಪಟ್ಟಕಟ್ಟಿದರು.

ಮೂಲತಃ ವಾಲ್ಮೀಕಿ—ಕ್ಷತ್ರಿಯರಾದರೂ ಈ ಬಿಳಿಚೋಡು ವಂಶದವರು ಮಾತ್ರ ಕೃಷಿ, ಕುರಿ, ಮೇಕೆ ಇತ್ಯಾದಿಗಳಲ್ಲೇ ಸುಖ ಸಂತೃಪ್ತಿಯನ್ನನುಭವಿಸಿಕೊಂಡಿದ್ದವರು. ಇಂತಹ ಹಿನ್ನೆಲೆಯಿಂದ ಬಂದ ಭರಮಣ್ಣ

ನಾಯಕನಿಗೆ ಪಟ್ಟವಾದ ಮರುವರ್ಷವೇ ಹರಪನಹಳ್ಳಿಯ ಪಾಳಯಗಾರರು ಬಿದನೂರವರನ್ನು ಕೂಡಿಕೊಂಡು ಅಣಜಿಯನ್ನು ಮುತ್ತಿದರು. ದುರ್ಗದಲ್ಲಿ ದಳವಾಯಿಗಳಲ್ಲಿ ಐಕ್ಯತೆಯಿಲ್ಲ; ಸೈನಿಕರಿಗೆ ಸಂಬಳ ಕೊಡಲು ಬೊಕ್ಕಸದಲ್ಲಿ ಹಣವಿಲ್ಲ; ಇನ್ನು ದೊರೆಯಾದರೋ ನಿನ್ನೆ ಮೊನ್ನೆ ಬಂದವನೆನ್ನುವ ಭಾವನೆಯಿಂದ ಗೆಲ್ಲುವ ವಿಶ್ವಾಸದಿಂದಲೇ ಲಗ್ಗೆ ಹಾಕಿದ್ದರು.

ಈ ವಿಷಯ ರಾಜಧಾನಿಯನ್ನು ಮುಟ್ಟಿದ ಕೂಡಲೇ ಸಮರ್ಥನೂ ವಿವೇಕಿಯೂ ಆಗಿದ್ದ ದಳವಾಯಿ ಭರಮಣ್ಣ ಸೈನ್ಯದೊಡನೆ ಬಂದು ಅಣಜಿಯ ಮುತ್ತಿಗೆಯನ್ನೆಬ್ಬಿಸಲು ಪ್ರಾರಂಭಿಸಿದನು. ಆದರೇನು, ದುರ್ಗದ ದಂಡು ಸೋತುಹೋಯಿತು. ದಳವಾಯಿಯ ಅಂದಣ, ಬಿರುದು ಬಾವಲಿಗಳು ಶತ್ರು ವಶವಾದುವು. ಹರಪನಹಳ್ಳಿಯವರ ಅಂಕಿತಕ್ಕೆ ಅಣಜಿ ಸೀಮೆ ಸೇರಿಹೋಯಿತು. ದಳವಾಯಿ ಭರಮಣ್ಣ ಅಳಿದುಳಿದ ಸೇನೆಯೊಡನೆ ದುರ್ಗಕ್ಕೆ ಮರಳಿದ. ಆದರೆ ದುರ್ಗದ ಅಭಿಮಾನ ಭಂಗವಾಗಿತ್ತು. ಈ ನೋವು ದಿನೇದಿನೇ ಪ್ರಬಲವಾಗಿ, ಪ್ರತೀಕಾರಕ್ಕೆ ಸನ್ನಾಹ ನಡೆಯಿತು. ದುರ್ಗದಲ್ಲಿ ಹಾವನೂರು, ಗುಡೇಕೋಟೆ, ಅನಂತಪುರ, ಜರಿಮಲೆ, ತರೀಕೆರೆ ಪಾಳಯಗಾರರನ್ನು ಕೂಡಿಕೊಂಡ ಭರಮಣ್ಣ ನಾಯಕನು ತನ್ನ ಸೇನೆ, ದಳವಾಯಿಗಳೊಡನೆ ಸರ್ವಸನ್ನದ್ಧನಾಗಿ ಕ್ರಿ. ಶ. ೧೬೯೧ರಲ್ಲಿ ಅಣಜಿಗೆ ನಡೆದ. ಈ ಬಾರಿಯ ಯುದ್ಧದಲ್ಲಿ ಶತ್ರುಗಳಿಗೆ ಸೋಲಾಯಿತು. ತಾವು ಹಿಡಿದ ಕೋಟೆಯನ್ನು ಬಿಟ್ಟು ಕೈವಶವಾಗಿದ್ದ ಅಂದಣ, ಬಿರುದು ವಗೈರೆಗಳನ್ನು ಮರಳಿ ಕೊಟ್ಟು ತಮ್ಮ ರಾಜ್ಯಕ್ಕೆ ಮರಳಿದರು.

ದುರ್ಗದ ಒಳಹೊರಗು ಅರ್ಥವಾಗುತ್ತಿದ್ದಂತೆ ಭರಮಣ್ಣನಾಯಕ ತನ್ನ ರಾಜ್ಯದ ಗಡಿಠಾಣ್ಯಗಳ, ಬುರುಜು ಬತೇರಿಗಳ ದುರಸ್ತಿಗೆ ಕೈಯಿಕ್ಕಿದನು. ಅದರಲ್ಲೂ ದೂರದ ಸ್ಥಳವಾದ ಅಣಜಿ (ಹಾಲೂರು) ಕೋಟೆಯನ್ನು ಬಿಚ್ಚಿ ಕಟ್ಟುವ ಕೆಲಸ ಆರಂಭವಾಯಿತು. ಈ ಸುದ್ದಿ ತಿಳಿದ ಹರಪನಹಳ್ಳಿಯವರು ಕ್ರಿ. ಶ. ೧೬೯೨ರಲ್ಲಿ ಮತ್ತೆ ಅಣಜಿಗೆ ಬಂದು ಕೋಟೆಯ ಕೆಲಸಕ್ಕೆ ಅಟಕಾವು ಮಾಡಿದರು. ತಮ್ಮ ಸೀಮೆಯಾಗಿದ್ದ ಅಣಜಿಯನ್ನು ಆಕ್ರಮಿಸಿ ಮತ್ತೆ ಸೋತು ರಾಜಿಯಾಗಿ ಹೋಗಿದ್ದ ಹರಪನಹಳ್ಳಿಯವರು ಆ ಯುದ್ಧದ ಗಾಯ ಮಾಯುವ ಮೊದಲೇ ಕೂಚುಸಗಾರಿಯನ್ನು ಬಾರಿಸುತ್ತಿದ್ದಾರೆ! ಇದುವರೆಗೂ ದುರ್ಗಕ್ಕೆ ನೂತನ ದೊರೆ ಬಂದ ಕೂಡಲೇ ನಿಶ್ಚಿತವಾಗಿ ಲಗ್ಗೆ ಹಾಕುತ್ತಿದ್ದರು. ಇದೀಗ ನೂತನ ಕ್ರಮವನ್ನು ಕೈಗೊಂಡಿದ್ದಾರೆಂದು ದುರ್ಗದವರು ಕೆಂಡಮಂಡಲವಾದರು.

ಕ್ರಿಸ್ತಶಕ ೧೬೭೬ರಲ್ಲಿ ದುರ್ಗದ ನಾಯಕನಾಗಿದ್ದ ಚಿಕ್ಕಣ್ಣನಾಯಕನ ಕಾಲದಲ್ಲಿ ಪ್ರಾರಂಭವಾದ ಅಣಜಿಯ ಯುದ್ಧ ಮುಂದೆ ಕ್ರಿ. ಶ. ೧೬೯೨ರ ತನಕ ಆಗಾಗ ನಡೆಯುತ್ತಲೇ ಹೋಗುತ್ತದೆ. ಇದಕ್ಕೆ ಕಾರಣ ಅಣಜಿಯ ಬಗೆಗಿನ ಕಟ್ಟಾಸೆಯೇನೂ ಅಲ್ಲ, ದುರ್ಗದವರ ಮೇಲಿನ ಆಜನ್ಮ ದ್ವೇಷ. ದುರ್ಗದವರು ಸೇನೆಯ ಕಟ್ಟೆಚ್ಚರದಲ್ಲಿ ಕೋಟೆ ಕಟ್ಟುತ್ತಿದ್ದರೆ, ಊರಹೊರಗೆ ಹರಪನಹಳ್ಳಿಯವರು ಕತ್ತಿಹಿಡಿದು ಕೇಕೆ ಹೊಡೆಯುತ್ತಾರೆ. ಇದಕ್ಕೆ ಆಯುಧಗಳಿಂದಲೇ ದುರ್ಗದವರು ಉತ್ತರಿಸಿದರು. ನಿತ್ಯ ಕಾದಾಟ, ಕಡಿದು ಕೊಚ್ಚುವುದು ದುರ್ಗದ ದಂಡಿನ ಕೆಲಸವಾಯಿತು. ದಿನವೂ ಹರಪನಹಳ್ಳಿಯ ಸೇನೆಯ ನೆತ್ತರು ನೀರಿನಂತೆ ಹರಿದು ಮಡುಗಟ್ಟುತ್ತಿತ್ತು ! ದುರ್ಗದವರು ಆ ನೆತ್ತರ ಕೆಸರನ್ನು ತಂದು ಅಣಜಿ (ಹಾಲೂರು) ಕೋಟೆಕಟ್ಟಡ ಕಲ್ಲುಗಳ ಸಂದಿಗೆ ಸುರಿದರಂತೆ! ಅದೇ ಮಣ್ಣನ್ನೇ ಕೋಟೆಯ ಗೋಡೆಗೆ ನೂರೆದರಂತೆ! ಹೀಗಾಗಿ ಶತ್ರುರಕ್ತವನ್ನು ಕುಡಿದೇ ಆ ಕೋಟೆ ಪ್ರಾಯಕ್ಕೆ ಬಂದಿತು !

ಯುದ್ಧ, ತನ್ಮೂಲಕ ಸಾವು ನೋವು ಆ ಕಾಲದಲ್ಲಿ ಅಪರೂಪದ ಸಂಗತಿಗಳೇನಲ್ಲ. ಆದರೆ ಯಾರೂ ಮೂಗು ಮುರಿಯುವ, ಬೆಚ್ಚುವ ಇಂತಹ ಭೀಬತ್ಸ ಕಾರ್ಯಕ್ಕೆ ದುರ್ಗದ ಅರಸರು ಹಾಗೂ ಅವರ ದಂಡು ಕೈಯಿಟ್ಟುದಕ್ಕೆ ಕಾರಣ ಮಾತ್ರ ನಿಚ್ಚಳವಾಗಿದೆ. ಸಾಲು ಯುದ್ಧಗಳಿಂದ ಬೇಸತ್ತು ಇದೇ ಕಡೇಯುದ್ಧವಾಗಿಬಿಡಬೇಕೆಂದು ಛಲ ತೊಟ್ಟು ನಿಂತವರು ಈ ಕೃತ್ಯಗೈದುದರಲ್ಲಿ ಆಶ್ಚರ್ಯವೇನಿಲ್ಲ, ಕೇವಲ ಅಣಜಿ ಕೈವಶವಾಗುವುದು, ಕೋಟೆ ಕಟ್ಟುವುದಷ್ಟೇ ಮುಖ್ಯವಾಗಿರಲಿಲ್ಲ – ಇನ್ನೆಂದೂ ಹರಪನಹಳ್ಳಿಯವರು ಇತ್ತ ಕಡೆ ತಲೆ ಹಾಕಬಾರದೆಂಬುದೇ ಈ ಅಮಾನುಷ ಕೃತ್ಯಕ್ಕೆ ನಿಮಿತ್ತವಾಯಿತು.

ಮತ್ತೆ ಕ್ರಿ. ಶ. ೧೭೭೯ರಲ್ಲಿ ಇದೇ ಭರಮಣ್ಣನಾಯಕ ತಮ್ಮ ಆಜನ್ಮಶತ್ರುಗಳಾದ ಹರಪನಹಳ್ಳಿಯವರನ್ನು ಹಣಿಯಲೆಂದು ಅವರ ದೇವಸ್ಥಾನದಲ್ಲಿ ಮೇಳ ಕಟ್ಟಿಸಿಕೊಂಡು ಕುಳಿತಿದ್ದನಂತೆ! ಅನಂತರ ಧರ್ಮಕಹಳೆ ಹಿಡಿಸಿ ಚಿತ್ರದುರ್ಗಕ್ಕೆ ಮರಳಿದನು.

೨. ಆನವಟ್ಟಿಯ ರಕ್ತಾಭಿಷೇಕ : ಚಿತ್ರಕಲ್ಲು ದುರ್ಗದ ಕೊನೆಯ ಅರಸ ರಾಜಾ ಮದಕರಿನಾಯಕ ಕೊಟ್ಟ ಭಾಷೆಗೆ ತಪ್ಪುವರ ಗಂಡ, ಚಂದ್ರಗಾವಿ ಛಲದಂಕ, ಭಾರೀ ನಿಗಳಾಂಕನೆಂದು ಬಿರುದಾಂತವನು.' ಅವನ ಬಿರುದುಗಳ ಪಟ್ಟಿಯಲ್ಲಿ 'ಹಗಲು ಕಗ್ಗೊಲೆ ಮಾನ್ಯ' ಎಂಬುದೂ ಒಂದು! ಇವನ ಧೈರ್ಯ, ಸಾಹಸಗಳೆಲ್ಲಾ ಚಿತ್ರಕಲ್ಲುಸೀಮೆಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳಲ್ಲಿ ನಿಬಿಡವಾಗಿ ಕಾಣಬರುತ್ತವೆ.

ಅಗಾಧವಾದ ಸೇನಾಶಕ್ತಿಯ ಪೇಷ್ವೆಗಳೊಂದು ಕಡೆ; ಮತ್ತೊಂದು ಕಡೆ ಮಹತ್ವಾಕಾಂಕ್ಷಿಯಾದ ಸಾಹಸಿ ಹೈದರಾಲಿಖಾನ್. ಇವರಿಬ್ಬರೂ ಮದಕರಿಯ ಸ್ನೇಹ, ಸಹಾಯ, ಸಹಕಾರ ಬಯಸುವವರೇ. ಹಲಕೆಲವು ಕೋಟೆ-ಕೊತ್ತಳುಗಳನ್ನು ಹಿಡಿಯುವಲ್ಲಿ, ಆ ಪಾಳಯಗಾರರನ್ನು ಪಡಾವು ಮಾಡುವಲ್ಲಿ ಈ ನಾಯಕ ಹೈದರನಿಗೆ ಆಯುಧವಾಗಿ ದುಡಿದವನು. ಇಬ್ಬರೂ ಮಹತ್ವಾಕಾಂಕ್ಷಿಗಳೇ ಆಗಿದ್ದುದರಿಂದ, ಬೇರೆ ಬೇರೆ ಕಾರಣಗಳೂ ಸೇರಿ ಮದಕರಿಯು ನವಾಬನನ್ನು ಕೈಬಿಟ್ಟ. ಅಷ್ಟೇ ಅಲ್ಲ, ಮುಂದೆ ಇಬ್ಬರೂ ಪರಮ ವೈರಿಗಳೇ ಆಗಿಬಿಟ್ಟರು. ಈ ಸಮಯಕ್ಕೆ ಪೇಷ್ವೆ ಮಾಧವರಾಯ ತನ್ನ ಮೂರು ಲಕ್ಷ ಫೌಜನೊಡನೆ ಕರ್ನಾಟಕಕ್ಕೆ ಬಂದು ಹೈದರನ ಸೀಮೆಗಳನ್ನು ಆಕ್ರಮಿಸುತ್ತಾನೆ. ದುರ್ಗದ ಮದಕರಿನಾಯಕನ ಸಹಾಯದಿಂದ ನವಾಬನ ಸಾಮಂತಗಿರಿದುರ್ಗ, ಹುತ್ರಿದುರ್ಗ, ನುಗ್ಗೆಹಳ್ಳಿ, ಹಾಗಲ್ವಾಡಿ, ಬಾಣಾವರಗಳು ಪೇಷ್ವೆಗಳ ಅಂಕೆಗೆ ಬಂದವು.

ಮದಕರಿನಾಯಕನ ನೆರವಿನಿಂದ ಸಾಲು ಯುದ್ಧಗಳಲ್ಲಿ ಗೆಲುವನ್ನೇ ಪಡೆದ ಪೇಷ್ವೆಗೆ ಅತ್ಯಾನಂದವಾಗಿರಲು ಸಾಕು; ಇದು ತನ್ನ ಗೆಳೆಯನ ಬಗ್ಗೆ ಅಭಿಮಾನ ಮೂಡಿಸಿತು. ಕೆಲದಿನಗಳಲ್ಲೇ ಈ ಸಹಾಯ, ತನ್ಮೂಲಕ ಪ್ರಾಪ್ತವಾದ ಜಯಗಳ ಉಲ್ಲೇಖದೊಡನೆ ಪೇಷ್ವೆಯಿಂದ ದುರ್ಗದ ದೊರೆಗೆ ರಾಜಕಾರಣದ ಓಲೆಯೊಂದು ಬಂದಿತು. ಅದರ ಒಟ್ಟು ಸಾರಾಂಶವೆಂದರೆ, 'ಇದೀಗ ಹೈದರನ ಸೀಮೆಯಾದ ಆನವಟ್ಟಿಯನ್ನು ತೆಗೆದುಕೊಳ್ಳಲು ಹೊರಟಿದ್ದೇವೆ. ಹಿಂದಿನಂತೆ ಈಗಲೂ ನಮ್ಮೊಡನೆ ಸಹಕರಿಸಿ ಜಯ ತಂದು ಕೊಡಿ'– ಎಂದು. ಒಂದಾದ ಮೇಲೊಂದರಂತೆ ನಿರಂತರವಾಗಿ ಗೆಲವು ಕಂಡಿದ್ದ ನಾಯಕನಿಗೆ, ಅವನ ದಂಡಿಗೆ ಲಡಾಯಿಯೆಂದರೆ ಇನ್ನಿಲ್ಲದ ಉತ್ಸಾಹ; ಅದರಲ್ಲೂ ಶ್ರೀರಂಗಪಟ್ಟಣದವರ ಮೇಲೆಂದರೆ ಕೇಳಬೇಕೆ! ದುರ್ಗದ ದಂಡು ಆನವಟ್ಟಿಗೆ ದೌಡಾಯಿಸಿತು. ಘೋರ ಕಾಳಗ ಕೈಗಟ್ಟಿ ಮಾನವ ರಕ್ತ ನೀರಿನಂತೆ ಹರಿದು ಕೊನೆಗೂ ಮದಕರಿಯ ಸಮರ್ಥ ನಾಯಕತ್ವದ ಫಲವಾಗಿ ಪೇಷ್ವೆಗಳಿಗೆ ಜಯ ಲಭಿಸಿತು.

ರಣೋನ್ಮಾದದಿಂದ ಮದಕರಿಯು ತಮ್ಮವರು ಕಡಿದುಕೊಚ್ಚಿದ್ದ ಶತ್ರುಗಳ ತಲೆಗಳಿಂದಲೇ ಒಂದು ವೀರಾಸನವನ್ನು (ಜಗಲಿ) ಕಟ್ಟಿಸಿದ. ಪೇಷ್ವೆಗಳಿಗೆ, 'ನೀವಿಂದು ವೀರಾಸನದ ಮೇಲೆ ಆಸೀನರಾಗಬೇಕು. ಶತ್ರು ರಕ್ತದಿಂದಲೇ ನಿಮಗೆ ಅಭಿಷೇಕ ಮಾಡುತ್ತೇವೆ'– ಎಂದ. ನೂರಾರು ಯುದ್ಧಗಳ ಸಾವು ನೋವು, ನೆತ್ತರು ಮಾಂಸಗಳನ್ನು ಕಂಡಿದ್ದ ಪೇಷ್ವೆಗಳಿಗೆ ಇದನ್ನು ಕೇಳಿ, ತಲೆಬುರುಡೆಗಳ ಪೀಠವನ್ನು ಕಂಡು ಮನಸ್ಸು ಹೇಸಿತು. ಕೊನೆಗೆ ಉಪಾಯಾಂತರದಿಂದ, 'ನಾವು ಬ್ರಾಹ್ಮಣರು, ಇದೆಲ್ಲ ನಮಗಲ್ಲ; ನೀವಾದರೋ ಕ್ಷತ್ರಿಯರು. ನೀವೇ ಇದನ್ನು ಮಾಡಿಸಿಕೊಳ್ಳಿ'ರೆಂದು ಹೇಳಿ ಜಾರಿಕೊಳ್ಳಬೇಕಾಯಿತು. ಮದಕರಿನಾಯಕ ಆ ವೀರಾಸನದ ಮೇಲೆ ಕುಳಿತು ಕುಂಭಗಳಲ್ಲಿ ಶತ್ರುರಕ್ತವನ್ನು ತುಂಬಿಸಿ ಅಭಿಷೇಕ ಮಾಡಿಸಿಕೊಂಡ!

ಕೇವಲ ತಾನೊಬ್ಬ ಇಂತಹ ಅಮಾನುಷವನ್ನು ಮಾಡಿದರೆ ಸಾಕೇನು? ತನ್ನ ದಂಡಿನವರಿಗೂ ಅಪ್ಪಣೆ ಮಾಡಿದ: 'ಇಂದು ನೀವೆಲ್ಲಾ ಶತ್ರು ತಲೆ ಬುರುಡೆಗಳನ್ನು ಒಲೆಗುಂಡಾಗಿ ಮಾಡಿಕೊಂಡು ಅದರ ಮೇಲೆ ಪಾತ್ರೆಗಳ

ನ್ನಿಟ್ಟು ಇಷ್ಟವಾದ ಮೃಗ ಪಕ್ಷಿಗಳ ಮಾಂಸವನ್ನು ಬೇಯಿಸಿ ತಿನ್ನಿ'ರೆಂದು ! ದೊರೆಯ ಅಪ್ಪಣೆಯನ್ನು ಶಿರಸಾವಹಿಸಿ ಪಾಲಿಸಿದರು ದಂಡಿನ ಜನ ! ದಾಖಲೆಗಳಲ್ಲಿ ಉಲ್ಲೇಖವಾಗಿರುವ ಈ ಪ್ರಸಂಗದ ಬಗ್ಗೆ ಆಲೋಚಿಸಿದಾಗ 'ಯುದ್ಧ ಮತ್ತು ಪ್ರೇಮ ಇವೆರಡರಲ್ಲಿ ಯಾವುದೂ ನಿಷಿದ್ಧವಲ್ಲ' ಎಂಬುದು ದೃಢವಾಗುತ್ತದೆ.*

---

* ಕೃತಜ್ಞತೆಗಳು : ಶ್ರೀಯುತರಾದ ಲಕ್ಷ್ಮಣ್ ತೆಲಗಾವಿ, ನಾ. ಪ್ರಭಾಕರ್ ಮತ್ತು ಲ. ನಾಗರಾಜ ಹೊಯ್ಸಳ ಅವರುಗಳಿಗೆ.

ಡಾ॥ ಸೂರ್ಯನಾಥ ಕಾಮತ್

ಉತ್ತರಕನ್ನಡದಲ್ಲಿ ರೈತರನ್ನು ಕೆರಳಿಸಿದ ಬ್ರಿಟಿಷ್ ನೀತಿಗಳು

ಕರ್ನಾಟಕದಲ್ಲಿ ೧೯೩೦–೩೪ರ ನಡುವೆ ಕರ ನಿರಾಕರಣ ಚಳವಳಿ ನಡೆದುದು ಸರ್ವವಿದಿತ. ಈ ಜಿಲ್ಲೆಯಲ್ಲಿ ರಾಷ್ಟ್ರೀಯ ಚಳವಳಿಯು ತೀವ್ರವಾಗಲು ಕಾರಣ ಅಲ್ಲಿ ಬಲು ಹಿಂದಿನಿಂದಲೂ ಬೆಳೆದು ಬಂದ ಬ್ರಿಟಿಷ್ ವಿರೋಧಿ ಭಾವನೆ. ಕರ ನಿರಾಕರಣೆಯನ್ನು ಯಶಸ್ವಿಯಾಗಿ ಕೆಲವು ತಾಲೂಕುಗಳಲ್ಲಾದರೂ ನಡೆಸಲು ಸಾಧ್ಯವಾದದ್ದು ಇಡೀ ಜಿಲ್ಲೆಯ ಜನರಲ್ಲಿ ಇದ್ದ ತೀವ್ರ ರಾಷ್ಟ್ರೀಯ ಜಾಗೃತಿ. ಕರ ನಿರಾಕರಣೆಯಲ್ಲಿ ಎಲ್ಲ ತಾಲೂಕುಗಳ ಒಟ್ಟು ೧೦೦೦ ಕುಟುಂಬಗಳು ಕಡೆತನಕ ಕಂದಾಯ ತೆರದೆ ಹೋರಾಡಿದರು. ಇದರಿಂದ ಮನೆ ಮಾರು ಕಳೆದುಕೊಂಡು ಅಪಾರ ಕಷ್ಟನಷ್ಟಗಳಿಗೆ ಇವರು ಒಳಗಾದದ್ದು ನಿಜವಾದರೂ ಆಯಾ ತಾಲೂಕುಗಳ ಸಮಗ್ರ ಜನತೆ ಹಾಗೂ ಇತರ ತಾಲೂಕುಗಳ ಬಹುಪಾಲು ಸಮಾಜ ಚಳವಳಿಗೆ ಬೆಂಬಲ ನೀಡಿರದಿದ್ದಲ್ಲಿ ಕರ ನಿರಾಕರಣ ಯಶ ಕಾಣುತ್ತಿರಲಿಲ್ಲ. ಕಂದಾಯ ನೀಡದವರ ಧೈರ್ಯಸ್ಥೈರ್ಯ ಕುಸಿಯುವ ಸ್ಥಿತಿಗೆ ನೆರೆಕರೆಯ ಜನತೆ ಅವಕಾಶ ನೀಡಿದ್ದರೆ ಪರಿಸ್ಥಿತಿ ವಿಚಿತ್ರವೇ ಆಗುತ್ತಿತ್ತು. ಕರಬಂದಿಯಲ್ಲಿ ಪಾಲುಗೊಂಡವರ ವಸ್ತುಗಳನ್ನು ಜಪ್ತಿ ಮಾಡಿ ಹರಾಜಿಗಿಟ್ಟಾಗಿನ ಸನ್ನಿವೇಶ ಜ್ಞಾಪಿಸಿದರೆ ಈ ವಿಚಾರ ಸ್ಪಷ್ಟವಾಗುತ್ತದೆ. ತೀರ ಅಗ್ಗದ ಬೆಲೆಗೆ—ಭೂಮಿ, ರಾಸು, ಪಾತ್ರೆಪರಡಿ, ಇ.—ಜಪ್ತಿ ಮಾಡಿದ್ದ ವಸ್ತುಗಳನ್ನು ಹರಾಜಿಗಿಟ್ಟರೂ ಸ್ಥಳೀಯರಾರೂ ಅವನ್ನು ಕೊಳ್ಳಲು ಮುಂದಾಗಲಿಲ್ಲ. ಸ್ಥಳೀಯ ಸರಕಾರೀ ನೌಕರರೂ ಹಿರಿಯ ಅಧಿಕಾರಿಗಳ ಒತ್ತಾಯಕ್ಕೆ ಒಳಗಾಗಿ ಅಂಥ ವಸ್ತುಗಳನ್ನು ಕೊಂಡಾಗ ಎದುರಿಸಬೇಕಾಗಿ ಬಂದ ಪ್ರತಿಭಟನೆಯ ಕತೆಗಳು ಕಾವ್ಯಕ್ಕೆ ವಸ್ತುಗಳು. ಕೆಲವು ಖಾಸಗಿ ವ್ಯಕ್ತಿಗಳಾದ ಸಿದ್ಧಾಪುರ ತಾಲೂಕಿನ ಉಪ್ಪಡಿಕೆ ರಾಮಯ್ಯ, ಅಂಕೋಲೆ ತಾಲೂಕಿಗೆ ಹೊರಗಿನಿಂದ ಬಂದು ಜಮೀನು ಖರೀದಿಸಿದ ಬಹಾದ್ದೂರ್‌ಖಾನ್ ಮುಂತಾದವರಿಗಾದ ಪಾಡು ಶೋಚನೀಯ.

ಚಳವಳಿಯ ಕಾಲಕ್ಕೆ ಬ್ರಿಟಿಷ್ ಪಾರ್ಲಿಮೆಂಟಿನ ಶಿಷ್ಟಮಂಡಲದ ಲಿಯೊನಾರ್ಡ್ ವ್ಯಾಟರ್ಸ್ ೧೯೩೨ರಲ್ಲಿ ಅಂಕೋಲೆಗೆ ಬಂದಿರಲು ಅಲ್ಲಿ ತಹಶಿಲ್ದಾರರು ಅವರಿಗೆ ನೀಡಿದ ಮಾಹಿತಿ ಪರಿಸ್ಥಿತಿಗೆ ಹಿಡಿದ ಕನ್ನಡಿ. "ತಾಲ್ಲೂಕಿನ ೩೮,೦೦೦ ಜನಸಂಖ್ಯೆಯಲ್ಲಿ ೧೫,೦೦೦ ಜನರು ಪ್ರತ್ಯಕ್ಷ ಕಾಂಗ್ರೆಸ್ಸಿನ ಚಟುವಟಿಕೆಯಲ್ಲಿ ಭಾಗ ವಹಿಸುವವರು, ೨೩,೦೦೦ ಜನರು ಕಾಂಗ್ರೆಸ್ಸಿನಲ್ಲಿ ಸಹಾನುಭೂತಿ ಉಳ್ಳವರು."

ಅ.ಭಾ. ಕಾಂಗ್ರೆಸ್ ನೇಮಿಸಿದ ಸಮಿತಿಯೊಂದರ ಮುಂದೆ ಚಳವಳಿಯ ಗತಿಯ ಬಗ್ಗೆ ಸಾಕ್ಷ್ಯ ನೀಡುತ್ತ ೧೯೩೨ರಲ್ಲಿ ಕೆ.ಪಿ.ಸಿ.ಸಿ. ಅಧ್ಯಕ್ಷ ಗಂಗಾಧರರಾವ್ ದೇಶಪಾಂಡೆಯವರು ಹೀಗೆ ಹೇಳಿದ್ದರು : "ನಾನು ನನ್ನ ಹೇಳಿಕೆಯಲ್ಲಿ ಕರ್ನಾಟಕದಲ್ಲಿ ಕಾರವಾರ ಜಿಲ್ಲೆ ಪರಿಸ್ಥಿತಿ ಕರ ನಿರಾಕರಣ ಚಳವಳಿಗೆ ಅನುಕೂಲವಾಗಿದೆಯೆಂದು ಹೇಳಿದ್ದೆನು. ಆ ಜಿಲ್ಲೆಯ ಜನರು ಸ್ವಭಾವತಃ ಶಾಂತ ವೃತ್ತಿಯವರೂ ಕೈಕೊಂಡ ಕೆಲಸವನ್ನು ಬಿಡದವರೂ ಆಗಿರಬೇಕೆಂದು ನಾನು ಭಾವಿಸಿದ್ದೆ. ಅಲ್ಲಿ ಬ್ರಾಹ್ಮಣ–ಬ್ರಾಹ್ಮಣೇತರವಾದವೂ ವಿಶೇಷವಾಗಿರಲಿಲ್ಲ. ಗಾಂಧೀಜಿ

ಯವರ ಬಗ್ಗೆ ಜನಸಾಮಾನ್ಯರ ನಿಷ್ಠೆಯಿತ್ತು. ಜನರು ಭಾವುಕರಾಗಿದ್ದು ತ್ಯಾಗಕ್ಕೆ ಸಿದ್ಧರಾಗಿದ್ದರು. ಈ ಅನುಕೂಲ ಪರಿಸ್ಥಿತಿ ಬೇರೆ ಯಾವ ಜಿಲ್ಲೆಯಲ್ಲೂ ಇರಲಿಲ್ಲ. ಈ ಜಿಲ್ಲೆಯಲ್ಲಿ ಕಾಲೇಜು ಬಿಟ್ಟು ಬಂದ ವಿದ್ಯಾರ್ಥಿಗಳು ಹಳ್ಳಿಗಳಿಗೆ ಹೋಗಿ ಚೆನ್ನಾಗಿ ಕೆಲಸ ಮಾಡಿದ್ದರು. ನಾನು ಎರಡು ಮೂರು ಸಾರಿ ಈ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದೆನು. ಆಗ ಎಲ್ಲ ಪರಿಸ್ಥಿತಿಯನ್ನು ಕಣ್ಣಾರೆ ನೋಡಿದ್ದೆನು." (ಶ್ರೀ ದೇಶಪಾಂಡೆ ಗಂಗಾಧರರಾಯರು, ಶ್ರೀ ವಡವಿ ಭಾಷಾಂತರಿಸಿದ ಆತ್ಮಚರಿತ್ರೆ, ಹುಬ್ಬಳ್ಳಿ, ೧೯೬೪, ಪು. ೪೭೪).

ಬಹುಪಾಲು ಕೃಷಿಕರಾಗಿರುವ ಈ ಜಿಲ್ಲೆಯ ಕೃಷಿಕರನ್ನೂ ವಿಶೇಷವಾಗಿ ಸತಾಯಿಸಿ, ವ್ಯಾಪಾರಿಗಳಲ್ಲೂ ನಾನಾ ರೀತಿಯಲ್ಲಿ ಅಸಮಾಧಾನ ಮೂಡಿಸಿ, ತಲೆತಲಾಂತರಗಳಿಂದ ಉಪ್ಪು ತಯಾರಿಸುತ್ತಿದ್ದ ಆಗೇರರಂಥ ಜನರನ್ನು ತೊಂದರೆಗೀಡುಮಾಡಿ, ಉತ್ತರಕನ್ನಡ ಜಿಲ್ಲೆಯ ಬ್ರಿಟಿಷರ ಬಗ್ಗೆ ತೀರ ಶತ್ರುತ್ವದ ಭಾವನೆ ಬೆಳೆಯಲು ಕಾರಣವಾದದ್ದು ಬ್ರಿಟಿಷರ ನೀತಿಗಳು. ಸ್ಥಳೀಯ ಅರಸರಾಗಿದ್ದ ಸೋಂದಾ ಹಾಗೂ ಬಿಳಗಿಯ ರಾಜರನ್ನೂ ನೆರೆಯವರೇ ಆಗಿದ್ದ ಕೆಳದಿಯ ಅರಸರನ್ನೂ ಪದಚ್ಯುತಗೊಳಿಸಿ ಈ ಭಾಗವನ್ನು ಆಳಲು ಬಂದ ಹೈದರ್, ಟಿಪ್ಪುಗಳ ಬಗೆಗೆ ಜನರಲ್ಲಿ ಒಡಮೂಡಿದ್ದ ಅಸಮಾಧಾನ ಬ್ರಿಟಿಷರು ಬಂದಾಗ ಕಡಿಮೆಯಾಗುವಂಥ ಸನ್ನಿವೇಶ ಇರಲಿಲ್ಲ. ೧೮೦೦ ರಿಂದ ೧೮೬೨ರವರೆಗೆ ದೂರದ ಮದ್ರಾಸಿನಿಂದ ಹಾಗೂ ೧೮೬೨ ನಂತರ ಮುಂಬೈಯಿಂದ ಆಳಲ್ಪಡುತ್ತಿದ್ದ ಈ ಜಿಲ್ಲೆಗೆ, ಎರಡು ಅಧಿಪತ್ಯಗಳಲ್ಲಿದ್ದಾಗಲೂ 'ದೊರೆ'ಯಿರುವುದು ದೂರದ ಮದ್ರಾಸ್ ಅಥವಾ ಮುಂಬೈಯಲ್ಲಿ. ಇಲ್ಲಿನ ಜನರ ಕೂಗು ಅಲ್ಲಿಗೆ ಕೇಳಿಸದು ; ಅಲ್ಲಿದ್ದ ಪ್ರಭುಗಳಿಗೆ ಇಲ್ಲಿಯವರ ಕೊರಗು ಕಾಣಿಸದು. ಇಂಥ ಸ್ಥಿತಿಯಲ್ಲಿ ಜನರ ಕಷ್ಟಕೋಟಲೆಗಳನ್ನು ಅರಿತು ಅದನ್ನು ಪ್ರಾಮಾಣಿಕವಾಗಿ ನಿವಾರಿಸುವ ಯತ್ನ ಸರಿಯಾಗಿ ಎಂದೂ ಆಗಲಿಲ್ಲ.

೧೮೦೦ರಲ್ಲಿ ಬ್ರಿಟಿಷರು ಇಲ್ಲಿನ ಆಡಳಿತವನ್ನು ವಹಿಸಿಕೊಂಡಾಗ, ಒಳ್ಳೆಯ ಅಧಿಕಾರಿಯೆಂದು ಖ್ಯಾತನಾದ ಮುನ್ರೋ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿ ನೇಮಿಸಲ್ಪಟ್ಟ. ಆತನ ಕಾಲದಲ್ಲಿ ನಡೆದ ಭೂಕಂದಾಯ ವ್ಯವಸ್ಥೆಯಲ್ಲಿ ಕಂದಾಯದ ದರದಲ್ಲಿ ಇಳಿತಾಯವಾದರೂ ಕಂದಾಯ ಸಂಗ್ರಹದಲ್ಲಿ ಪಾಲಿಸುವ ಕಟ್ಟುನಿಟ್ಟಿನಿಂದಾಗಿ ಕಂದಾಯದ ದರ ರೈತರಿಗೆ ಹೆಚ್ಚೆನಿಸುತ್ತಿತ್ತೆಂದು ಫ್ರಾನ್ಸಿಸ್ ಬುಕನನ್ ೧೮೦೧ರಲ್ಲಿ ಹೇಳಿದ್ದಾನೆ. (ಜರ್ನಿ, II, ಪು. ೩೨೬). ಮಳೆ-ಬೆಳೆಯ ಸ್ಥಿತಿಯನ್ನು ಗಮನಿಸದೆ ಆಗುತ್ತಿದ್ದ ಈ ಕಂದಾಯ ಸಂಗ್ರಹದ ಬಗ್ಗೆ ೧೮೩೧ರಲ್ಲಿ ನಡೆದ ಒಂದು ಪ್ರತಿಭಟನೆ ಸಶಸ್ತ್ರ ಬಂಡಾಯದ ರೂಪ ತಾಳಿತು. "ಮಳೆ-ಬೆಳೆಯ ಸ್ಥಿತಿ ಕೆಟ್ಟದ್ದಾಗಿದ್ದರಿಂದ ಕಂದಾಯ ಸಂಗ್ರಹಣೆಗೆ ಪ್ರತಿಭಟನೆ ಕಂಡುಬಂದಿತು," ಎಂದು ಈ ಬಗ್ಗೆ ಸರಕಾರ ಕೈಕೊಂಡರೂ "ಜಿಲ್ಲಾಧಿಕಾರಿ ಡಿಕಿನ್ಸನರ ಹೆಸರು ಕೆಡಿಸಲು ಹಾಗೂ ಕಂದಾಯ ಇಲಾಖೆಯಲ್ಲಿನ ಕೆಲವು ದೇಶೀಯ ಕ್ರಿಶ್ಚನ್ ನೌಕರರ ನೌಕರಿ ಕಡಿತ ಸಾಧಿಸಲು ಜಿಲ್ಲಾಧಿಕಾರಿಯ ಕಚೇರಿಯಲ್ಲಿದ್ದ ಕೆಲವು ಬ್ರಾಹ್ಮಣ ನೌಕರರ ಒಳಸಂಚು ಇದಕ್ಕೆ ಕಾರಣ" ಎಂಬ ವಿವರಣೆ ನೀಡಿ ಸಮಾಧಾನಪಟ್ಟುಕೊಂಡುದು ಇಲ್ಲಿ ಕಾಣಿಸುತ್ತದೆ. (ಜಿಲ್ಲಾ ಗ್ಯಾಸೆಟಿಯರ್, ೧೮೮೩, II, ಪು. ೧೫೨). ಕ್ಷಾಮ ಬಂದಾಗ, ಅಡಿಕೆ ಮರಕ್ಕೆ ಕೊಳೆರೋಗ ಬಂದಾಗ ಕಂದಾಯದಲ್ಲಿ ಸೂಟು ನೀಡಲು ಬ್ರಿಟಿಷರು ಮುಂದಾದ್ದು ತೀರ ನಿಧಾನವಾಗಿ.

ಅಮೆರಿಕನ್ ಅಂತರ್ಯುದ್ಧ ಕಾಲದಲ್ಲಿ ಕರ್ನಾಟಕದ ಒಳನಾಡಿನಲ್ಲಿ ಕಾಣಿಸಿಕೊಂಡ ಅರಳೆಯ ಉಬ್ಬರ ('ಕಾಟನ್‌ಬೂಮ್') ನಿಂದ ಕುಮಟಾ ಬಂದರಿಗೆ ಎಲ್ಲಿಲ್ಲದ ಮಹತ್ವ ಬಂತು. "ಕುಮಟಾ-ಧಾರವಾಡ" ಎಂದು ಖ್ಯಾತವಾದ ಹತ್ತಿ ಕುಮಟಾ ಬಂದರಿನಿಂದ ಇಂಗ್ಲೆಂಡ್ ಸೇರುತ್ತಿತ್ತು. ನಾಲ್ಕಾರು ವರ್ಷಗಳಲ್ಲಿ ಈ ಉಬ್ಬರ ಇಳಿದು, ಕುಮಟೆಗೆ ಹೊರಗಿಂದ ಬಂದು ನೆಲಸಿದ ವ್ಯಾಪಾರಿಗಳೂ ಸ್ಥಳೀಯರೂ ತೀರ ನಷ್ಟಕ್ಕೆ ಒಳಗಾದರು. ಇದರ ಹಿಂದೆಯೇ ಕಾರವಾರವು ಸರ್ವಋತು ಬಂದರಾಗುವುದೆಂಬ ವದಂತಿ ಹಬ್ಬಿತು. ಹಾಗೂ ಕಾರವಾರ-ಗದಗು ರೈಲು ಮಾರ್ಗಕ್ಕಾಗಿ ೧೮೬೯ರಲ್ಲಿ ಸರ್ವೇಕ್ಷಣೆ ಆಯಿತು. (ಆಗಿನ್ನೂ ಹುಬ್ಬಳ್ಳಿಗೆ ರೈಲು ಬಂದಿರಲಿಲ್ಲ). ಕಾರವಾರದಲ್ಲಿ ಆಗ ವಿದೇಶೀಯ ಎರಡು ಜಿನ್ನಿಂಗ್ ಫ್ಯಾಕ್ಟರಿಗಳೂ ಆದವು. ಆದರೆ ೧೮೭೨ರಲ್ಲಿ ಮರ್ಮುಗೋವಾ ಬಂದರನ್ನು ರಚಿಸಿ, ಅದನ್ನೇ ಮುಂದೆ

ರೈಲುಮಾರ್ಗಕ್ಕೆ ಜೋಡಿಸುವ ನಿರ್ಧಾರ ಆದಾಗ ಜಿಲ್ಲೆಯ ಜನಕ್ಕಾದ ನಿರಾಶೆ ಅಷ್ಟಿಷ್ಟಲ್ಲ. ಜತೆಗೆ ೧೮೮೭ರಲ್ಲಿ ಧಾರವಾಡ ಜಿಲ್ಲೆಯನ್ನು ಪುಣೆ, ಮುಂಬೈಗಳ ಜೊತೆ ನೇರವಾಗಿ ಸಂಪರ್ಕಿಸುವ ರೈಲುಮಾರ್ಗ ಆದಾಗ ಉತ್ತರಕನ್ನಡ ಜಿಲ್ಲೆಯ ಬಂದರುಗಳಿಂದ ಸಾಗುತ್ತಿದ್ದ ಧಾರವಾಡ ಜಿಲ್ಲೆ, ಬೆಳಗಾವಿ ಜಿಲ್ಲೆಯ ಪ್ರದೇಶಗಳ ಆಯಾತ ನಿರ್ಯಾತಗಳಿಗೆ ಬಹುಪಾಲು ಹೊಡೆತ ಬಿದ್ದಂತೆ ಆಯಿತು.

೧೮೭೮ರಲ್ಲಿ ಬ್ರಿಟಿಷರು ಉಪ್ಪಿನ ವ್ಯಾಪಾರವನ್ನು ಸರಕಾರೀ ಗುತ್ತಿಗೆಯಾಗಿ ಮಾಡಿ, "ಸಾಣೆಕಟ್ಟಾ, ಕುಮಟಾ, ಭಟ್ಕಳ, ಶಿರಾಲಿ ಮತ್ತು ಬೈಲೂರುಗಳಲ್ಲಿ ಕೆಲಸ ಮಾಡುತ್ತಿದ್ದ" (ಜಿ. ಗ್ಯಾ., ೧೮೮೩, II, ಪು. ೭೨) ಉಪ್ಪಿನ ಕಳಗಳನ್ನು ಮುಚ್ಚುವಂತೆ ಆಯಿತು. ಸಾಣೆಕಟ್ಟೆಯಲ್ಲಿ ಮಾತ್ರ ಸರಕಾರೀ ಗುತ್ತಿಗೆಯ ಸುಪರ್ದಿಯಲ್ಲಿ ಉಪ್ಪಿನ ಉತ್ಪಾದನೆಯಾಗುವಂತಾಯಿತು. ಕರಾವಳಿಯ ಇತರಕಡೆ ಇರುವ ಅಗೇರರು ನಿರುದ್ಯೋಗಿಗಳಾದರು. ಉಪ್ಪು ತುಟ್ಟಿಯಾಗಿ ಕೃಷಿಗೂ ಅದನ್ನು ಬಳಸುವುದು ಕಡಿಮೆಯಾಯಿತು. ಕರಾವಳಿಯ ಜನಕ್ಕೆ ಅಗ್ಗವಾಗಿ ಇಲ್ಲದೆ ಪುಕ್ಕಟೆಯಾಗಿ ಸಿಗುತ್ತಿದ್ದ ಉಪ್ಪು ಸಿಗದಂತಾಗಿ ಅದರ ಚುರುಕು ಪ್ರತಿಯೊಂದು ಕುಟುಂಬಕ್ಕೂ ಮುಟ್ಟಿತು. ೧೮೭೮ರಲ್ಲಿ ೮೦ ಪೌಂಡಿನ ಒಂದು ಮಣಕ್ಕೆ ಒಂದು ಆಣೆ ನಾಲ್ಕು ಪೈ. ಬೆಲೆ ಇದ್ದ ಉಪ್ಪು ೧೮೮೦ರಲ್ಲಿ ಆರು ಆಣೆಗೆ ಏರಿತು. ಇದಕ್ಕೆ ಎರಡೂವರೆ ರೂಪಾಯಿ ಸುಂಕವಾಗಿ ಮಣ ಉಪ್ಪಿನ ಅಸಲು ಬೆಲೆ ಮೂರು ರೂ.ಗೆ ಸಮೀಪವಾಯಿತೆಂದು ಕೆನರಾ ಗ್ಯಾಸೆಟಿಯೆರ್ ಹೇಳಿದೆ (ಪು. ೭೩). ಬಳಕೆದಾರರಿಗೆ ಇದು ಮಣಕ್ಕೆ ಮೂರು ರೂ.ಗೂ ಹೆಚ್ಚಾಯಿತೆಂದು ಹೇಳಬೇಕಾಗಿಲ್ಲ.

ಸರಕಾರೀ ಅರಣ್ಯಗಳನ್ನು ಗುರುತಿಸುವ ೧೮೬೮ರ ಕಾನೂನು ಹಾಗೂ ೧೮೭೮ರ ಭಾರತೀಯ ಅರಣ್ಯಗಳ ಕಾನೂನು(೧೮೭೮ರ VII ಕಾನೂನು)ಗಳ ಪ್ರಕಾರ ಜಿಲ್ಲೆಯ ಒಟ್ಟು ೩,೯೧೦ ಚದರ ಮೈಲಿಗಳ ಪ್ರದೇಶದಲ್ಲಿ ಶೇಕಡ ೯೦ಕ್ಕೆ ಸಮನಾದ ೩೫೪೮ ಚದರ ಮೈಲಿ ಅರಣ್ಯ ಪ್ರದೇಶದಲ್ಲಿ ೬೮೩.೬೭ ಚದರ ಮೈಲಿ ಪ್ರದೇಶಗಳನ್ನು ಕಾದಿಟ್ಟ ಅರಣ್ಯವೆಂದೂ ೨,೮೬೫ ಚದರ ಮೈಲಿ ಪ್ರದೇಶವನ್ನು ರಕ್ಷಿತ ಅರಣ್ಯವೆಂದೂ ಘೋಷಿಸಲಾಯಿತು. ಕಾದಿಟ್ಟ ಅರಣ್ಯಗಳಲ್ಲಿ ಜನಸಾಮಾನ್ಯರು ಪ್ರವೇಶಿಸುವಂತಿಲ್ಲ, ಆದರೆ ರಕ್ಷಿತ ಅರಣ್ಯಗಳನ್ನು ಬಳಸಲು ಕೆಲವೊಂದು ಹಕ್ಕುಗಳನ್ನೂ ಸವಲತ್ತುಗಳನ್ನೂ ಜನಸಾಮಾನ್ಯರಿಗೆ ನೀಡಲಾಗಿತ್ತು. ಆದರೆ ಅರಣ್ಯ ಸಂಪತ್ತಿನ ರಕ್ಷಣೆಯ ಬಗ್ಗೆ ಎಷ್ಟೊಂದು ಮುತುವರ್ಜಿ, ಭ್ರಮೆ ಹಾಗೂ ಕಟ್ಟುನಿಟ್ಟಿನ ನಿಲುವುಗಳನ್ನು ಸರಕಾರ ಹೊಂದಿತ್ತೆಂದರೆ, ಮನುಷ್ಯರಿಗಿಂತ ಮರಗಳೇ ಮುಖ್ಯ, ಕೃಷಿಗಿಂತ ಕಾಡೇ ಪ್ರಧಾನ ಎಂಬ ನಿಲುವು ಬೆಳೆಯಿತು. ಅರಣ್ಯ ಇಲಾಖೆಯ ನೌಕರರು ನಿರಂಕುಶ ಸರ್ವಾಧಿಕಾರಿಗಳಾಗಿ, ಜಿಲ್ಲಾಧಿಕಾರಿ ಹಾಗೂ ಇತರ ನಾಗರಿಕ ಆಡಳಿತದವರಿಗೂ ಮೀರಿದ ಒಂದು ಸಮಾಂತರ ಆಡಳಿತ ವ್ಯವಸ್ಥೆಯನ್ನು ಸೃಷ್ಟಿಸಿ ಜಿಲ್ಲೆಯ ರೈತರು ಸರಕಾರದ ಶತ್ರುಗಳಾಗುವ ವಾತಾವರಣವು ಉಂಟಾಗಲು ಕಾರಣರಾದರು. ಈ ಬಗ್ಗೆ ಗಣ್ಯ ಸ್ವಾತಂತ್ರ್ಯ ಯೋಧ ದಿ॥ ಶಂಕರ ಗುಲವಾಡಿಯವರ ಮಾತಿನಲ್ಲಿ ಕೇಳಿ: "ಜಿಲ್ಲೆಯಲ್ಲಿ ಆಗ ಬ್ರಿಟಿಷ್ ವಿರೋಧೀ ವಾತಾವರಣ ಬಲವಾಗಿತ್ತು. ಹೈದರ್–ಟಿಪ್ಪುಗಳ ಕಾಲದಿಂದಲೂ ಜಿಲ್ಲೆಯ ಜನ ಬಂಡಾಯ ವೃತ್ತಿಯನ್ನು ಮೈಗೂಡಿಸಿಗೊಂಡಿದ್ದರು...ಜಿಲ್ಲೆಯನ್ನು ಮೀಸಲಿಟ್ಟ ಅರಣ್ಯಗಳ ಪ್ರದೇಶವಾಗಿ ಬೆಳೆಯಿಸಬೇಕೆಂಬ ಬ್ರಿಟಿಷರ ಧೋರಣೆಯಿಂದ ಜನರಿಗೆ ಅಪಾರ ಹಿಂಸೆಯಾಗಿತ್ತು. ಜಿಲ್ಲಾ ಅರಣ್ಯಾಧಿಕಾರಿ ಜಿಲ್ಲಾಧಿಕಾರಿಗೂ ಹೆಚ್ಚು ಅಧಿಕಾರ ಚಲಾಯಿಸುತ್ತಿದ್ದ. ಅರಣ್ಯದಿಂದ ಸೌದೆ, ಹುಲ್ಲು ತಂದ ಇಲ್ಲವೆ ಅರಣ್ಯಕ್ಕೆ ಬೆಂಕಿ ತಗಲಲು ಕಾರಣರಾದ ಜನರನ್ನೂ ಇಂಥ ಗುಮಾನಿಯ ಮೇಲೆ ನಿರಪರಾಧಿಗಳನ್ನೂ ಹಿಂಸಿಸುವ ಆಗಿನ ಪದ್ಧತಿ ಅಸಹನೀಯ. ಈ ಸಂಬಂಧ ಒಂದು ಖಟ್ಲೆ ಆಯಿತೆಂದರೆ, ನಿರಪರಾಧಿಗಳಾದವರೂ ಮ್ಯಾಜಿಸ್ಟ್ರೇಟರು ಕರೆದ ಊರಿಗೆ ಹಾಜರಾಗಬೇಕು. ಈಸಲ ಮುದ್ದತ್ತು ಹೊನ್ನಾವರದಲ್ಲಿ, ಮುಂದಿನ ಸಲ ಶಿರಸಿ, ನಂತರ ಕಾರವಾರ, ಮುಂದಿನದು ಭಟ್ಕಳ, ಹೀಗೆ ಎಲ್ಲೆಂದರಲ್ಲಿ ಆಪಾದಿತರು ಹಾಜರಾಗಬೇಕು. ಖಟ್ಲೆಯಿಂದ ಪಾರಾಗಲು ಊರು ಬಿಟ್ಟವರೂ ಉಂಟು. ಒಂದು ಪ್ರಕರಣದಲ್ಲಿ ಒಬ್ಬ ವ್ಯಕ್ತಿ ಅರಣ್ಯಾಧಿಕಾರಿಗಳ ಹಿಡಿತದಿಂದ ಪಾರಾಗಲು ಕ್ರೈಸ್ತ ಮತಕ್ಕೆ ಸೇರಲು ಒಪ್ಪಿದ್ದೂ ಉಂಟು. ಅರಣ್ಯಾಧಿಕಾರಿಗಳು ಹಾಕುವ ಸುಳ್ಳು ಖಟ್ಲೆಗಳು ಎಂಥವೆಂದರೆ, ಒಂದೆಡೆ ಯಾವುದೇ ಕಾರಣದಿಂದ ಅಡವಿಗೆ ಬೆಂಕಿ ತಗಲಿತಾದರೆ ಅದಕ್ಕೆ ಯಾವದೋ ಶವಸಂಸ್ಕಾರ ಕಾರಣ

ಎಂದು, ಯಾರದೇ ಮನೆಯಲ್ಲಿ ಮರಣ ಸಂಭವಿಸಿದ್ದಲ್ಲಿ, ಅಂಥವರ ಮೇಲೆ ನಿರ್ದಯವಾಗಿ ಸುಳ್ಳು ಖಟ್ಲೆ ಹಾಕುತ್ತಿದ್ದರು. ಈ ಪದ್ಧತಿ ಎಷ್ಟು ಸಾಮಾನ್ಯವಾಯಿತೆಂದರೆ, ಇಂಥ ಒಂದು ಪ್ರಕರಣದಲ್ಲಿ ಆ ಊರಲ್ಲಿ ಒಂದು ಲಿಂಗಾಯತರಲ್ಲಿ ಮರಣ ಸಂಭವಿಸಿರಲು, ಅವರ ಮೇಲೆ ಅಡವಿಗೆ ಬೆಂಕಿ ಹಾಕಿದ ಆಪಾದನೆ ಹೇರಿ ಖಟ್ಲೆ ಹಾಕಲಾಗಿತ್ತು. ವಾಸ್ತವವಾಗಿ ಲಿಂಗಾಯತರು ಸತ್ತವರ ಸಮಾಧಿ ಮಾಡುವರಲ್ಲದೆ, ಸುಡರು. ಅಧಿಕಾರಿಗಳ ಕುರುಡು ಅಧಿಕಾರ ಚಲಾವಣೆಗೆ ಇದೊಂದು ಉದಾಹರಣೆ. ಆಗಲೇ ವನದುಃಖ ನಿವಾರಣಾ ಸಭೆ, ಸಮ್ಮೇಳನಗಳ ಸಂಘಟನೆ ನಡೆದಿದ್ದವು. ಈ ಸರಕಾರ ವಿರೋಧೀ ಚಟುವಟಿಕೆಗಳು ಜಿಲ್ಲೆಯ ರಾಷ್ಟ್ರೀಯ ಚಟುವಟಿಕೆಗಳಿಗೆ ಹಿನ್ನೆಲೆ ಒದಗಿಸಿದವು." (ಸ್ವಾಸಂಸ್ಮೃ, III, ಪು. ೮೮). ಶಂಕರ ಗುಲವಾಡಿಯವರ ಈ ಹೇಳಿಕೆ ಸಮಸ್ಯೆಯ ಹಿನ್ನೆಲೆಯ ಪರಿಚಯ ನೀಡುತ್ತದೆ.

ಆದರೆ ಜಿಲ್ಲೆಯ ರೈತರ 'ವನದುಃಖ' ಹಾಗೂ ಅರಣ್ಯ ಇಲಾಖೆಯ ನೌಕರರ ಕಿರಾತವರ್ತನೆಯ ವಿವರ ನಿಜವಾಗಿಯೂ ಹೇಡಿಗಳನ್ನೂ ಬ್ರಿಟಿಷ್ ವಿರೋಧಿಗಳಾಗಿ ಮಾಡುವಂಥದ್ದಿತ್ತು. ೧೮೮೬ರಲ್ಲೇ ವನದುಃಖ ನಿವಾರಿಣಿ ಸಭೆಯನ್ನು ಸಂಘಟಿಸಲಾಗಿತ್ತು. ಮುಂದೆ ೧೮೮೭ರಲ್ಲಿ ಮತ್ತೊಮ್ಮೆ ಶಿರಸಿಯಲ್ಲಿ ಇಂಥ ಸಭೆಯನ್ನು ಸಂಘಟಿಸಿ ಜನರ ವನದುಃಖಗಳ ಕಡೆ ದೇಶದ ಗಮನ ಹರಿಸಲು ೧೮೮೭ರ ಮದ್ರಾಸಿನಲ್ಲಿ ನಡೆಯುವ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಪುಂಡಲೀಕ ನಾರಾಯಣ ಪಂಡಿತ್ ಎಂಬ ಶಿರಸಿಯ ವ್ಯಕ್ತಿಯನ್ನು ಕಳುಹಿಸಲಾಗಿತ್ತು. (ಉ.ಕ.ಗ್ಯಾ, ೧೯೮೫, ಪು. ೧೬೫). ಇಪ್ಪತ್ತನೆಯ ಶತಮಾನ ಬಂದಾಗ ಈ ಸಮಸ್ಯೆ ಉಲ್ಬಣಿಸಿತು. ಅರಣ್ಯಾಧಿಕಾರಿಗಳ ಕಿರಾತ ವರ್ತನೆ, ವನ್ಯಪ್ರಾಣಿಗಳ ಹಾವಳಿ, ಅವುಗಳಿಂದ ಬೆಳೆಗಳಿಗೆ ಸರಕಾರದಿಂದ ಸರಿಯಾದ ರಕ್ಷಣೆ ಸಿಗದಿರುವುದು ಮುಂತಾದ ಪರಿಸ್ಥಿತಿ ಇನ್ನಷ್ಟು ತೀವ್ರವಾಯಿತು. ೧೯೧೬ರಲ್ಲಿ ಬಿಳಗಿಯಲ್ಲಿ ಮತ್ತೆ ವನದುಃಖ ನಿವಾರಣಾ ಸಮ್ಮೇಳನವನ್ನು ಶಿರಸಿಯ ಕೊಲ್ಲಾಳಿ ವಕೀಲರ ಅಧ್ಯಕ್ಷತೆಯಲ್ಲಿ ಸಂಘಟಿಸಲಾಯಿತು. ಇಂಥ ಎರಡನೆಯ ಸಮ್ಮೇಳನವು ಬಿಳಗಿಯಲ್ಲೇ ೧೯೧೭ರಲ್ಲಿ ದೊಡ್ಮನೆ ನಾರಾಯಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ದೊಡ್ಮನೆ ನಾರಾಯಣ ಹೆಗ್ಡೆಯವರ ಮುಂದಾಳುತನದಲ್ಲಿ ಜಿಲ್ಲೆಯಲ್ಲಿ ಟಿಳಕರ ಹೋಮ್ ರೂಲ್ ಲೀಗ್‌ನ ಶಾಖೆ ಸಂಘಟಿಸಿದಾಗ ಸಿದ್ದಾಪುರ ತಾಲೂಕಿನಲ್ಲೇ ೫೦ ಸದಸ್ಯರು ಇದ್ದರೆಂದು ಕನ್ನಳ್ಳಿ ಶಿವರಾಮ ಹೆಗ್ಡೆ ಹೇಳಿದ್ದಾರೆ. (ಸ್ವಾಸಂಸ್ಮೃ, I, ಪು. ೨೪೭). ಇದೇ ಹಿನ್ನೆಲೆಯಲ್ಲಿ ಕುಮಟಾದಿಂದ "ಕಾನಡಾ ಧುರೀಣ" (೧೯೧೮) ಪತ್ರಿಕೆಯನ್ನು ಗಣಪತಿರಾವ್ ಮಾಸೂರ್ ಹಾಗೂ ರಾಘವೇಂದ್ರರಾವ್ ಬಸರೂರ್ ಇವರು ಆರಂಭಿಸಿದರು. ಗುಲ್ವಾಡಿ ಅಣ್ಣಾಜಿರಾಯರನ್ನು ಕುಂದಾಪ್ರ[illegible] ಕರೆದು ತಂದು ಇದರ ಸಂಪಾದಕರನ್ನಾಗಿ ಮಾಡಲಾಯಿತು.

ರೈತವರ್ಗಗಳ ವನದುಃಖ ವಿರೋಧೀ ಚಳುವಳಿಯ ನೇತೃತ್ವ ವಹಿಸಿದ ಗಣಪತಿರಾವ್ ಮಾಸೂರರು ೧೯೧೮ರಲ್ಲಿ ಅಂದಿನ ಜಿಲ್ಲಾಧಿಕಾರಿಯಾಗಿದ್ದ ಎಚ್. ಟಪ್ಪರ್ ಅವರಿಗೆ ಬರೆದ ಪತ್ರವು ಅಂದಿನ ಪರಿಸ್ಥಿತಿಯ ಸಮಕಾಲೀನ ಚಿತ್ರವನ್ನು ಸ್ಪಷ್ಟವಾಗಿ ನೀಡುತ್ತಿದ್ದು (ಎ ರೆಪ್ರೆಸೆಂಟೇಶನ್ ಟು ದಿ ಕಲೆಕ್ಟರ್) ಅದನ್ನು ಇಲ್ಲಿ ದೀರ್ಘವಾಗಿ ಭಾಷಾಂತರಿಸಿ ಉದ್ಧರಿಸಿದೆ: ಉತ್ತರ ಕನ್ನಡ ಜಿಲ್ಲೆಯ ಬಹುಸಂಖ್ಯಾ ಜನರ ಜೀವಾಳ ಕೃಷಿಯೇ ಆಗಿದ್ದು ಜಿಲ್ಲೆಯಲ್ಲಿ ಉಲ್ಲೇಖನೀಯವಾದ ಯಾವುದೇ ಕೈಗಾರಿಕೆಯು ಇಲ್ಲ, ಹಾಗೂ ದೇಶದ ಕೃಷಿ ಸಾಧ್ಯತೆ ಹಾಗೂ ಆರ್ಥಿಕ ಪ್ರಗತಿಗಳನ್ನು ಮುಂದುವರಿಸಲು ಭಾರತ ಸರಕಾರವು ಖಚಿತ ಗುರಿಯನ್ನು ಹೊಂದಿದ್ದು, ಆ ದೃಷ್ಟಿಯಿಂದಲೇ ಕೃಷಿ ಇಲಾಖೆಯನ್ನೂ ಆರಂಭಿಸಲಾಗಿದೆ, ಎಂಬ ಸಂಗತಿಯನ್ನು ಆರಂಭದಲ್ಲಿ ಹೇಳಿದೆ. "ಆದರೆ ನಮಗೆ ತೀರ ವಿಷಾದ ಹುಟ್ಟಿಸುವ ವಿಷಯವೆಂದರೆ, ನಿರೀಕ್ಷಿಸಿದ ದಿಕ್ಕಿನಲ್ಲಿ ಪ್ರಗತಿ ಸಾಧಿಸುವ ಬದಲಿಗೆ, ಕೃಷಿಯು ಒಂದೇ ಸಮನೆ ನಶಿಸುತ್ತಿದೆ — ಕೃಷಿ ಭೂಮಿಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ, ಹೊಸ ಬೆಳೆಗಳನ್ನು ರೂಢಿಗೆ ತರುತ್ತಲಿದ್ದರೂ ಒಟ್ಟು ಕೃಷಿ ಉತ್ಪನ್ನದ ಪ್ರಮಾಣ ಕುಸಿಯುತ್ತಿದೆ. ಕೃಷಿಕನ ಬಡತನ ಹೆಚ್ಚುತ್ತಲಿದೆ ಹಾಗೂ ಕೃಷಿಕನಲ್ಲಿ ಅವನಿಗೆ ಚೈತನ್ಯ ನೀಡಲು ಇರಬೇಕಾದ ಉತ್ಸಾಹ ಕುಗ್ಗುತ್ತಿದೆಯೆಂಬುದು ಎಲ್ಲಕ್ಕೂ ಹೆಚ್ಚು ಕೆಡುಕಿನ ಸಂಗತಿ", ಎಂದು ಪತ್ರದಲ್ಲಿ ಹೇಳಿ, ಈ ಬಗ್ಗೆ ಸೂಕ್ತ ಅಂಕೆ ಸಂಖ್ಯೆಗಳನ್ನು ಸಾಕ್ಷ್ಯವಾಗಿ ತಾನು ನೀಡುವುದಾಗಿ ಪತ್ರದಲ್ಲಿ ಹೇಳಿದೆ. "ಅರಣ್ಯ

ಇಲಾಖೆಯ ಹದ್ದುಬಸ್ತಿನ ಕ್ರಮಗಳು ರೈತನನ್ನು ಪ್ರತಿಯೊಂದು ದಿಕ್ಕಿನಲ್ಲೂ ಅಡಚಣೆಗಳಿಗೆ ಒಳಪಡಿಸಿ, ದುಡಿಮೆ ಮತ್ತು ಉದ್ಯಮಶೀಲತೆಗೆ ಇರಬಹುದಾದ ಎಲ್ಲ ಆಕರ್ಷಣೆಗಳಿಂದ ಅವನನ್ನು ವಂಚಿತನಾಗಿ ಮಾಡಿ" ಕೆಂಗೆಡಿಸುವ ಸನ್ನಿವೇಶವನ್ನು ಸೃಷ್ಟಿಸಿವೆ, ಎಂದು ಅವರು ಹೇಳಿದ್ದಾರೆ. "ಕೆನರಾ ಜಿಲ್ಲೆಯಲ್ಲಿ ರೈತರಿಗೆ ಅರಣ್ಯ ಇಲಾಖೆಯ ವಿರುದ್ಧ ಇರುವ ತಕರಾರುಗಳು ಹೊಸದಾದವುಗಳೇನೂ ಅಲ್ಲ. ಅವುಗಳು ಬಲು ಹಿಂದಿನಿಂದಲೂ ಇದ್ದು, ೧೯೦೨ ರಿಂದ ತೀವ್ರವಾಗಿವೆ. ಜಿಲ್ಲಾಧಿಕಾರಿಯೂ ಮುಂಬೈ ಸರಕಾರವೂ ಇವುಗಳ ನಿವಾರಣೆಗೆ ಹಿಂದಿನಿಂದಲೂ ಬಹಳ ಸಲ ಪ್ರಯತ್ನಿಸುತ್ತ ಬಂದರೂ ಈ ಯತ್ನ ಫಲಪ್ರದವಾಗಿಲ್ಲ. ಇದರ ಪರಿಣಾಮವೆಂದರೆ ಅರಣ್ಯ ಇಲಾಖೆಯನ್ನು ಪರಿಸ್ಥಿತಿಯ ಪೂರ್ಣ ಒಡೆಯನನ್ನಾಗಿ ಮಾಡಿ, ಅವರು ತಮಗೆ ಇಷ್ಟಬಂದಂತೆ ವರ್ತಿಸಲು ಬಿಟ್ಟು, ಕಂದಾಯ ಇಲಾಖೆಗೆ ಅರಣ್ಯ ಇಲಾಖೆಯ ಮೇಲೆ ಯಾವುದೇ ಹತೋಟಿಯಿಲ್ಲದಂತೆ ಆದುದು, ಮತ್ತು ಕಂದಾಯ ಇಲಾಖೆಗೆ ಅರಣ್ಯ ಇಲಾಖೆಯ ಮೇಲೆ ಇದ್ದ ಹಿಡಿದ ನಾಮಮಾತ್ರವಾದದ್ದು," ಎಂದು ಆಡಳಿತದಲ್ಲಿ ಆಗಿದ್ದ ಅವ್ಯವಸ್ಥೆಯನ್ನು ಪತ್ರದಲ್ಲಿ ಎತ್ತಿ ತೋರಿಸಲಾಗಿದೆಯಲ್ಲದೆ, ಈ ಬಗ್ಗೆ ಮದ್ರಾಸ್ ಸರಕಾರಕ್ಕೆ ೧೮೬೩ರಲ್ಲೇ ಲಂಡನ್ನಲ್ಲಿರುವ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ನೀಡಿದ ಎಚ್ಚರಿಕೆಯನ್ನು ಉದ್ಧರಿಸಿದೆ: "ನಿಯಮಗಳನ್ನು ರಚಿಸುವಾಗ ಕಂದಾಯ ಇಲಾಖೆಯ ಸಮ್ಮತಿ ಪಡೆಯಬೇಕು. ಅರಣ್ಯಗಳು ಕೃಷಿಗೆ ನಿಕಟ ಸಂಬಂಧವುಳ್ಳವು. ಹೀಗಾಗಿ ಅರಣ್ಯ ಇಲಾಖೆಯ ಜಿಲ್ಲಾಧಿಕಾರಿ ಹಾಗೂ ಅವರ ಅಧೀನ ಅಧಿಕಾರಿಗಳ ಸಂಬಂಧ ಸಂಪರ್ಕಗಳೊಂದಿಗೆ ಕಟ್ಟುನಿಟ್ಟಾಗಿ ಕೆಲಸ ಮಾಡಬೇಕು."

ಇದಲ್ಲದೆ ಮುಂಬೈ ಸರಕಾರವೂ ಈ ಬಗ್ಗೆ ನೀಡಿದ್ದ ಎಚ್ಚರಿಕೆಯನ್ನೂ ಇಲ್ಲಿ ಉದ್ಧರಿಸಿದೆ: "ಅರಣ್ಯ ರಕ್ಷಕರೂ ಅರಣ್ಯಾಧಿಕಾರಿಗಳೂ ತಮ್ಮ ಕಾರ್ಯೋತ್ಸಾಹದಿಂದ ಮಾಡುತ್ತಿರುವ ಒಳ್ಳೆಯ ಕೆಲಸದ ಬಗ್ಗೆ ಸರಕಾರಕ್ಕೆ ತಿಳಿದಿದೆ. ಆದರೆ ಸ್ಥಳೀಯರ ಅವಶ್ಯಕತೆಗಳ ಪೂರೈಕೆ ಹಾಗೂ ಅವರಿಗೆ ನೀಡಿರುವ ಸವಲತ್ತುಗಳ ರಕ್ಷಣೆಗೆ ಅರಣ್ಯಾಧಿಕಾರಿಗಳ ಅತಿಯಾದ ಉತ್ಸಾಹದ ಅರಣ್ಯ ರಕ್ಷಣಾ ಕ್ರಮಗಳಿಂದ ಸರಕಾರದ ಸದುದ್ದೇಶಗಳೇ ವ್ಯರ್ಥವಾಗುವ ಭಯವಿರುವುದರಿಂದ ಕಂದಾಯ ಇಲಾಖೆಯ ಅಧಿಕಾರಿಗಳು ಅರಣ್ಯಾಧಿಕಾರಿಗಳ ಮೇಲೆ ಎಚ್ಚರಿಕೆಯ ಕಣ್ಣಿಡಬೇಕು." ಈ ಸರಕಾರೀ ದಾಖಲೆಗಳೊಳಗಣ ಅಂಶಗಳನ್ನು ಉದ್ಧರಿಸಿದ ಈ ಪತ್ರ ಮುಂದೆ ಹೀಗೆ ಹೇಳುತ್ತದೆ: "ಈ ಜಿಲ್ಲೆಯ ಹಿಂದಿನ ಹಲವು ಜಿಲ್ಲಾಧಿಕಾರಿಗಳು ಬೇಸಾಯಗಾರರ ಹಿತರಕ್ಷಣೆಗೆ ಬೇರೆ ಬೇರೆ ಕಾರಣಗಳಿಂದ ಮುಂದಾಗಿದ್ದರಾದರೂ, ವಿಚಿತ್ರ ಸನ್ನಿವೇಶಗಳಿಂದಾಗಿ ಅವರು ಇದರಲ್ಲಿ ತೊಡಗದಂತೆ ಅರಣ್ಯ ಇಲಾಖೆಯು ಅವರನ್ನು ತಡೆಯುತ್ತ ಬಂದಿದೆ. ಒಬ್ಬ ಜಿಲ್ಲಾಧಿಕಾರಿಯು ಈ ಜಿಲ್ಲೆಯಲ್ಲಿ ಅಧಿಕಾರ ವಹಿಸಿಕೊಂಡ ನಂತರ ಬಹಳ ದಿನಗಳವರೆಗೆ ಅರಣ್ಯ ಇಲಾಖೆಯ ನಿಲುವಿನ ಜೊತೆ ಭಿನ್ನಭಿಪ್ರಾಯ ಪ್ರಕಟಿಸಲು ಸಿದ್ಧನಾಗಿರುವುದಿಲ್ಲ. ಇದು ಜನತೆಗೆ ಅರ್ಥವಾಗಿದೆ. ಆದರೆ, ಜನಸಂಪರ್ಕ ಬೆಳೆದು ಅವರ ಅವಶ್ಯಕತೆಗಳ ಸ್ಪಷ್ಟಕಲ್ಪನೆ ಆತನಿಗೆ ಬಂದಂತೆ, ಆತನ ನಿಲುವು ಬದಲಾಗಿ ಅರಣ್ಯ ಇಲಾಖೆಯ ಅಧಿಕಾರಿಗಳ ದೃಷ್ಟಿಕೋನ ತನ್ನ ಮೇಲೆ ಪ್ರಭಾವ ಬೀರದಂತೆ ಆತ ನೋಡಿಕೊಳ್ಳುತ್ತಾನೆ... ಆದರೆ ಆತ ಜನೋಪಯೋಗಿ ಕ್ರಮಗಳನ್ನು ಕೈಗೊಳ್ಳಲು ಮುಂದಾಗುವಷ್ಟರಲ್ಲಿ ಆತನು ಬೇರೆ ಜಿಲ್ಲೆಗೆ ವರ್ಗಾಯಿಸಲ್ಪಡುತ್ತಾನೆ... ಒಟ್ಟಿನಲ್ಲಿ ರೈತರಿಗೆ ಘಾತಕವಾದ ಅರಣ್ಯ ಇಲಾಖೆಯ ಧೋರಣೆಗೆ ಹೆಚ್ಚು ಹೆಚ್ಚು ಬಲ ಬಂದಂತಾಗಿ ಅದಕ್ಕೆ ಕಾಲಕಾಲಕ್ಕೆ ಬೀಳುವ ಕಡಿವಾಣವು ಕೇವಲ ತಾತ್ಪೂರ್ತಿಕ ಅಥವಾ ಪರಿಣಾಮರಹಿತವಾಗಿದೆ."

ಪತ್ರದಲ್ಲಿ ಈ ಬಗ್ಗೆ ಉದಾಹರಣೆಗಳನ್ನು ಕೊಡಲಾಗಿದೆ. ಅರಣ್ಯ ಇಲಾಖೆಯ ಧೋರಣೆ ಹಾಗೂ ಅನ್ಯ ವಿಕಟ ನೀತಿಗಳಿಂದಾಗಿ ಉತ್ತರಕನ್ನಡ ಜಿಲ್ಲೆಯಲ್ಲಿ ೧೮೯೦ರಲ್ಲಿ ೨,೪೦,೩೯೯ ಇದ್ದ ಕೃಷಿ ಭೂಮಿಯು ೧೯೧೫ರಲ್ಲಿ ೨,೧೦,೨೮೬ಕ್ಕೆ ಇಳಿದು ೩೦,೧೧೩ ಎಕ್ರೆಗಳಷ್ಟು ಭೂಮಿ ಹಾಳುಬೀಳುವಂತಾಯಿತು. ಅದೇ ರೀತಿ ಬೀಳು ಭೂಮಿಯು ೧೮೮೫-೮೬ರಲ್ಲಿ ೭೬,೫೮೧ ಎಕ್ರೆ ಇದ್ದುದು ೧೯೧೪-೧೫ರಲ್ಲಿ ೧,೨೮,೫೫೭ ಆಯಿತು. ಕೃಷಿ ಪ್ರಧಾನವಾದ ಶೇಕಡ ೧೦ಕ್ಕೂ ಕಡಿಮೆ ಭೂಮಿ ಕೃಷಿಗೆ ಸಿಗುತಿದ್ದ ಜಿಲ್ಲೆಯಲ್ಲಿ ಹೀಗಾಗಲು ಕಾರಣವೇನೆಂದು ಊಹಿಸಬೇಕು. ಇದಲ್ಲದೆ ಚಳಿಗಾಲದ ಎರಡನೆಯ ಬೆಳೆಯಾದ ದ್ವಿದಳಧಾನ್ಯಗಳ ಬೆಳೆಯ

ಕ್ಷೇತ್ರವು ಕುಸಿದಿದೆ. ಕಾರಣ ಚಳಿಗಾಲದ ಈ ಬೆಳೆಯ ರಕ್ಷಣೆಗಾಗಿ ಗದ್ದೆಗಳಿಗೆ ಹಾಕಬೇಕಾದ ಬೇಲಿಗೆ ಹಿಂದೆ ಪುಕ್ಕಟೆಯಾಗಿ ಒದಗಿಸುತ್ತಿದ್ದ (ಎಂದರೆ ರಕ್ಷಿತ ಅರಣ್ಯಗಳಿಂದ ರೈತರು ತಾವೇ ತರುತ್ತಿದ್ದ) ಗೂಟಗಳನ್ನು ಈಗ ಅರಣ್ಯ ಇಲಾಖೆ ನೀಡುತ್ತಿಲ್ಲ. ಇದರಿಂದ ಈ ದ್ವಿದಳ ಧಾನ್ಯಗಳ ಬೆಳೆ ನಿಂತಿದೆಯಷ್ಟೇ ಅಲ್ಲ, ಈ ಬೆಳೆಯಿಂದ ಈ ಗದ್ದೆಗಳಲ್ಲಿ ಭತ್ತದ ಮೊದಲ ಬೆಳೆಯ ಸಮೃದ್ಧಿಗೆ ಆಗುತ್ತಿದ್ದ ಅಪಾರ ಲಾಭವೂ ಆಗದಂತೆ ಆಗಿ ಉತ್ಪನ್ನ ಕುಸಿದಿದೆ. (ದ್ವಿದಳ ಧಾನ್ಯದ ಬೆಳೆ ಕಿತ್ತಾಗ ಬೇರಿನಲ್ಲಿದ್ದ ಗಂಟುಗಳು ನೆಲದಲ್ಲಿ ಉಳಿದು ಒಳ್ಳೆಯ ಗೊಬ್ಬರವಾಗುತ್ತದೆ). ಈ ದ್ವಿದಳ ಧಾನ್ಯಗಳಿಂದಾಗಿ ದನಕರುಗಳಿಗೆ ಉಚಿತವಾಗಿ ಸಿಗುತ್ತಿದ್ದ ಮೇವು ಸಿಗದಂತಾಗಿ ಹತ್ತು ವರ್ಷಗಳ ಹಿಂದೆ ಐದು ರೂಪಾಯಿ ಬೆಲೆಗೆ ಸಿಗುತ್ತಿದ್ದ ಹುಲ್ಲಿಗೆ ಈಗ ೩೦ ರಿಂದ ೪೦ ರೂ. ಬೆಲೆ ಆಗಿದೆ, ಎಂದು ಈ ಪತ್ರದಲ್ಲಿ ಹೇಳಿದೆ. ಮನೆಯ ಹೊದಿಕೆಗೂ ರಾಸುಗಳ ಮೇವಿಗೂ ಬೇಕಾದ ಈ ಭತ್ತದ ಹುಲ್ಲು ತುಟ್ಟಿಯಾದಾಗ "ಬಡ ಬೇಸಾಯಗಾರನಿಗಿರುವ ಎರಡು ಪರ್ಯಾಯದ ದಾರಿಗಳೆಂದರೆ, ಒಂದು ಮನೆಯೊಳಗೆ ಮಳೆ ನೀರನ್ನು ಬೀಳಗೊಡುವುದು, ಇನ್ನೊಂದು ತನ್ನ ದನಕರುಗಳನ್ನು ಉಪವಾಸ ಕೆಡಹುವುದು," ಎಂದು ಪತ್ರದಲ್ಲಿ ಹೇಳಿದೆ.

೧೮೭೮ರ ಅರಣ್ಯ ಕಾನೂನಿನಂತೆ ೧೮೮೦ರಲ್ಲಿ ಆರಣ್ಯಗಳನ್ನು ರಕ್ಷಿತ ಹಾಗೂ ಕಾದಿಟ್ಟ ಎಂದು ವರ್ಗೀಕರಿಸಿದ ಸಂಗತಿಗಳನ್ನು ಪತ್ರದಲ್ಲಿ ಹೇಳಿ, ಕಾದಿಟ್ಟ ಅರಣ್ಯಗಳಲ್ಲಿ ಜನರಿಗೆ ಪ್ರವೇಶವೇ ಇರದಿದ್ದರೂ ರಕ್ಷಿತ ಅರಣ್ಯಗಳ ಪ್ರಮಾಣ ಹೆಚ್ಚಿನದಿದ್ದು ಅವುಗಳಲ್ಲಿ ರೈತರಿಗೆ ನೀಡಿದ್ದ ವಿವಿಧ ಸವಲತ್ತುಗಳನ್ನು ಉಲ್ಲೇಖಿಸಿ, ಈ ಸವಲತ್ತುಗಳನ್ನು ಗಮನಿಸಿಯೇ ಉತ್ತರಕನ್ನಡ ಜಿಲ್ಲೆಯಲ್ಲಿ ಭೂಕಂದಾಯವನ್ನು ಆಕರಿಸಲಾಗಿತ್ತೆಂದು ಹೇಳಿದೆ. ಮುಂಬೈ ರಾಜ್ಯದ ರತ್ನಗಿರಿ ಜಿಲ್ಲೆಯಲ್ಲಿ ಅರಣ್ಯಗಳೇ ಇರದ್ದರಿಂದ ಅಲ್ಲಿ ಭೂಕಂದಾಯವನ್ನು ಎಕರೆಗೆ ಎಂಟಾಣೆಗಿಂತ ಸ್ವಲ್ಪ ಹೆಚ್ಚಾಗಿ ಆಕರಿಸಿದ್ದರೆ, ಉತ್ತರಕನ್ನಡದಲ್ಲಿ ಸಾಮಾನ್ಯ ಅಕ್ಕಿ ಬೆಳೆಯುವ ಭೂಮಿಗೆ ಸರಾಸರಿ ಎಕರೆಗೆ ನೂರು ರೂ.ನಂತೆ ಕಂದಾಯ ಆಕರಿಸಿದೆ. (ಇದೇ ರೀತಿ ಅಡಿಕೆ ತೋಟಗಳಿಗೆ ಎಕರೆಗೆ ಸರಾಸರಿ ರೂ. ಎಂಟರಂತೆ ಆಕರಿಸಲಾಗುತ್ತೆಂದು ಅನ್ಯ ಆಧಾರಗಳಿಂದ ಹೇಳಬಹುದು. ಇದಕ್ಕೆ ಕಾರಣ ಅರಣ್ಯಗಳಿಂದ ತರಗೆಲೆ, ಸೊಪ್ಪು, ಬೇಲಿಗೆ ಬೇಕಾದ ಗೂಟ ಮತ್ತು ಅನ್ಯ ಕೃಷಿ ಕಾರ್ಯಾದಿಗಳಿಗೆ ಬೇಕಾದ ಮರಮುಟ್ಟನ್ನು ಪಡೆಯುವ ಹಕ್ಕನ್ನು ರೈತರಿಗೆ ನೀಡಿದ್ದು, ಪ್ರತೀ ಎಕರೆ ಅಡಿಕೆ ತೋಟಕ್ಕೆ ಹಲವು ಎಕರೆ ಬೆಟ್ಟವನ್ನು ಸೊಪ್ಪಿಗಾಗಿ ಬಿಡಲಾಗಿತ್ತು). ಕಂದಾಯ ಆಕರಣೆಯ ಕಾಲಕ್ಕೆ ಪೂರ್ತಿ ಯೋಚನೆ ಮಾಡಿ, ಈ ಸವಲತ್ತುಗಳನ್ನು ಗಮನಿಸಿಯೇ ಹೆಚ್ಚಿನ ಕಂದಾಯ ಹೇರಿದ್ದರೂ ಹೆಜ್ಜೆ ಹೆಜ್ಜೆಗೂ ಈ ಹಕ್ಕುಗಳನ್ನು ಮೊಟಕುಗೊಳಿಸುವ ಉದ್ಯಮದಲ್ಲಿ ಅರಣ್ಯ ಇಲಾಖೆ ತೊಡಗಿತ್ತು. ಈ ಪತ್ರದಲ್ಲಿಯೇ ಆ ಬಗ್ಗೆ ವಿವರಗಳನ್ನು ಹೇಳಿದೆ: "೧೮೯೦ನೆಯ ಇಸವಿಯ ನಂತರ ಯಾವಾಗಲೋ ಒಮ್ಮೆ ಅರಣ್ಯ ಇಲಾಖೆಯ ಧೋರಣೆಯಲ್ಲಿ ಬದಲಾವಣೆ ಆದಂತೆ ಕಾಣಬರುತ್ತದೆ. ವರ್ಷವರ್ಷಕ್ಕೂ ವಿಶಾಲ ಪ್ರಮಾಣದ ರಕ್ಷಿತ ಅರಣ್ಯ ಪ್ರದೇಶಗಳನ್ನು ಕಾದಿಟ್ಟ ಅರಣ್ಯಗಳಾಗಿ ವರ್ಗಾಯಿಸಲಾಯಿತು. ಇದೇ ರೀತಿ ಗ್ರಾಮಗಳಿಗಾಗಿ ಬಿಟ್ಟುಕೊಟ್ಟ ಪ್ರದೇಶಗಳಲ್ಲಿ ಹಾಗೂ ಗ್ರಾಮಸ್ಥರಿಗೆ ನೀಡಿದ ಸವಲತ್ತುಗಳಲ್ಲಿ ಕೂಡ ಬದಲಾವಣೆ ಮಾಡಲಾಯಿತು. ಕಾನೂನಿನಂತೆ, ಈ ಬದಲಾವಣೆಗಳ ಬಗ್ಗೆ ಪ್ರಕಟಣೆ ನೀಡಲಾಗಿತ್ತಾದರೂ ಅವುಗಳನ್ನು ಸರಿಯಾಗಿ ಹಳ್ಳಿಗರಿಗೆ ತಿಳಿಸಿ ಹೇಳಿರಲಿಲ್ಲ. ಇದರಿಂದ ಹೊಸ ಕಾನೂನುಗಳ ಬಗ್ಗೆ ಅಜ್ಞಾನಿಗಳಾಗಿದ್ದ ಹಳ್ಳಿಗರು ಹೊಸ ಕಾನೂನುಗಳನ್ನು ತಮಗೆ ಅರಿವಿಲ್ಲದೆ ಭಂಗಿಸಿ ಶಿಕ್ಷೆಗೂ ದಂಡಕ್ಕೂ ಪಾತ್ರರಾದರು. ರೈತರು ಗೊಬ್ಬರಕ್ಕಾಗಿ ಅರಣ್ಯಗಳಿಂದ ತರಗೆಲೆ ಸಂಗ್ರಹಿಸುತ್ತಿದ್ದ ಹಿಂದಿನಿಂದ ನಡೆದುಬಂದ ರೂಢಿಯ ಮೇಲೆ ೧೯೦೨ರಲ್ಲಿ ಅರಣ್ಯ ಇಲಾಖೆಯು ಪ್ರತಿಬಂಧ ಹೇರಿ, ಮೂರು ವರ್ಷಗಳ ಕಾಲ ಈ ಹಕ್ಕನ್ನು ಕಸಿದುಕೊಂಡರು. ಕಡೆಗೆ ಕಂದಾಯ ಇಲಾಖೆಯ ಮಧ್ಯಪ್ರವೇಶದಿಂದ ಈ ಪ್ರತಿಬಂಧವನ್ನು ರದ್ದುಪಡಿಸಲಾಯಿತು. ಆದರೆ ಬೇರೆ ದೆಸೆಗಳಲ್ಲಿ ಇತಿಮಿತಿಗಳನ್ನು ಹೇರಲು ಅರಣ್ಯ ಇಲಾಖೆಯು ಮುಂದಾಯಿತು. ರಕ್ಷಿತ ಅರಣ್ಯವನ್ನು ೧೯೧೦ರಲ್ಲಿ ಇಡೀ ಜಿಲ್ಲೆಯಲ್ಲಿ ಕೇವಲ ೩೪೮ ಚದರ ಮೈಲಿಗೆ ಮಿತಗೊಳಿಸಲಾಯಿತು," ಎಂದು ಈ ಪತ್ರ ಹೇಳಿದೆ. ೧೮೮೦ರಲ್ಲಿ ೩,೦೪೮ ಚದರ ಮೈಲಿಯಾಗಿದ್ದ ರಕ್ಷಿತ ಅರಣ್ಯ ಅದರ ಶೇಕಡಾ ೧೦ರಷ್ಟು ಇಳಿದಾಗ, ರೈತರು ಸೊಪ್ಪಿಗಾಗಲೀ ತರಗೆಲೆಗಾಗಲೀ ಗೂಟಗಳಿಗಾಗಲೀ ಬಿದಿರಿಗಾಗಲೀ ಕೃಷಿಗೆ ಅವಶ್ಯವಾದ ಅನ್ಯ ಮರಮುಟ್ಟುಗಳಿಗಾಗಲೀ ಕಾದಿಟ್ಟ

ಅರಣ್ಯವನ್ನು ಪ್ರವೇಶಿಸದ ಸನ್ನಿವೇಶ ಉಂಟಾಗಲಿಲ್ಲವೇ? ಅಡವಿಯ ಬಳಕೆಗೆ ಅವಕಾಶ ನೀಡಿ ಹೆಚ್ಚಿನ ಕಂದಾಯ ಆಕರಣೆ ಮಾಡಿದ್ದ ಸರಕಾರ ಇದೇ ಕಾಲಕ್ಕೆ ಈ ಹಕ್ಕುಗಳನ್ನು ಕಸಿದು ರೈತರನ್ನು ವಂಚಿಸಿ ಹಗಲುದರೋಡೆ ಮಾಡಿದಂತಾಗಲಿಲ್ಲವೆ?

೧೯೧೧ರ ಕೆನರಾ ಫಾರೆಸ್ಟ್ ಪ್ರಿವಿಲೆಜಸ್ ರೂಲ್ಸ್ ಎಂಬ ನಿಯಮಗಳನ್ನು ಈ ಪತ್ರದಲ್ಲಿ ಉಲ್ಲೇಖಿಸಿ, "ಇವುಗಳ ಪ್ರಕಟಣೆಯಿಂದ ಬಹುಪಾಲು ನಮ್ಮ ಸಮಸ್ಯೆಗಳು ಇಂದಲ್ಲ ನಾಳೆ ಪರಿಹಾರವಾಗಬಹುದೆಂದು ಆಶೆ ಇರಿಸಿಕೊಂಡಿದ್ದವು. ಆದರೆ ಈ ನಿರೀಕ್ಷೆಗಳು ಎಷ್ಟರಮಟ್ಟಿಗೆ ಕೈಗೂಡಿದುವೆಂಬುದು ಮುಂದಿನ ಘಟನೆಗಳಿಂದ ಸ್ಪಷ್ಟವಾಗುತ್ತದೆ." ಎನ್ನುತ್ತ ಪತ್ರವು ಕುಮಟಾ ತಾಲೂಕಿನ ಉದಾಹರಣೆ ನೀಡುತ್ತ, ಕಾದಿಟ್ಟ ಅರಣ್ಯಗಳನ್ನು ಸಂಘಟಿತ ಹಾಗೂ ಅಸಂಘಟಿತ ಎಂದು ಈಗ ವಿಭಜನೆ ಮಾಡಲಾಗಿದ್ದು ಆ ಪೈಕಿ ತಾಲೂಕಿನ ಒಟ್ಟು ಅರಣ್ಯ ಕ್ಷೇತ್ರದ ಒಂಬತ್ತನೇ ಒಂದು ಅಂಶದಷ್ಟು, ಎಂದರೆ ೨೬,೦೦೦ ಎಕ್ರೆ ಪ್ರದೇಶವನ್ನು ೧೯೧೧ರ ನಿಯಮದಂತೆ ಅಸಂಘಟಿತವೆಂದು ಘೋಷಿಸಿದ್ದರಿಂದ, ಹಿಂದೆ ಒಂದು ದನಕ್ಕೆ ಸರಾಸರಿ ಎರಡು ಎಕರೆಯಷ್ಟಿದ್ದ ಮೇವಿನ ಪ್ರದೇಶವು ಈಗ ಒಂದು ದನಕ್ಕೆ ಎರಡಾಣೆ ಹುಲ್ಲುಬನ್ನಿ ಕೊಟ್ಟ ನಂತರವೂ ಒಂದು ಎಕರೆಯ ಹತ್ತನೆಯ ಒಂಬತ್ತು ಭಾಗಕ್ಕೆ ಮಿತಿಯಾಗಿದೆ ಎಂದು ತೋರಿಸಿಕೊಟ್ಟಿದೆ. "ಅಸಂಘಟಿತವೆಂದು ಬಿಟ್ಟುಕೊಡಲಾದ ಅರಣ್ಯಪ್ರದೇಶದಲ್ಲಿ ಹೇಳಿಕೊಳ್ಳುವಂಥ ಅರಣ್ಯಗಳೇ ಇಲ್ಲದಾಗ ಅರಣ್ಯದ ಹಕ್ಕುಗಳನ್ನು ಚಲಾಯಿಸುವುದು ಹೇಗೆ?" ಎಂದು ಪತ್ರ ಪ್ರಶ್ನಿಸಿ, ಆ ಬಗ್ಗೆ ಉದಾಹರಣೆಗಳನ್ನೂ ಕೊಟ್ಟಿದೆ. ಗೋಕರ್ಣಕ್ಕೆ ಬಿಡಲಾದ ೧೩೫೦ ಎಕರೆ ಪ್ರದೇಶ ಒರಿಯ ಬೋಳು ನೆಲ. ಅಗ್ಗರಗೋಣದ ೧೪೦ ಎಕರೆಯೂ ಅಷ್ಟೇ. ಅಡಿಗೋಣದ ೨೨೦ ಎಕ್ರೆಯಲ್ಲಿ ಅಲ್ಲಿ ಇಲ್ಲಿ ಕೆಲಸಕ್ಕೆ ಬಾರದ ಪೊದೆಗಳಿವೆ. ತೊರ್ಕೆಯ ೧೬೦ ಎಕ್ರೆಯದೂ ಅಂಥದೇ ಪರಿಸ್ಥಿತಿ. ಮಾದನಗೇರಿಯ ೨೪೦ ಎಕ್ರೆ ಹಾಗೂ ಕುಮಟಾದ ೫೧೦ ಎಕ್ರೆ ಪ್ರದೇಶ ಕೂಡ ಬರಿದಾದ ಬೋಳು ಪ್ರದೇಶ. ಇಂಥ ಅನೇಕ ಉದಾಹರಣೆಗಳನ್ನು ನೀಡಲಾಗಿದೆ. "ಬಾಡ, ಹುಬ್ಬಣಗೇರಿ, ಗುಡ್ಡೆ ಅಂಗಡಿಗಳಂಥ ಗ್ರಾಮಗಳಿಗೆ ನೀಡಲಾದ ಪ್ರದೇಶ ಈ ಹಳ್ಳಿಗರಿಗೆ ತೀರ ಅನಾನುಕೂಲವಾದ ನೆಲೆಗಳಲ್ಲಿದೆ" ಎಂದು ಪತ್ರ ಹೇಳಿದೆ. ರೈತರು ಹೋಗಲಾರದ ದಟ್ಟಾರಣ್ಯ ಅಥವಾ ಹಲವಾರು ಮೈಲಿ ದೂರದ ಪ್ರದೇಶಗಳನ್ನು ರೈತರಿಗೆ ಬಿಟ್ಟುಕೊಡಲಾಗಿದೆ. ಒಂದು ಹೊರೆ ಸೊಪ್ಪು ಅಥವಾ ಸೌದೆಗಾಗಿ ರೈತರು ಆರೇಳು ಮೈಲಿ ದೂರ ಹೋಗಿ ಬರುವುದು ಸಾಧ್ಯವೆ ? ಇದಲ್ಲದೆ ೧೮೮೦ರಲ್ಲಿ ೧೦ ಜಾತಿ ಮರಗಳನ್ನು ರಕ್ಷಿತ ಜಾತಿಗಳೆಂದು ಪ್ರಕಟಿಸಿದ್ದರೆ, ೧೯೧೮ರ ಹೊತ್ತಿಗೆ ೨೫ ಜಾತಿಗಳನ್ನು ಕಾದಿಟ್ಟವುಗಳೆಂದು ವರ್ಗೀಕರಿಸಿ, ರೈತರು ಉಪಭೋಗಿಸುತ್ತಿರುವ ಹಕ್ಕುಗಳನ್ನು ಕೇವಲ ಭ್ರಮೆಯ ಸ್ವರೂಪಕ್ಕೆ ಇಳಿಸಲಾಗಿದೆ, ಎಂದು ಪತ್ರ ಹೇಳಿದೆ. ಹಿಂದೆ ಕಂದಾಯ ಇಲಾಖೆ ನೀಡುತ್ತಿದ್ದ ಪರ್ಮಿಟ್ ಅಥವಾ ಅನುಮತಿ ಪತ್ರಗಳನ್ನೂ ಯಾವುದೇ ಸವಲತ್ತನ್ನು ಪಡೆಯಲು ಈಗ ಅರಣ್ಯ ಇಲಾಖೆಯ ಮೊರೆಹೋಗಬೇಕಾದ ವ್ಯವಸ್ಥೆಯಾಗಿದ್ದು, ಬೇಲಿಗೆ ಗೂಟ ಅಥವಾ ಬೆಲ್ಲಕ್ಕೆ ಸೌದೆ ಬೇಕಾದಾಗ, ಹಿಂದೆ ರೈತನು ತಾನೇ ರಕ್ಷಿತ ಅರಣ್ಯದಿಂದ ಅದನ್ನು ಕಡಿದು ತರಬಹುದಾಗಿದ್ದಲ್ಲಿ, ಈಗ ಅರಣ್ಯ ಇಲಾಖೆಯಿಂದ ಪರ್ಮಿಟ್ ಪಡೆದು ತರುವಂತಾಗಿ, ಅರಣ್ಯ ಇಲಾಖೆಯು ತಾವು ಸುಲಭವಾಗಿ ಕಡಿಯಲಾಗದ ದುರ್ಗಮ ಅರಣ್ಯಗಳಿಂದ ವಸ್ತುಗಳನ್ನು ತರುವಂತೆ ಹೇಳಿ ರೈತರನ್ನು ಸತಾಯಿಸುವಂತಾಗಿದೆ. "ಈ ಅರಣ್ಯ ಇಲಾಖೆಯ ಅಧಿಕಾರ ನಿರಂಕುಶವಾದುದು" ಮತ್ತು ಅರಣ್ಯಾಧಿಕಾರಿಯು ಅನುಮತಿ ನಿರಾಕರಿಸಿದರೆ ಇಂಥ ವಸ್ತುಗಳನ್ನು ರೈತನು ಡಿಪೋದಿಂದ ಕೊಳ್ಳಬೇಕು. ೧೯೦೨ರಿಂದ ಆರಂಭವಾದ ಕಂಟ್ರಾಕ್ಟರುಗಳು ನಡೆಸುವ ಈ ಡಿಪೋಗಳಲ್ಲಿ ಬೆಲೆಬಾಳುವ ಮೋಪಿನ ('ಟಿಂಬರ್') ಸಂಗ್ರಹ ಇರುವುದಲ್ಲದೆ ರೈತನಿಗೆ ಬೇಕಾದ ವಸ್ತುಗಳಲ್ಲ. ರೈತ ತನಗೆ ಬೇಕಾದ ಅರಣ್ಯಜನ್ಯ ವಸ್ತುಗಳನ್ನು ಹಣ ಕೊಟ್ಟೇ ಕೊಳ್ಳಬೇಕೆಂಬ ವಾತಾವರಣ ಸೃಷ್ಟಿಗೇ ಅರಣ್ಯ ಇಲಾಖೆ ಹೊರಟಿದೆಯಲ್ಲದೆ, ಇಂಥ ಡಿಪೋಗಳನ್ನೂ ಹೆಚ್ಚಿಸುತ್ತ ಬಂದಿದೆ. ಇದರಿಂದ ರೈತರು ತಮ್ಮ ಹಕ್ಕುಗಳ ಬಗ್ಗೆ ಭಯಭೀತರಾಗಿದ್ದಾರೆ, ಎಂದು ಪತ್ರ ವಿವರಿಸಿದೆ.

ಪ್ರತೀ ಒಂದು ಗುಂಟೆ ಕಬ್ಬನ್ನು ಬೆಳೆದ ರೈತನೂ ಬೆಲ್ಲ ತಯಾರಿಸಲು ಬೇಕಾದ ಸೌದೆಗಾಗಿ ಕಡ್ಡಾಯವಾಗಿ ಒಂದು ರೂ. ಪಾವತಿ ಮಾಡಬೇಕೆಂದು ಅರಣ್ಯ ಇಲಾಖೆ ೧೯೧೨ರಲ್ಲಿ ನಿರ್ಣಯ ತೆಗೆದುಕೊಂಡ ವಿಚಾರವನ್ನು

ಪ್ರಸ್ತಾಪಿಸಲಾಗಿದೆ. ಪ್ರತೀಹಳ್ಳಿಯ ಕಬ್ಬು ಬೆಳೆಯ ಪ್ರದೇಶವನ್ನೂ (ನಿಜವಾಗಿ ಬೆಳೆದುದಕ್ಕಿಂತ ಹೆಚ್ಚಾಗಿ ಲೆಕ್ಕಹಾಕಿ ಜನರನ್ನು ಸುಲಿಯಲು ಅರಣ್ಯ ಇಲಾಖೆ ಮುಂದಾದ ವಿಚಾರ ಬೇರೆಡೆ ಪ್ರಸ್ತಾಪಿತವಾಗಿದೆ. ಆ ಸಂಗತಿ ಬೇರೆ). ಆದರೆ, ಆಗಿನ ಕಲೆಕ್ಟರ್ ಆಗಿದ್ದ ಮಾಂಟಿಯತ್ ಅವರ ಮಧ್ಯಪ್ರವೇಶದಿಂದ ಈ ದರವನ್ನು ಗುಂಟೆಗೆ ಒಂದು ರೂ. ಸಿಂದ ಎರಡೂವರೆ ಆಣೆಗೆ ಇಳಿಸಿದರು. ಪುಣೆಯಲ್ಲಿ ರೂಢಿಯಲ್ಲಿರುವ ಪದ್ಧತಿಯಿಂದ ಬೆಲ್ಲ ತಯಾರಿಸುವವರಿಗೆ ಈ ದರವನ್ನು ಗುಂಟೆಗೆ ಒಂದಾಣೆಗೆ ಇಳಿಸಿದರು. "ಹೋದವರ್ಷ (೧೯೧೭) ಈ ರಿಯಾಯಿತಿಯ ನಿಯಮ ರದ್ದು ಮಾಡಿದ್ದನ್ನು ತಾವು ಮಧ್ಯ ಪ್ರವೇಶಿಸಿ ಮತ್ತೆ ಜಾರಿಮಾಡಿ ರೈತರಿಗೆ ಸಮಾಧಾನ ಉಂಟುಮಾಡಿದರೂ, ಈ ವರ್ಷ ಡಿಪೊಗಳಿಂದ ಆರು ಮೈಲಿನ ಒಳಫಾಸಲೆಯಲ್ಲಿರುವ ಜನರ ಪರ್ಮಿಟ್‌ಗಳನ್ನು ಬದಿಗೊತ್ತಲಾಯಿತು. ಹಿಂದೆ ಇದ್ದ ಕಿರಿಕಿರಿಯ ವ್ಯವಸ್ಥೆ ಇದಕ್ಕಿಂತ ಮೇಲಾಗಿತ್ತೆಂದು ಅವರು ಭಾವಿಸಿದ್ದಾರೆಂದು ತೋರುತ್ತದೆ. ಬಹುಸಂಖ್ಯ ಜನರಿಗೆ ಜಾರಿಗೊಳಿಸಿದಾಗ ತೊಂದರೆಗೆ ಕಾರಣವಾಗುತ್ತಿದ್ದ ಈ ನಿಯಮವನ್ನು ತಾವು ಮಧ್ಯಪ್ರವೇಶಿಸಿ ರದ್ದುಮಾಡಿ ಜನರ ಕೃತಜ್ಞತೆಗೆ ಪಾತ್ರರಾಗಿದ್ದೀರಿ. ಇಂಥ ನಿಯಮಗಳನ್ನು ಮಾಡಿದಾಗ ಮೊದಲೇ ಪ್ರಕಟಿಸುತ್ತಿರಲಿಲ್ಲ. ರೈತರು ಈ ಬಗ್ಗೆ ಅಜ್ಞಾನದಲ್ಲಿದ್ದು ತಮ್ಮ ಬೆಳೆಗಳು ಸಿದ್ಧವಾದಾಗ ಅವರು ಪರ್ಮಿಟ್‌ಗೆ ಅರ್ಜಿ ಹಾಕಲು ಅವರ ಬೇಡಿಕೆಯನ್ನು ಹೊಸನಿಯಮದಂತೆ ನೆರವೇರಿಸಲು ಸಾಧ್ಯವಾಗದೆಂದು (ಆಯತ ವೇಳೆಗೆ) ತಿಳಿಸಲಾಗುತ್ತದೆ."

ಪರ್ಮಿಟ್‌ನ ಪದ್ಧತಿಯಂತೆ ರೈತರು ಮಣಕ್ಕೆ ನಾಲ್ಕು ಪೈ.ಯಂತೆ ಪಡೆಯುತ್ತಿದ್ದ ಉರುವಲು ಸೌದೆಯನ್ನು ಡಿಪೊದಿಂದ ಮಣಕ್ಕೆ ಮೂರರಿಂದ ಐದು ಆಣೆಗೆ ಪಡೆಯಬೇಕಾಗಿದ್ದು, ಖಾಸಗೀ ಕಂಟ್ರ್ಯಾಕ್ಟರಿಗೆ ಇದರಿಂದ ವಿಶೇಷ ಲಾಭ ಇರದ್ದರಿಂದ, ಅವರು ಇದನ್ನು ಸದಾ ಕಾಲ ಸಾಕಷ್ಟು ದಾಸ್ತಾನು ಇಡರು. ಹೆಚ್ಚು ಹಣ ಕೊಡುವ, ಹಣ ಕೊಟ್ಟರೂ ಮಾಲು ಸಕಾಲದಲ್ಲಿ ಸಿಗದ, ಇಬ್ಬಂದಿಯ ತೊಂದರೆ ರೈತರಿಗಾಗುವುದೆಂದು ಪತ್ರ ಹೇಳಿದೆ. ಇದಲ್ಲದೆ, ಅಘನಾಶಿನಿ ಪ್ರದೇಶದ ರೈತನೊಬ್ಬ ದೂರದ ಹೊನ್ನಾವರ ಇಲ್ಲವೆ ಚಂದಾವರ ಡಿಪೊಗೆ ಉರುವಲು ತರಲು ಹೋಗಬೇಕಾದ ಅಂದಿನ ವ್ಯವಸ್ಥೆಯ ಕಿರುಕುಳವನ್ನೂ ಪತ್ರ ವಿವರಿಸಿದೆ.

ಆರು ಪೈ.ಯಿಂದ ಎರಡಾಣೆ ಬೆಲೆಯ ಸೊಪ್ಪನ್ನು ಅಡವಿಯಿಂದ ತಂದ ರೈತರ ಹಾಗೂ ಮಹಿಳೆಯರ ಮೇಲೆ ಅಂಕೋಲೆಯ ಒಂದು ನ್ಯಾಯಾಲಯದಲ್ಲಿ ಒಂದೇ ದಿನ ಪಡೆದಿದ್ದ ೪೦ ಖಟ್ಲೆಗಳನ್ನು ಉಲ್ಲೇಖಿಸಿ, ಇಂಥ ಸಣ್ಣ ಅಪರಾಧಗಳನ್ನು ನಡೆಸಿದವರನ್ನು ಎಚ್ಚರಿಕೆ ಕೊಟ್ಟು ಬಿಡುವ ಬದಲು ಕೋರ್ಟಿಗೆಳೆವ ಅರಣ್ಯಾಧಿಕಾರಿಗಳ ಕ್ರಮವನ್ನು ಟೀಕಿಸಿದ ಹಾಗೂ "ಕರಾವಳಿಯ ತಾಲೂಕುಗಳಲ್ಲಿ ಇಂಥ ಬಹುಸಂಖ್ಯ ಅಪರಾಧಗಳು ಘಟಿಸಲು ಕಾರಣ ಬಹುಮಟ್ಟಿಗೆ, ರೈತರ ನ್ಯಾಯವಾದ ಅವಶ್ಯಕತೆಗಳನ್ನು ಪೂರೈಸಲು, ವಿಶೇಷತಃ ಕರಾವಳಿಗೆ ಸಮೀಪದ ಪ್ರದೇಶಗಳಲ್ಲಿ ಅವಶ್ಯ ವಸ್ತುಗಳ ಪೂರೈಕೆ ಇಲ್ಲದ್ದೇ ಕಾರಣವಿರಬೇಕು", ಎಂದು ೧೯೦೭-೦೮ ಅರಣ್ಯ ಇಲಾಖೆಯ ಆಡಳಿತ ವರದಿಯಲ್ಲೇ ತಿಳಿಸಿದ ಅಂಶವನ್ನು ಪತ್ರವು ಉಲ್ಲೇಖಿಸಿದೆ. ಅದೇ ವರದಿಯಲ್ಲಿ ಶಿರಸಿ ವಿಭಾಗದ ಅರಣ್ಯ ರಕ್ಷಕರು ('ಗಾರ್ಡ್ಸ್') ತೀರ ಕುಖ್ಯಾತಿಯವರು "ಬ್ಲ್ಯಾಕ್‌ಮೇಲ್‌ನಲ್ಲಿ ಅವರು ತೊಡಗುವುದು, ನಿಸ್ಸಂಶಯವಾಗಿಯೂ ಸಾಮಾನ್ಯ ಸಂಗತಿ," ಎಂಬ ಒಬ್ಬ ಜಿಲ್ಲಾಧಿಕಾರಿಯದೇ ಅನುಭವದ ಮಾತನ್ನೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಅರಣ್ಯಾಧಿಕಾರಿಗಳು ತಾವೇ ದಂಡ ಪಡೆದು ಖಟ್ಲೆಯನ್ನು ಪೂರೈಸುವ ('ಕಾಂಪೌಂಡಿಂಗ್ ಅಫೆನ್ಸ್') ಪದ್ಧತಿಯ ದುರಾಚಾರವನ್ನು ಉಲ್ಲೇಖಿಸುತ್ತ, ತಮ್ಮದೇ ಮಾಸೂರು ಗ್ರಾಮದ ಒಬ್ಬ ವ್ಯಕ್ತಿ ತದಡಿ ನದಿಯಲ್ಲಿ ಪ್ರವಾಹ ಬಂದಾಗ ಸಂಗ್ರಹಿಸಿದ ತೇಲಿಬಂದ ಎರಡು ಆಣೆ ಬೆಲೆಯದೂ ಅಲ್ಲದ ಸೌದೆಗಾಗಿ ಅರಣ್ಯಾಧಿಕಾರಿ ಒಂಬತ್ತು ರೂ. ದಂಡ ಹಾಕಿದ ಪ್ರಕರಣವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ತೇಲಿಬಂದ ಸೌದೆಯ ಮೇಲೆ ನಿಜವಾಗಿ ಸರಕಾರಕ್ಕೆ ಅಧಿಕಾರ ಇರಲಿಲ್ಲ.

ಈ ಪ್ರದೀರ್ಘ ಮುದ್ರಿತ ಪತ್ರದಲ್ಲಿ ಉಲ್ಲೇಖಿತವಾದದ್ದು ರೈತರ ಸಂಕಟಗಳ ಮುಖ್ಯಾಂಶ ಮಾತ್ರ. ರೈತರ ಗೋಳು ಇದಕ್ಕೂ ಉಗ್ರವಾದದ್ದು.

ಮಲೆನಾಡಿನ ಸೆರಗಿನಲ್ಲಿ ರೈತರು ಮಲೇರಿಯಾ ಪೀಡಿತರು. ಅವರಿಗೆ ಅನಾರೋಗ್ಯದಿಂದ ಸದಾ ಸಂಕಟ; ನಿಸರ್ಗದೊಡನೆ ಚೆಲ್ಲಾಟವಾಡಿ ಬಾಳ್ವೆ ಮಾಡಿ ಬೇಸಾಯ, ತೋಟಗಾರಿಕೆ ಮಾಡುವವರು, ಅವರು. ವನ್ಯಪ್ರಾಣಿಗಳಾದ ಆನೆ, ಹಂದಿ, ಮಂಗಗಳ ಕಾಟ ಬೆಳೆಗಾದರೆ, ಹುಲಿ ಚಿರತೆಗಳ ಕಾಟ ರಾಸುಗಳಿಗೆ. ಕಳ್ಳಕಾಕರ, ದರೋಡೆಕೋರರ ಕಾಟ ಬೇರೊಂದೆಡೆ. ವಾಸ್ತವವಾಗಿ ಈ ಪ್ರದೇಶದ ವಿಕೃತ ಪರಿಸ್ಥಿತಿ ಎಷ್ಟಿತ್ತೆಂದರೆ, ಮಲೇರಿಯಾ ಪಿಡುಗಿನಿಂದ ಸತ್ತ, ಅರಣ್ಯಾಧಿಕಾರಿಗಳ ಕಾಟದಿಂದ ಊರುಬಿಟ್ಟ ಜನರ ಸಂಖ್ಯೆ ದೊಡ್ಡದು. ೧೮೮೧ ರಲ್ಲಿ ೪,೨೧,೯೩೨ ಇದ್ದ ಜಿಲ್ಲೆಯ ಜನಸಂಖ್ಯೆಯು ೧೮೯೧ರಲ್ಲಿ ೪,೪೬,೪೫೩ ಏರಿದ್ದು ಕೇವಲ ಶೇ. ೫.೮ ಏರಿಕೆ ಅಷ್ಟೆ. ೧೯೦೧ ರಲ್ಲಿ ಇದು ೪,೫೪,೪೯೦ಕ್ಕೆ ಎಂದರೆ ಕೇವಲ ಶೇ. ೧.೮ ಏರಿತು. ೧೯೧೧ ರಲ್ಲಿ ಜನಸಂಖ್ಯೆ ೪,೩೦,೫೪೮ ಎಂದರೆ ಶೇ. ೫.೨೭ ರಷ್ಟು ಇಳಿಯಿತು. ೧೯೨೧ರಲ್ಲಿ ೪,೦೧,೭೨೭ ಎಂದರೆ ಶೇ. ೬.೬೯ರಷ್ಟು ಇಳಿಯಿತು. (ಉ. ಕ. ಜಿ. ಗ್ಯಾ., ೧೯೮೬, ಪು. ೧೮೯). ಈ ಇಳಿತಕ್ಕೆ ಮಲೇರಿಯದಂಥ ರೋಗ ಒಂದು ಕಾರಣವಾದರೆ, ಜನ ಜಿಲ್ಲೆ ಬಿಟ್ಟು ಗುಳೆಹೋದುದೂ ಇನ್ನೊಂದು ಕಾರಣ. ಕೃಷಿ ಭೂಮಿಯಲ್ಲಿ ಇಳಿತವಾಗಲು ಭೂಮಿಯನ್ನು ಬೀಳುಬಿಟ್ಟು ಜನ ಮಲೆನಾಡನ್ನು ತ್ಯಜಿಸಿದ್ದೇ ಕಾರಣ. "ಆನೆಗಳ ಕಾಟಕ್ಕೆ ಬೇಸತ್ತ ಮರಾಠಾ ಒಕ್ಕಲಿಗರು ಮೈಸೂರು ಶೀಮೆಗೆ ಹೋಗಹತ್ತಿ ಹಳ್ಳಿಗಳು ಹಾಳು ಬೀಳುತ್ತಿವೆ" ಎಂಬ ಮಾತು "ಕಾನಡಾ ಧುರೇಣ"ದಲ್ಲಿ ೮-೭-೨೪ ರಲ್ಲಿ ಬಂದಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಸೋಂದಾ, ಯಾಣಗಳಂಥ ಅನೇಕ ಒಳನಾಡುಗಳು ಬುಕನನ್‌ನಿಂದ ಜನಭರಿತವೆನಿಸಿದ್ದರೆ, ಇಂದು ಅವು ನಿರ್ಜನ ನೆಲೆಗಳಾಗಿವೆ. ಒಂದು ಪ್ರದೇಶ ನಿರ್ಜನವಾಗುವುದು ಯಾವುದೇ ಸರಕಾರದ ಉತ್ತಮ ಆಡಳಿತಕ್ಕೆ ಸಾಕ್ಷ್ಯವಾಗುವುದಿಲ್ಲ. ಅಲ್ಲಿ ಉಳಿದ ಜನರಾದರೂ ಊರು ಬಿಡದವರಾಗಿ, ನರಳುತ್ತ ರಾಜನನ್ನು ಶಪಿಸುತ್ತ ಇರುತ್ತಾರೆ.

ವನ್ಯಮೃಗಗಳ ಬೇಟೆಯ ಬಗ್ಗೆ ತಂದ ಮಿತಿಗಳು ಇನ್ನಷ್ಟು ತಾಪದಾಯಕ. ಸರಕಾರೀ ಅಂದಾಜಿನಂತೆ ಅವುಗಳಿಂದ ವರ್ಷಕ್ಕೆ ಸುಮಾರು ಏಳು ಲಕ್ಷ ರೂ. ಬೆಲೆಯ ಬೆಳೆ ಜಿಲ್ಲೆಯಲ್ಲಿ ಹಾಳಾಗುತ್ತದೆಂದು ಈ ಕಾಲದಲ್ಲಿ ಲೆಜಿಸ್ಲೆಟಿವ್ ಕೌನ್ಸಿಲ್‌ನಲ್ಲಿ ಸರಕಾರ ಉತ್ತರ ಕೊಟ್ಟಿತ್ತು. ೧೯೦೩ರಲ್ಲಿ ಜಾರಿ ಮಾಡಿದ ಕಾನೂನಂತೆ ಬೇಟೆಯಾಡುವುದರ ಬಗ್ಗೆ ಅನೇಕ ಇತಿಮಿತಿಗಳು ಬಂದೂಕಿಗೆ ರೂ. ೨೫ ಲೈಸನ್ಸ್ ಶುಲ್ಕ. ಗದ್ದೆಗೆ ಬಂದ ಪ್ರಾಣಿಯನ್ನು ಅಟ್ಟಿಸಿಕೊಂಡು ಹೋದವರಿಗೂ ಕಾದಿಟ್ಟ ಅಡವಿ ಪ್ರವೇಶಿಸಿ ಬೇಟೆ ಆಡಬಾರದೆಂಬ ಉಗ್ರ ಪ್ರತಿಬಂಧ. ಮೃಗಗಳನ್ನು ಹೆದರಿಸಲು ಬೆಂಕಿ ಹಾಕಿದಾಗ ಅರಣ್ಯ ನಾಶಕ್ಕೆ ಕಾರಣವಾಯಿತೆಂಬ ಖಟ್ಲೆ. ಹೀಗೆ ವನ್ಯಪಶುಗಳಿಂದ ರಕ್ಷಣೆ ಪಡೆಯಲು ಸಾಧ್ಯವಾಗದ ರೈತರ ಗೋಳು. ಹಂದಿಗಳಿಂದ ಬೆಳೆಯನ್ನು ರಕ್ಷಿಸಲು ಬಲವಾದ ಗೂಟಗಳ ಬೇಲಿಬೇಕು. ಬೇಲಿಗೆ ಗೂಟಗಳೆಲ್ಲಿಂದ ಬರಬೇಕು? ೧೯೧೮ರಲ್ಲಿ ಚೀಫ್ ಕನ್ಸರ್ವೇಟರ್ ಒಬ್ಬರು, "ಕೃಷಿ ಇಲಾಖೆಯೇ ಹಂದಿಗಳ ಕಡೆಗೆ ಕೆಲವಾದರೂ ಪ್ರಾಯೋಗಿಕ ಬೇಲಿಗಳನ್ನು ಹಾಕಬಾರದೇ?" ಎಂದು ಮಾಡಿದ ವಿಚಿತ್ರ ಸೂಚನೆ ಗಮನಿಸಬೇಕಾದದ್ದು.

ರೈತರಿಗೆ ಮೇವಿಗೆ ಹುಲ್ಲು, ಕೃಷಿಕಾರ್ಯಕ್ಕೆ ಬೇಕಾಗುವ ಸೊಪ್ಪು, ತರಗೆಲೆ, ಬೇಲಿ ಕಟ್ಟಲು ಮುಳ್ಳು, ಗೂಟ, ಬಿದಿರು, ಬಳ್ಳಿ, ಮರ ಮುಟ್ಟುಗಳನ್ನು ತರಲು ಹಿಂದೆ ನೀಡಿದ್ದ ಸವಲತ್ತುಗಳನ್ನು ಹಿಂದೆಗೆದುಕೊಂಡು, ಈ ಸವಲತ್ತುಗಳನ್ನು ಮಾನ್ಯ ಮಾಡಿಯೇ ಆಕರಿಸಿದ್ದ ಕಂದಾಯವನ್ನು ಕಡಿಮೆ ಮಾಡದೆ, ವನ್ಯಪ್ರಾಣಿಗಳಿಂದ ಸೂಕ್ತ ರಕ್ಷಣೆಯನ್ನೂ ನೀಡದೆ, ಪ್ರತಿಯೊಂದು ಸವಲತ್ತಿಗೂ ಫಾರೆಸ್ಟ್ ಇಲಾಖೆಯ ಜನಪರ ಜವಾಬ್ದಾರಿ ಇಲ್ಲದ ನೌಕರರ ಮುಖ ನೋಡುವಂತೆ ಮಾಡಿದ ಸನ್ನಿವೇಶ ನಿರಂಕುಶವಾದದ್ದಷ್ಟೇ ಅಲ್ಲ, ದೌರ್ಜನ್ಯದ್ದೂ. ತಾವೇ ಪರ್ಮಿಟ್ ನೀಡುವ, ತಾವೇ ಅಪರಾಧ ಪತ್ತೆಹಚ್ಚುವ, ತಾವೇ ಶಿಕ್ಷೆ ನೀಡುವ, ಜನಹಿತದ ಜವಾಬ್ದಾರಿ ಇಲ್ಲದ ಸರ್ವತಂತ್ರ ಸ್ವತಂತ್ರ ಅರಣ್ಯ ಇಲಾಖೆಯಿಂದ ಜನರ ರಕ್ಷಣೆ ಹೇಗೆ? ಈ ಇಲಾಖೆಯ ನೌಕರರು 'ಬ್ಲ್ಯಾಕ್ ಮೇಲ್' ಮಗ್ನರೆಂಬ ಕುಖ್ಯಾತಿಯನ್ನು ಒಬ್ಬ ಅಧಿಕಾರಿ ಆಗಲೇ ಹೇಳಿದ್ದಾರೆ. ೧೯೧೭-೧೮ರ ಅರಣ್ಯ ಇಲಾಖಾ ವರದಿಯಲ್ಲೇ ಅರಣ್ಯ ಇಲಾಖಾ ಗಾರ್ಡ್‌ಗೆ "ಬಾಳಲು ಅವಶ್ಯವಾದ ಸಂಬಳ ದೊರಕದು; ಅವನು ತನ್ನ ಆದಾಯಕ್ಕೆ ಬೇರೆ ಪೂರಕ ಆದಾಯ ಗಳಿಸಬೇಕು," ಎಂದು ಹೇಳಿರುವ ಸಂಗತಿ ಗಮನಿಸಿ.

ವ್ಯಾಪಾರಿಗಳು, ನಗರವಾಸಿಗಳು, ಕೂಲಿಗಳು ಹಾಗೂ ಅದಕ್ಕೂ ಹೆಚ್ಚಾಗಿ ರೈತರು, ಇವರಿಗೆ ನೀಡಿದ ಕಿರುಕುಳದಿಂದ ಯಾವ ಜನ ತಾನೇ ಸರಕಾರಕ್ಕೆ ವಿಧೇಯರಾಗಿದ್ದರು? ತಾವು ಕಟ್ಟಿದ ರೈತರ ಸಂಘದ ಮೂಲಕ ಸರಕಾರದೊಡನೆ ಪತ್ರ ವ್ಯವಹಾರ, ಸಂದರ್ಶನ ನಡೆಸಿದ ರಾವ್‌ಸಾಹೇಬ ಗಣಪತಿರಾವ್ ಮಾಸೂರರೇ ರಾವ್ ಸಾಹೇಬ್ ಗೌರವ ಪದವಿಗೆ ೧೯೨೦ರ ಡಿಸೆಂಬರ್‌ನಲ್ಲಿ ರಾಜೀನಾಮೆ ಕೊಟ್ಟರು. ರಾಘವೇಂದ್ರರಾವ್ ಬಸ್ರೂರರೂ ಇದೇರೀತಿ ಇಂಥ ಪದವಿ ತ್ಯಜಿಸಿದರು. ಸರಕಾರದ ಕಿವಿಡು ಕಿವಿಯ ನೀತಿಗೆ ಇದು ಪ್ರತಿಭಟನೆಯಾಗಿತ್ತು. ('ಕಾನಡಾ ಜಿಲ್ಲೆಯ ವನದುಃಖಗಳೂ ಬೇಸಾಯದ ಅವನತಿಯೂ, ಭಾಗ I, ೧೯೨೪, ಪು. ೨೫).

ಕಾನಡಾ ಧುರೀಣ, ಕಾನಡಾ ವೃತ್ತ (೧೯೧೬), ಅದಕ್ಕೂ ಹಿಂದಿನ ಮುಂಬೈಯ ಹವ್ಯಕಸುಬೋಧ (೧೮೯೫), ಕನ್ನಡ ಸುವಾರ್ತೆ (ಸು. ೧೮೮೨), ಮರಾಠಿ ಕೇಸರಿ (೧೮೮೧), ಕಾಳ್ ಹಾಗೂ ಬಾಂಬೇ ಕ್ರಾನಿಕಲ್‌ಗಳು ಓದಬಲ್ಲ ಜನರಲ್ಲಿ ಜಾಗೃತಿ ಮೂಡಿಸಲು ಮಾಡಿದ ಯತ್ನಕ್ಕೆ ಭೂಮಿ ಹದವಾಗಿತ್ತು. ಕಾಂಗ್ರೆಸ್ ೧೯೨೦ರ ನಂತರ ತೀವ್ರ ಪ್ರಚಾರಕ್ಕೆ ಮುಂದಾದಾಗ ಬೀಜಾರೋಪಣೆಯಾಗಿ ವಿಶಾಲ ರಾಷ್ಟ್ರೀಯ ವೃಕ್ಷಗಳ ಬೆಳೆಗೆ ಭೂಮಿ ಆಗಲೇ ಸಿದ್ಧವಾಗಿತ್ತು. ಸರಕಾರದ ಬಗೆಗಿನ ಬಹುಮುಖ ಉಗ್ರ ತೀವ್ರ ಅಸಮಾಧಾನವೇ ಈ ಭೂಮಿಯನ್ನು ಹದಗೊಳಿಸಿದ್ದ ಸನ್ನಿವೇಶ !

ಆಧಾರ ಗ್ರಂಥಗಳು

೧. ಕಾನಡಾ ಜಿಲ್ಲೆಯ ವನದುಃಖಗಳೂ ಬೇಸಾಯದ ಅವನತಿಯೂ (ಕಾನಡಾ ಧುರೀಣದಿಂದ ಅವತರಿಸಿದ್ದು), ಭಾಗ-೧, ಕುಮಟಾ, ೧೯೨೪ (?)

೨. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು (ಸಂ : ಸೂರ್ಯನಾಥ ಕಾಮತ್), ಮೈಸೂರು, ಭಾಗ-೧ ಮತ್ತು ೩

೩. ದೇಶಪಾಂಡೆ ಗಂಗಾಧರರಾಯರು (ಆತ್ಮಚರಿತ್ರೆ), ಅನುವಾದ : ರಾಮಚಂದ್ರ ವಡವಿ, ಹುಬ್ಬಳ್ಳಿ, ೧೯೬೪

4. *Gazetteer of the Bombay Presidency, Kanara* (Ed : James M. Campbell), Two Parts, 1883

5. *Karnataka State Gazetteer – Uttara Kannada District* (Ed : Suryanath U. Kamath), 1985

6. Buchanan, Francis : *A Journey Through Mysore, Malabar and Canara*, Two Parts, Madras, 1870

7. *A Representation to the Collector*, Treating at Length some of the Grievances Embodied in the Preceding Statement, Raosaheb G.R. Masur, Kumta, 1918

8. *Forest Grievances in North Kanara*, Pamphlet-No. I, G. R. Masur, Kumta, 1927

9. *Forest Grievances in North Kanara*, Pamphlet-No. II, Kumta, 1927

SUMMARY OF ARTICLES

The City of Kopana : A Historical Centre

— Dr. B. V. Shirur

The present-day Koppal, ancient Kopana, is described as the "Gateway to the South" and the Indrakeela Parvata of Mahabharata times. Two Ashokan edicts are found here. Near Koppal, at Chikka Sindogi 5,534 punch-marked Shatavàhana silver coins were found and 'Kupanachama' in Early Kadamba records is identified as this place. Badami Chalukya records are also found in this taluk. Nripatunga mentions Kopana as one of the cardinal points of Kannada core country. Krishna III's commander Shankaraganda built a Jinalaya here. Two Kalachuri records are found at Madiganuru near Koppal. Hoysala Shantala and her brother's son Echiraja also built Jinalayas here, and Kopana was a renowed Jaina pilgrim centre. The place was a centre of activity of Kumara Rama too. The place was under Vijayanagara in the times of Krishnadevaraya and Ramaraya. Adilshahis called it Muzafarnagar and Shivaji gave it as a jahgir to one Subhanrao. Haider Ali conquered it and called it Sultangad. After British occupation, there were anti-British risings by one Veerappa and in 1858 Mundargi Bheemrao made it the centre of his revolt. Nizam gave it as jahagir to Salar Jung. A Shilahara branch has called itself as 'Kopanapuravaradheeshwara'. It was a great Jaina centre, described as having 770 Jinalayas. It was a Veerashaiva centre too, and Holeya Hampiah's record dated 1086 if found here. Famous Itgi temple of the Kalyana Chalukyas is just 20 miles away from the place.

Godfrey Weigle of the Basel Mission (1816-1855)

– Dr. Srinivas Havanur

Born at Tzel in Germany in 1816, Weigle was educated at the Tibinjen University, studied Sanskrit and Arabic and started his career as a teacher in the Basel Mission. Reaching India in 1840, he worked with Herman Moegling (whose stepmother was later Weigle's step-mother), and later, on Weigle's early death, Moegling married Weigle's widow. Weigle soon learnt Kannada and Tulu, started printing in Kannada at Mangalore in 1842 (which was the nucleus of the later famous Basel Mission Press), and when sent to the

Nilgiris, he improved Garrett's Kannada translation of Bhagavadgita, translated Banyan's "Pilgrim's Progress" into Kannada in verse, and these are early poems in modern Kannada. He also wrote some early modern lyric poems in Kannada in the "Chraista Geetegalu", 1848. He wrote the first modern history of Kannada language in German for the periodical ZDMG. "Karnataka Shabdamanjari" by him is like Amarakosha. He revised the Kannada translation of the New Testament single-handed, sponsored by the Madras Auxiliarly Bible Society. Later, revision of Old Testament was also assigned to him. As he was of poor health, he died early in 1855. He was a notable person who enriched Kannada language by his efforts during the Dawn of Renaissance of Kannada literature.

Marturu Record of Vijnyneshwara

—The late Dr. V. S. Kulkarni

The author of the famous commentary on Hindu law, Vijnyaneshwara wrote his work Mitakshara at Kalyana at the court of Vikramaditya VI. This inscription speaks of him as born at Maseyamadu in Attalinadu, a place near Kalyana. The inscription, giving details of his parentage etc. Was noticed by Dr. P. B. Desai in *Prachina Karnataka*, No. 1.2 in 1932. The late Dr. V. S. Kulkarni of Humnabad had prepared the text of it for publication. The text of the record is published for the first time here. Marturu is in Gulbarga tq. and the record is of 6-1-1123.

'Halebidu Puratana Charitre' : A Review

Dr, G. S. Dikshit

A Kannada book of the above name was written by Shivananjegowda, Patel of Halebidu in 1909 and printed in Bangalore Govt. Press. The book contains many details not taken note of by modern historians. Kumara Rama's ancestors were sent from Dwarasamudra and they were Hoysala officers. But they later fought aganst the Hoysalas. Halebidu was given a new look by repairining many temples there by Devaraya II. It gives a description of Halebidu, and this can be a good guide for conducting archaeological excavations. The utility of this rare book is underlined here.

Rare Image of Krishnadevaraya at Hampe

Dr. L. Rajashakhar

A relief sculpture on one of the pillars Krishnaswamy temple at Hampi is identified as of Krishnadevaraya, standing *tribhanga* posture, joining his palms in front of the Balakrishna statue. The image resembles the one at the Nataraja temple of Chidambaram. This is a rare image of the king, engaged in divine service.

Kings of Pomburchanadu

K. Jagannatha Shastry

The ancient town Hombuja (present Humcha) in Shimoga district is a famous

pilgrim centre for the Jainas. There are 36 inscriptions here ranging between 950 and 1296 in the four bastis and one Shivalaya. An effort is made here to trace the history of the rulers of Ugra Vamsha till the merger of the territory into the Hoysala Kingdom.

New Stone Age in Dakshina Kannada

Dr. B. Vasantha Shetty

The Late Dr. P. Gururaja Bhat and Dr. A. Sundara brought to light many megaliths in Dakshina Kannada after 1970. Till then people had only the story of Parashurama (creating this coastal region by throwing his battle axe) to narrate about the beginning of the history of this district. Scholars even thought that this was a reminiscent of the iron age man setting in this region after clearing the forest with the help of the iron axe. Though Dr. Rajendran discovered microliths in Uppinangadi and Manai region in 1983 there was no evidence of Neolithic culture in Dakshina Kannada. Now for the first time a neolithic stone axe has been discovered near Bhandimatha (to the east of Barakuru) in Udupi taluk. It is 12.3 cms long and 6.4 cms broad and slightly rough at the top. Many more evidences of Neolithic settlement can be discovered here by further survey and research. The present discovery proves the existence of neolithic culture in Dakshina Kannada district.

Coins Mentioned in 'Manaumi Chaupada'

Dr. A. V. Narasimha Murthy

Inscriptions and literary texts provied useful material for the study of numismatics. But professional numismatists have not made use of these two sources so far. Hence it would be desirable to start a line of enquiry on the present lines. As a case study a Kannada work by name *Manaumi Chaupada* of 1730 A.D. has been examined here. The author Nanjundayya flourished in the court of Krishnaraja Wodeyar of Mysore. This work refers to various coin-terms which have been examined here.

These terms are Sivaraya Varaha, Gerusoppe, Ramachandra Jadeya, gutti honnu Pattanada honnu, bennemuddeya nanya, gajabentekara honnu, Rotti, Thimmanayakana honnu, Krishnanayakana honnu, Narasipurada honnu, Ramamudrike, Tirupati hana, Ikkeri varaha, Bilugi chakra, Temki, gadyana, adda, visa and Bele. These terms have been identified with the coins issued by various kings in Karnataka. For example Tirupati hana refers to coins of Krishnadevaraya and Srirangaraya, gajabentekara honnu with those of Devaraya II. Thus the work gives interesting information on numismatics of Karnataka.

New Light on the History of the Chalukya and Hoysala Dynasties

Seetarama Jagirdar

By carefully re-reading an inscription from Belur (EC, Revised, Belur 93) it is pointed out that the Kalyana Chalukya ruler Tailapa III was murdered by Hoysala Narasimha II himself. The record clearly says that Taila was cut down by a sharp sword by Pratapa Narasimha.

Rare Historical Documents of Coastal Karnataka

Dr. K. G. Vasantha Madhava

The rare historical documents studied here are a few paper documents and kadatas. These documents are available in the hands of private individuals and religious institutions. These rare historical documents throw interesting information on political events, administrative set-up, religious conditions and socio-economic set-up in coastal Karnataka between the seventeeth and the early decade of the nineteenth centuries. These documents are original sources for the history of coastal Karnataka in the period mentioned above.

The Savanur Nawabs

Dr. K. N. Chitnis

With the help of original records like *Dilerjangi* and other treaty records in Marathi, a histoay of the Savnur Nawabs (1677-1947) is outlined here. Important political developments of their times are also discussed.

Bailakonenahalli Stone Inscription

H. S. Gopalarao

Discovered in a field at Bailakonenahalli in Nelamangala taluk, this Hoysala record of the days Ballala III dated 1329 A.D. speaks of a grant of Mudugere by Viraya to some individuals. Purpose of the grant is not clear. Text of the Kannada record is given.

Two Wars of Chitradurga Nayakas

A. Srishaila Aradhya

When we study the history of Chitradurga rulers, two wars waged by them attract our attention. The first one among them was in 17th Century, and the second one was in 10th century. The first war was not fought during the reign of any king. We have to seek its roots from the Anaji Battle. The Nayakas of Chitradurga and the Palayagars of Harapanahalli were not in good terms from the beginning. If any of the neighbouring dynasties became strong, the others had to face them. It is said that Bichugatti Bharamanna Nayaka built the fort of Anaji-Haluru from the blood of the soldiers of Harapanahalli ! To hear that they pasted the that they pasted the blood-mire to the fort in normal situations is diabolical to any one. But that was the retaliatory attitude of the times.

Another incident is about the fight between Hyder Ali and the last Madakari Nayaka at Anavatti. The Nayaka of Chitradurga fought against Hyder Ali, for the Peshwas, together with their army. When the Peshwas and Madakari Nayaka won the battle of Anavatti, pile of the skulls of the enemy soldies was prepared and with this as the seat, the Nayaka had himself anointed with the blood of the enemy soldiers.

The British Policies that Provoked Uttara Kannada

Dr. Suryanath U. Kamath

The epic No-Tax campaign of Uttara Kannada (1930-34) is too known. Though it is only two taluks (Siddapur and Aukola) that successfully launched the campaign and it is only some 1,000 families which stuck to their guns till the end in not paying land revenue, the whole society whole-heartedly supported them. The properties of the No-Taxers were confiscated, but no local person came forward to buy them when offered for sale by auction. This shows the united spirit. The whole district was anti-British. How the various policies of the British such as the Forest Laws, changes introduced in their implementation from time to time by forgetting or ignoring privileges granted to the peasants at the time of Revenue Settlement, etc., resulted in the harassment of the peasants leading to even emigration and fall in population are discussed at length.

"ಶ್ರೀ ಗಂಡುಗಲಿಯವರ ವಸ್ತು ಸಂಗ್ರಹ ಎಷ್ಟು ಅಪೂರ್ವವಾದುದೋ, ಅವರ ವಿಷಯ ಸಂಗ್ರಹವೂ ಅಷ್ಟೇ ಅಪೂರ್ವವಾದುದು. ಒಂದು ರೀತಿಯಲ್ಲಿ ಶ್ರೀ ಗಂಡುಗಲಿ ಚಿತ್ರದುರ್ಗದ ಬಗ್ಗೆ ನಡೆದಾಡುವ ವಸ್ತುಕೋಶ. ಆದರೆ ನಮ್ಮ ಜನ ಅವರ ವಸ್ತು ಮತ್ತು ವಿಷಯ ಸಂಗ್ರಹದಿಂದ ಎಷ್ಟು ಪ್ರಯೋಜನ ಪಡೆಯಬಹುದೋ ಅಷ್ಟನ್ನು ಪಡೆಯದಿರುವುದು ವಿಷಾದದ ವಿಷಯ"

—ತ.ರಾ.ಸು.

ನಾಯಕರ ಕಾಲದ ಸಂಸ್ಕೃತಿಯ ದರ್ಶನಕ್ಕೆ

ಸರ್ವರನ್ನೂ ಸ್ವಾಗತಿಸುವ


ಗಂಡುಗಲಿ ಮದಕರಿನಾಯಕ ಪ್ರಾಚ್ಯವಸ್ತು ಸಂಗ್ರಹಾಲಯ

ಮದಕರಿ ನಿಲಯ, ಉತ್ಸವಾಂಬಾ ದೇವಾಲಯದ ಹಿಂಭಾಗ


ಚಿತ್ರದುರ್ಗ ೫೭೭ ೫೦೧


ಸಂಸ್ಥಾಪಕರು/ಟಿ. ಎಸ್. ಗಂಡುಗಲಿ

Karnataka Tourism











HAVE A DELIGHTFUL TIME IN THE CITY OF MANY DELIGHTS!

Founded in 1537 by Kempegowda, Bangalore today is a city of many many magnificent memories, many delights.

Its lovely gardens – Lalbagh, founded by Hyder Ali and the Cubbon Park with its Children's Park and Bal Bhavan – are a blooming storehouse of over a thousand kinds of flora. And of course the famous 'Masala Dosa' of the Mayura Restaurant awaits you.

The majestic Vidhana Soudha is reputed to be one of the grandest architectural marvels of Asia. Ulsoor Lake is the city's boating centre. Nightfall transforms it into a magical land, twinkling with coloured lights.

A 20-km drive from the city will take you to the famous Bannerghatta National Park where lions roam free and visitors travel in closed jeeps! Ramohalli, 25 kms out of Bangalore, boasts of the largest Banyan tree in the whole of Karnataka. Nandi Hills, the summer resort of the Maharajahs, is only 60 kms away...

Come to Bangalore – and have a delightful time in the city of many delights!

Karnataka Tourism

9, St. Marks Road, Bangalore 560 001
Phone: 579186/579139

